www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾ ವಾಣಿ
ಭೂಕಂಪ ವಲಯಗಳು ಮತ್ತು ಅವುಗಳ ಸ್ಥಿತಿಗತಿ

ಆಳ-ಅಗಲ
ಶುದ್ಧ ಗಂಗೆ ಕನಸೇ?

ಕಾರ್ಮಿಕರಿಗೆ ವಂಚನೆ: ಪ್ರಕರಣ ಹೆಚ್ಚಳ 5

‘ಪತನದ ಹಾದಿಯಲ್ಲಿ ರಾಜ್ಯದ ಆರ್ಥಿಕತೆ’ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
75,939	22,932	₹90,220 (ಬೆಂಗಳೂರು)	₹1.02 ಲಕ್ಷ (ಬೆಂಗಳೂರು)

ಬದಲಿ ನಿವೇಶನ ಹಂಚಿಕೆ ಪ್ರಕರಣ: ಸಿ.ಎಂ ಸೇರಿ ನಾಲ್ವರು ಆರೋಪಿಗಳ ವಿರುದ್ಧದ ತನಿಖೆ ಪೂರ್ಣ

ಮುಡಾ: ಸಿದ್ದರಾಮಯ್ಯ ನಿರಾಳ?

ಪ್ರಜಾವಾಣಿ ವಾರ್ತೆ



ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಲಾದ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ. ಪಾರ್ವತಿ ಮತ್ತು ಇನ್ನಿಬ್ಬರಿಗೆ ಲೋಕಾಯುಕ್ತ ಪೊಲೀಸರು ‘ಬಿ’ ರಿಪೋರ್ಟ್ ನೀಡುವ ಸಾಧ್ಯತೆ ಇದೆ.

ಪ್ರಮುಖದ ದೂರುದಾರ ಸ್ನೇಹಮಯಿ ಕೃಷ್ಣ ಅವರಿಗೆ, ಪ್ರಕರಣದ ತನಿಖಾಧಿಕಾರಿಯೂ ಆಗಿರುವ ಮೈಸೂರು ಲೋಕಾಯುಕ್ತ ಎಸ್‌ಪಿ ಟಿ.ಜೆ. ಉದೇಶ್ ನೀಡಿರುವ ನೋಟಿಸ್ ಇದನ್ನು ಪುಷ್ಟೀಕರಿಸುವಂತಿದೆ.

‘ತನಿಖಾ ವರದಿಯನ್ನು ತಾವು ವಿರೋಧಿಸುವುದಿದ್ದರೆ ನೋಟಿಸ್ ತಲುಪಿದ ಒಂದು ವಾರದೊಳಗೆ ನ್ಯಾಯಾಲಯದಲ್ಲಿ ತಮ್ಮ ವಿರೋಧ ದಾಖಲಿಸಬಹುದು. ಇಲ್ಲದಿದ್ದರೆ, ನಾಲ್ವರು ಆರೋಪಿಗಳ ವಿರುದ್ಧದ ಆರೋಪ ಸಾಬೀತುಪಡಿಸುವ ಸಾಕ್ಷ್ಯಾಧಾರಗಳು ಇಲ್ಲ ಎಂಬ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತದೆ’ ಎಂದೂ ನೋಟಿಸ್‌ನಲ್ಲಿ ಉಲ್ಲೇಖಿಸಿದ್ದಾರೆ.

5ನೇ ಪುಟ ನೋಡಿ

ವಾರದಲ್ಲಿ ತಕರಾರು ಸಲ್ಲಿಕೆ: ಸ್ನೇಹಮಯಿ ಕೃಷ್ಣ

‘ಲೋಕಾಯುಕ್ತ ಅಧಿಕಾರಿಗಳ ಮೇಲಿನ ನಮ್ಮ ಅನುಮಾನ ನಿಜವಾಗಿದೆ. ಸಾಕ್ಷ್ಯಾಧಾರಗಳನ್ನು ಕೊಟ್ಟಿದ್ದರೂ ಸೂಕ್ತ ತನಿಖೆ ನಡೆಸಿಲ್ಲ. ಆತ್ಮಸಾಕ್ಷಿ ಮಾರಿಕೊಂಡ ಅಧಿಕಾರಿಗಳಷ್ಟೇ ಇಂತಹ ವರದಿ ನೀಡಲು ಸಾಧ್ಯ’ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಪ್ರತಿಕ್ರಿಯಿಸಿದರು.

‘ಬಿ- ರಿಪೋರ್ಟ್ ನೀಡುತ್ತಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ. ಒಂದು ವಾರದಲ್ಲಿ ನೋಟಿಸ್‌ಗೆ ತಕರಾರು ಸಲ್ಲಿಸಿ, ನ್ಯಾಯಾಲಯದಲ್ಲಿ ನನ್ನ ಆರೋಪವನ್ನು ಸಾಬೀತು ಮಾಡುತ್ತೇನೆ’ ಎಂದರು. ‘50:50 ಅನುಪಾತದ ತನಿಖೆಯನ್ನು ಇನ್ನೂ ಪೂರ್ಣಗೊಳಿಸಿಲ್ಲ. ತರಾತುರಿಯಲ್ಲಿ ಅಂತಿಮ ವರದಿ ಸಲ್ಲಿಸುತ್ತಿರುವುದು ಕಾನೂನಿನ ಉಲ್ಲಂಘನೆ. ಪಾರ್ವತಿ ಅವರಿಗೆ 50:50 ಅನುಪಾತದ ಅಡಿ ನಿವೇಶನ ಹಂಚಿಕೆ ಅಧಿಸೂಚನೆಯ ದಾಖಲೆ ನೀಡಿದರೆ ನಾನು ಹೋರಾಟ ನಿಲ್ಲಿಸಿ ಜೈಲಿಗೆ ಹೋಗಲು ಸಿದ್ಧ’ ಎಂದು ಹೇಳಿದರು.



ಪ್ರತಿಪಕ್ಷಗಳು ಸಿದ್ದರಾಮಯ್ಯ ಹೆಸರಿಗೆ ಮಸಿ ಬಳಿಯುವ ಪ್ರಯತ್ನವನ್ನು ಇನ್ನಾದರೂ ಬಿಡಬೇಕು. ಸ್ನೇಹಮಯಿ ಕೃಷ್ಣರಂತಹ ಸಹ ಕಲಾವಿದರಿಗೆ ದುಡ್ಡು ಕೊಟ್ಟು ಹೋರಾಟ ನಡೆಸುವುದನ್ನು ನಿಲ್ಲಿಸಬೇಕು

ಎಂ. ಲಕ್ಷ್ಮಣ, ಕೆಪಿಸಿಸಿ ವಕ್ತಾರ

ಐತಿಹಾಸಿಕ ದುರಂತ: ಅಶೋಕ



ಒಂದೇ ಒಂದು ದಿನ ನೆಪಮಾತ್ರಕ್ಕೆ ಸಿ.ಎಂ ಸಿದ್ದರಾಮಯ್ಯ ಹಾಗೂ ಅವರ ಪತ್ನಿಯನ್ನು ವಿಚಾರಣೆ ನಡೆಸಿ ಕ್ಲೀನ್ ಚಿಟ್ ನೀಡಿರುವುದು ರಾಜ್ಯ ಕಂಡ ‘ಐತಿಹಾಸಿಕ ದುರಂತ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.

‘ಭ್ರಷ್ಟ ಕಾಂಗ್ರೆಸ್ ಸರ್ಕಾರದಲ್ಲಿ ‘ನ್ಯಾಯ’ ಮಣ್ಣುಪಾಲಾಗಿದೆ. ಸಮರ್ಪಕ ತನಿಖೆಯನ್ನೇ ನಡೆಸದೆ ಕ್ಲೀನ್ ಚಿಟ್ ನೀಡಿ ‘ನ್ಯಾಯದ ಸಮಾಧಿ’ ಮಾಡಿದೆ. ಕೋರ್ಟ್‌ಗೆ ಸಾಕ್ಷ್ಯ ಒದಗಿಸದೆ ಪ್ರಕರಣ ಮುಚ್ಚಿ ಹಾಕಿ ಸತ್ಯದ ಸಮಾಧಿ ಮಾಡುವ ಸಿದ್ದರಾಮಯ್ಯನವರ ಪ್ರಯತ್ನಕ್ಕೆ ಜಯ ಸಿಗುವುದಿಲ್ಲ’ ಎಂದಿದ್ದಾರೆ.

ಸಿಬಿಐ ತನಿಖೆ ನಡೆಸಲಿ: ವಿಜಯೇಂದ್ರ



‘ಮುಖ್ಯಮಂತ್ರಿ ಅವರಿಗೆ ನೀಡಿರುವ ಕ್ಲೀನ್ ಚಿಟ್ ನಿರೀಕ್ಷಿತ. ತಾವೇ ನೇಮಿಸಿದ ಅಧಿಕಾರಿಗಳಿಂದಲೇ ನಡೆಸಲಾಗುವ ತನಿಖೆಯಲ್ಲಿ ಮುಖ್ಯಮಂತ್ರಿ ಅವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಸಾಧ್ಯವೇ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಶ್ನಿಸಿದ್ದಾರೆ.

‘ಹಗರಣದ ಪಾರದರ್ಶಕ ತನಿಖೆ ನಡೆಯಬೇಕೆಂದರೆ ಮುಖ್ಯಮಂತ್ರಿ ಹಾಗೂ ರಾಜ್ಯ ಸರ್ಕಾರದಿಂದ ಅಂತರ ಕಾಯ್ದುಕೊಂಡ ತನಿಖಾ ಸಂಸ್ಥೆಯಿಂದ ಮಾತ್ರ ಸಾಧ್ಯ ಎಂಬುದು ನ್ಯಾಯ ನಿರೀಕ್ಷಿಸುವ ಪ್ರತಿಯೊಬ್ಬರೂ ಒಪ್ಪುವ ಮಾತು. ತನಿಖೆಯನ್ನು ಸಿಬಿಐಗೆ ವಹಿಸಬೇಕು’ ಎಂದಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ದೆಹಲಿಗೆ ಮತ್ತೆ ಮಹಿಳಾ ಸಾರಥ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಶಾಲಿಮಾರ್ ಬಾಗ್ ಕ್ಷೇತ್ರದ ಶಾಸಕಿ ರೇಖಾ ಗುಪ್ತಾ ಅವರು ದೆಹಲಿ ಬಿಜೆಪಿಯ ಶಾಸಕಾಂಗ ಪಕ್ಷದ ನಾಯಕಿಯಾಗಿ ಬುಧವಾರ ರಾತ್ರಿ ಆಯ್ಕೆಯಾಗಿದ್ದಾರೆ. ದೆಹಲಿ ಮುಖ್ಯಮಂತ್ರಿಯಾಗಿ ಅವರು ಗುರುವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

32 ವರ್ಷಗಳ ವಿಧಾನಸಭಾ ಇತಿಹಾಸದಲ್ಲಿ ಮುಖ್ಯಮಂತ್ರಿಯಾಗುತ್ತಿರುವ ನಾಲ್ಕನೇ ಮಹಿಳೆ ಅವರು. ಬಿಜೆಪಿಯ ಸುಷ್ಮಾ ಸ್ವರಾಜ್, ಕಾಂಗ್ರೆಸ್‌ನ ಶೀಲಾ ದೀಕ್ಷಿತ್ ಹಾಗೂ ಎಎಪಿಯ ಆತಿಶಿ ಅವರು ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದರು. ಗುರುವಾರ ಮಧ್ಯಾಹ್ನದ ಸುಮಾರಿಗೆ ರಾಮಲೀಲಾ ಮೈದಾನದಲ್ಲಿ ನಡೆಯುವ ಸಮಾರಂಭದಲ್ಲಿ ಅವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಅವರೊಂದಿಗೆ ಆರು ಸಚಿವರು ಸಹ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ.

9ನೇ ಪುಟ ನೋಡಿ


ರೇಖಾ ಗುಪ್ತಾ

ಅನ್ನಭಾಗ್ಯ: ನಗದು ಬದಲು ಅಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ನಭಾಗ್ಯ ಯೋಜನೆಯ ಪಡಿತರ ವಿತರಣಾ ವ್ಯವಸ್ಥೆ ಅಡಿ ಇದೇ ತಿಂಗಳಿನಿಂದ ಪ್ರತಿ ಫಲಾನುಭವಿಗೆ 10 ಕೆ.ಜಿ ಅಕ್ಕಿ ಸಿಗಲಿದೆ.

ಈ ಕುರಿತು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ‘ಗ್ಯಾರಂಟಿ ಯೋಜನೆಯ ಘೋಷಣೆಯಂತೆ ರಾಜ್ಯ ಸರ್ಕಾರ 2023ರ ಜುಲೈನಿಂದ ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡುವ ಪ್ರಕ್ರಿಯೆ ಆರಂಭಿಸಿತ್ತು. ಈ ತಿಂಗಳಿನಿಂದಲೇ ಅಕ್ಕಿ ಪೂರೈಸಲು ನಿರ್ಧರಿಸಲಾಗಿದೆ. ನಗದು ವರ್ಗಾವಣೆ ಸ್ಥಗಿತಗೊಳಿಸಲಾಗುತ್ತಿದೆ. ನವೆಂಬರ್ ಹಾಗೂ ಡಿಸೆಂಬರ್ ಬಾಕಿಯನ್ನು ಜಮೆ ಮಾಡಲಾಗುವುದು. ಜನವರಿಯಲ್ಲಿ ನೀಡಬೇಕಿದ್ದ ಹಣಕ್ಕೆ ಬದಲಾಗಿ ಫೆಬ್ರುವರಿ ಪಡಿತರದಲ್ಲಿ 5 ಕೆ.ಜಿ. ಹೆಚ್ಚುವರಿ ಅಕ್ಕಿ ನೀಡುತ್ತಿದ್ದು, ಈ ತಿಂಗಳು 15 ಕೆ.ಜಿ. ಅಕ್ಕಿ ದೊರೆಯಲಿದೆ. ನಂತರ ನಿರಂತರವಾಗಿ 10 ಕೆ.ಜಿ. ವಿತರಿಸಲಾಗುತ್ತದೆ ಎಂದರು.

2023–24ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ ಅಡಿ ಪ್ರತಿ ತಿಂಗಳು ಅಗತ್ಯವಿದ್ದ 2.29 ಲಕ್ಷ ಅಕ್ಕಿ ಪೂರೈಸಲು ನಿರಾಕರಿಸಿತ್ತು. ಹಾಗಾಗಿ, ಅಕ್ಕಿ ಬದಲು ನಗದು ನೀಡಲು ನಿರ್ಧರಿಸಲಾಗಿತ್ತು. ಈಗ ಕೆ.ಜಿ.ಗೆ ₹22.90ರಂತೆ ಜೂನ್‌ವರೆಗೆ ಪೂರೈಕೆ ಮಾಡಲು ಕೇಂದ್ರ ಒಪ್ಪಿಗೆ ನೀಡಿದೆ ಎಂದರು.



5ನೇ ಪುಟ ನೋಡಿ


ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಸಂಘ (ರಿ.) ದ
ಅಧ್ಯಕ್ಷರಾಗಿ 5ನೇ ಬಾರಿಗೆ ಆಯ್ಕೆಯಾಗಿರುವ
ಡಾ।। ವಾಣಿಶ್ರೀ ವಿಶ್ವನಾಥ್ ರವರಿಗೆ
ಯಲಹಂಕ ಕ್ಷೇತ್ರದ ಮತದಾರರ ಪರವಾಗಿ ಅಭಿನಂದನೆಗಳು
ಹಾಗೂ ಎಲ್ಲಾ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಿದ
ಎಲ್ಲಾ ಪಕ್ಷದ ಮುಖಂಡರು ಹಾಗೂ ಸರ್ವಸದಸ್ಯರಿಗೆ ಧನ್ಯವಾದಗಳು
ಎ. ತಿಮ್ಮರಾಯಗೌಡ
ಚಂದ್ರು.ಎ
ಕೆ.ಆರ್.ಪುಟ್ಟರಾಜು
ಮುನಿಯಪ್ಪ ಎನ್. ಕೂರ್ಲಪ್ಪ
ವೈ.ಕೆ. ಮುರಾರಿರಾಮ
ಮಂಜುನಾಥ್.ಎಂ.
ಎನ್. ಶಿವಕುಮಾರ್
ಎಂ.ಪಿ. ಈಶ್ವರಾಚಾರಿ
ಎಸ್.ಎನ್. ರಾಮಚಂದ್ರ ರೆಡ್ಡಿ
ಶ್ರೀಮತಿ ಜಿ.ಎಸ್. ಪುಷ್ಪಲತ
ಶ್ರೀಮತಿ ಅಮರಾವತಿ
ಶುಭಕೋರುವವರು : ನಿರ್ದೇಶಕರು ರೈತರ ಸೇವಾ ಸಹಕಾರ ಸಂಘ (ರಿ.) ಸಿಂಗನಾಯಕನಹಳ್ಳಿ

ಬೇಡಿಕೆ ಈಡೇರಿಸದಿದ್ದರೆ ಕೆಲಸ ಸ್ಥಗಿತ: ಬಿಬಿಎಂಪಿ ಕಂದಾಯ ವಿಭಾಗದ ಸಿಬ್ಬಂದಿ ಎಚ್ಚರಿಕೆ

‘ಕೆಲಸದ ಒತ್ತಡ ತಗ್ಗಿಸುವಂತೆ ಮನವಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸದ ಒತ್ತಡ ಕಡಿಮೆ ಮಾಡುವುದೂ ಸೇರಿದಂತೆ ತಮ್ಮ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಬಿಬಿಎಂಪಿಯ ಕಂದಾಯ ವಿಭಾಗದ ಸಿಬ್ಬಂದಿ ಪಾಲಿಕೆಯ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್ ಅವರು ಪತ್ರ ಬರೆದಿದ್ದು, 13 ಬೇಡಿಕೆಗಳನ್ನು ಮಂದಿಟ್ಟಿದ್ದಾರೆ. ಬೇಡಿಕೆಗಳನ್ನು ಶೀಘ್ರ ಈಡೇರಿಸದಿದ್ದರೆ ಎಲ್ಲ ರೀತಿಯ ಕೆಲಗಳನ್ನು ಸ್ಥಗಿತಗೊಳಿಸಿ, ಹೋರಾಟ ಆರಂಭಿಸಲಾಗುತ್ತದೆ ಎಂದೂ ಎಚ್ಚರಿಸಿದ್ದಾರೆ.

‘ಕಚೇರಿ ಸಮಯ ಮುಗಿದ ನಂತರ ಸಂಜೆ ಹಾಗೂ ರಾತ್ರಿಯೂ ಸಭೆಗಳನ್ನು ನಡೆಸಿ, ಕಂದಾಯ ಸಿಬ್ಬಂದಿಗೆ ಒತ್ತಡ ಹಾಕಲಾಗುತ್ತಿದೆ. ಇ- ಖಾತಾ ಹಾಗೂ ಆಸ್ತಿಗಳ ಬೀಗಮುದ್ರೆಗೆ ಯಾವುದೇ ಸೌಲಭ್ಯ ನೀಡದೆ ಕಾರ್ಯನಿರ್ವಹಿಸಲು ಸೂಚಿಸಲಾಗುತ್ತಿದೆ’ ಎಂದು ಮುಖ್ಯ ಆಯುಕ್ತರಿಗೆ ಬರೆದಿರುವ ಪತ್ರದಲ್ಲಿ ದೂರಲಾಗಿದೆ.

‘ಕಂದಾಯ ವಿಭಾಗದ ಹಿತದೃಷ್ಟಿ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಸಮಸ್ಯೆಗಳನ್ನು ಕೂಡಲೇ ಪರಿಹರಿಸಬೇಕು. ಇಲ್ಲದಿದ್ದರೆ, ನಮ್ಮ ಮುಂದಿನ ಹೋರಾಟಕ್ಕೆ ಈ ಮನವಿಪತ್ರವನ್ನೇ ತಿಳಿವಳಿಕೆ ಪತ್ರವೆಂದು ಭಾವಿಸಬೇಕು’ ಎಂದು ತಿಳಿಸಿದ್ದಾರೆ.

‘ಇ-ಆಸ್ತಿ ತಂತ್ರಾಂಶದಲ್ಲಿ ಖಾತಾ ಪ್ರಮಾಣಪತ್ರ ಪಡೆಯಲು ನೂರಾರು ಅರ್ಜಿಗಳನ್ನು ನಿತ್ಯ ಸ್ವೀಕರಿಸಲಾಗುತ್ತಿದೆ. ಆ ದಿನವೇ ಅರ್ಜಿಗಳನ್ನು ವಿಲೇವಾರಿ ಮಾಡಲು ಕಂದಾಯ ವಿಭಾಗದ ವಿಶೇಷ ಆಯುಕ್ತರು ಒತ್ತಡ ಹಾಕುತ್ತಿದ್ದಾರೆ. ದಾಖಲೆ ಪರಿಶೀಲನೆಗೆ ಸಮಯ ಸಾಕಾಗುತ್ತಿಲ್ಲ. ಆದ್ದರಿಂದ ಈ ಅರ್ಜಿ ಪರಿಶೀಲಿಸಲು ಏಳು ದಿನ ಅವಕಾಶ ನೀಡಬೇಕು. ಮ್ಯುಟೇಷನ್ ಅರ್ಜಿ ಪರಿಶೀಲನೆ ಅವಕಾಶ ಇಲ್ಲದಿರುವ ಕಾರಣದಿಂದ ಯಾವುದಾದರೂ ಪ್ರಕರಣ ಅಥವಾ ನ್ಯಾಯಾಲಯದಲ್ಲಿ ದಾವೆ ಇದ್ದರೆ ಪರಿಶೀಲಿಸಲು ಸಾಧ್ಯವಿರುವುದಿಲ್ಲ. ಇದರಿಂದ ನ್ಯಾಯಾಲಯಕ್ಕೆ ಉತ್ತರ ನೀಡಬೇಕಾಗುತ್ತದೆ’ ಎಂದಿದ್ದಾರೆ.

‘ವೆಬ್‌ಸೈಟ್‌ನಲ್ಲಿ ಸಹಾಯಕ ಕಂದಾಯ ಅಧಿಕಾರಿ ಹಾಗೂ ಕಂದಾಯ ಅಧಿಕಾರಿಗಳ ಮೊಬೈಲ್ ಸಂಖ್ಯೆಯನ್ನು ಪ್ರಕಟಿಸಿರುವುದರಿಂದ ಹಗಲು- ರಾತ್ರಿ ಕರೆಗಳು ಬರುತ್ತಿದ್ದು, ವೈಯಕ್ತಿಕ ಜೀವನಕ್ಕೆ ತೊಂದರೆಯಾಗಿದೆ’ ಎಂದು ದೂರಿದ್ದಾರೆ.

ಪ್ರಮುಖ ಬೇಡಿಕೆಗಳು

- ಇ- ಆಸ್ತಿ ತಂತ್ರಾಂಶದಲ್ಲಿ ಮ್ಯುಟೇಷನ್ ಅರ್ಜಿ ಪರಿಶೀಲಿಸಲು 30 ದಿನ ನಿಗದಿಪಡಿಸಬೇಕು
- ನಿತ್ಯದ ಕೆಲಸದ ಅವಧಿ ಮುಗಿದ ನಂತರ ಆನ್‌ಲೈನ್ ಸಭೆ ನಡೆಸಬಾರದು
- ಆಸ್ತಿಗೆ ಬೀಗಮುದ್ರೆಗೆ ಭದ್ರತೆ, ಸಾಮಗ್ರಿಗಳನ್ನು ಒದಗಿಸಿ, ವಾಹನ ಸಹಿತ ಪ್ರತ್ಯೇಕ ಸಿಬ್ಬಂದಿ ನಿಯೋಜಿಸಬೇಕು
- ಉಪ ವಿಭಾಗವಾರು 50 ಸುಸ್ತಿದಾರರ ಆಸ್ತಿ ಹರಾಜು ಮಾಡಲು, ತರಬೇತಿ ನೀಡಬೇಕು
- ಇ-ಆಸ್ತಿ ತಂತ್ರಾಂಶದಲ್ಲಿ ಮಾಲೀಕರು ಮಾಹಿತಿ ಸಲ್ಲಿಸುವಾಗ ತಪ್ಪಾಗುತ್ತಿದ್ದು, ಅದನ್ನು ತಿದ್ದುಪಡಿ ಮಾಡುವ ಜವಾಬ್ದಾರಿಯನ್ನು ಸಹಾಯಕ ಕಂದಾಯ ಅಧಿಕಾರಿಗೆ ನೀಡಬೇಕು
- 225 ವಾರ್ಡ್‌ಗಳಲ್ಲಿರುವ ಕಂದಾಯ ವಿಭಾಗದಲ್ಲಿ ಅಗತ್ಯ ಸಿಬ್ಬಂದಿಯನ್ನು ಕೂಡಲೇ ನೇಮಕ ಮಾಡಬೇಕು.
- ವಿನಾಕಾರಣ ತೊಂದರೆ ನೀಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ತೇಜೋವಧೆ ಮಾಡುತ್ತಿರುವ ಉನ್ನತ ಅಧಿಕಾರಿಗಳಿಗೆ ಬುದ್ಧಿ ಹೇಳಬೇಕು

ನಿಧನ ವಾರ್ತೆ

ಅಕ್ಕುಲಮ್ಮ



ಬೆಂಗಳೂರು: ವಿಧಾನ ಪರಿಷತ್ ಸದಸ್ಯ ರಾಮೋಜಿ ಗೌಡ ಅವರ ತಾಯಿ ಅಕ್ಕುಲಮ್ಮ (96) ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯಲ್ಲಿ ಬುಧವಾರ ನಿಧನರಾದರು.

ಮೃತರಿಗೆ ರಾಮೋಜಿ ಗೌಡ ಸೇರಿದಂತೆ ಆರು ಮಂದಿ ಗಂಡು ಮಕ್ಕಳು ಮತ್ತು ಮೂವರು ಹೆಣ್ಣು ಮಕ್ಕಳಿದ್ದಾರೆ. ಮೃತರ ಅಂತ್ಯ ಸಂಸ್ಕಾರ ಚಿಂತಾಮಣಿ ತಾಲ್ಲೂಕಿನ ಮಣಿಗಾನಹಳ್ಳಿಯ ಯಗವಕೋಟೆಯಲ್ಲಿ ಗುರುವಾರ ಮಧ್ಯಾಹ್ನ 12ಕ್ಕೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿತ್ರೋತ್ಸವಕ್ಕೆ ತಡೆ ನೀಡಲು ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾರ್ಚ್ 1ರಿಂದ ಆರಂಭವಾಗಲಿರುವ 16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ನಮ್ಮ ಚಲನಚಿತ್ರಗಳನ್ನು ಪರಿಗಣಿಸಿಲ್ಲ’ ಎಂದು ‘ಸಂವಿಧಾನ ಸಿನಿ ಕಂಬೈನ್ಸ್’ ಸೇರಿದಂತೆ ಒಂಬತ್ತು ಸಿನಿಮಾ ನಿರ್ಮಾಪಕರು ಸಲ್ಲಿಸಿರುವ ಅರ್ಜಿ ಸಂಬಂಧ ರಾಜ್ಯ ಸರ್ಕಾರ, ಕನ್ನಡ ಚಲನಚಿತ್ರ ಅಕಾಡೆಮಿಗೆ ತುರ್ತು ನೋಟಿಸ್ ಜಾರಿಗೆ ಹೈಕೋರ್ಟ್ ಆದೇಶಿಸಿದೆ.

ತುಮಕೂರಿನ ‘ಸಂವಿಧಾನ ಸಿನಿ ಕಂಬೈನ್ಸ್’ನ ಎ.ವಿ.ನಾಗರಾಜು (ಟೈಗರ್ ನಾಗ್) ಸೇರಿ ಒಂಬತ್ತು ಪ್ರತ್ಯೇಕ ಸಂಸ್ಥೆಗಳ ನಿರ್ಮಾಪಕರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, ‘ಅರ್ಜಿದಾರರು ಚಿತ್ರಗಳನ್ನು ಆಯ್ಕೆ ಸಮಿತಿ ವೀಕ್ಷಿಸಿಲ್ಲ. ಹೊಸದಾಗಿ ಸಮಿತಿ ರಚಿಸಬೇಕು’ ಎಂದು ಕೋರಿದರು.

ಇದಕ್ಕೆ ನ್ಯಾಯಪೀಠ, ‘ಚಲನಚಿತ್ರೋತ್ಸವಕ್ಕೆ ಈಗಾಗಲೇ ಸಿದ್ಧತೆ ಆಗಿದೆ. ಈ ಹಂತದಲ್ಲಿ ತಡೆಯಾಜ್ಞೆ ನೀಡಲಾಗದು’ ಎಂದು ಪ್ರತಿಕ್ರಿಯಿಸಿತು.. ಇದೇ 24ಕ್ಕೆ ವಿಚಾರಣೆ ಮುಂದೂಡಲಾಗಿದೆ.

ಕುಸಿದ ಕಟ್ಟಡ: ತೆರವು ಕಾರ್ಯಾಚರಣೆ ಆರಂಭ

ಪ್ರಜಾವಾಣಿ ವಾರ್ತೆ



ನ್ಯೂ ತಿಪ್ಪಸಂದ್ರದ ಒಂದನೇ ಮುಖ್ಯರಸ್ತೆಯಲ್ಲಿ ಕುಸಿದ ಕಟ್ಟಡ

ಬೆಂಗಳೂರು: ಜೀವನ್‌ಬಿಮಾ ನಗರ ವ್ಯಾಪ್ತಿಯ ನ್ಯೂ ತಿಪ್ಪಸಂದ್ರದ ಒಂದನೇ ಮುಖ್ಯರಸ್ತೆಯಲ್ಲಿ ಕಟ್ಟಡವೊಂದು ಬುಧವಾರ ಕುಸಿದಿದ್ದು, ರಾತ್ರಿಯಿಂದಲೇ ಬಿಬಿಎಂಪಿ ತೆರವು ಕಾರ್ಯಾಚರಣೆ ನಡೆಸಿದೆ.

ಖಾಲಿ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಸುಮಾರು ಐದು ಅಡಿ ಅಗೆಯಲಾಗಿತ್ತು. ಆ ನಿವೇಶನಕ್ಕೆ ಹೊಂದಿಕೊಂಡಂತಿದ್ದ ಕಟ್ಟಡದ ತಳಭಾಗದ ಮಣ್ಣು ಸಡಿಲವಾಗಿ, ನೆಲಮಹಡಿ ಕುಸಿದಿದೆ. ಕಟ್ಟಡ ಪೂರ್ಣವಾಗಿ ವಾಲಿಕೊಂಡಿದೆ.

ಸುಮಾರು 40 ವರ್ಷ ಹಳೆಯ ಕಟ್ಟಡ, ನೆಲ ಅಂತಸ್ತು ಸೇರಿದಂತೆ ನಾಲ್ಕು ಅಂತಸ್ತು ಹೊಂದಿದೆ. ಈ ಕಟ್ಟಡ ವಾಲಿರುವುದರಿಂದ ಅದರಲ್ಲಿದ್ದ ನಿವಾಸಿಗಳು ಹಾಗೂ ಅಕ್ಕ-ಪಕ್ಕದಲ್ಲಿರುವ ನಿವಾಸಿಗಳನ್ನು ಬಿಬಿಎಂಪಿ ಸಿಬ್ಬಂದಿ ಸ್ಥಳಾಂತರಿಸಿದರು.

ಪೂರ್ವ ವಲಯದ ಜಂಟಿ ಆಯುಕ್ತರಾದ ಸರೋಜ, ಮುಖ್ಯ ಮುಖ್ಯ ಎಂಜಿನಿಯರ್ ಸುಗುಣಾ ನೇತೃತ್ವದಲ್ಲಿ ಕಟ್ಟಡ ತೆರವು ಕಾರ್ಯಾಚರಣೆ ಆರಂಭವಾಗಿದೆ.

‘ವಾಲಿರುವ ಕಟ್ಟಡವನ್ನು ತೆರವುಗೊಳಿಸಲು ಜೆಸಿಬಿ ಹಾಗೂ ಹಿಟಾಚಿಯನ್ನು ಬಳಸಲಾಗುತ್ತಿದೆ. ಕಟ್ಟಡವನ್ನು ನೆಲಸಮ ಮಾಡಿ, ಸ್ಥಳೀಯರಿಗೆ ಯಾವುದೇ ಸಮಸ್ಯೆಯಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದರು.

ಒಬ್ಬರಿಗೆ ಗಾಯ: ಕಟ್ಟಡ ಕುಸಿಯುವ ಸಂದರ್ಭದಲ್ಲಿ ನೆಲ ಅಂತಸ್ತಿನಲ್ಲಿ ಆರು ಮಂದಿ ಇದ್ದರು. ಕಟ್ಟಡ ವಾಲುತ್ತಿರುವುದನ್ನು ಗಮನಿಸಿದ್ದ ಅವರು, ಹೊರಕ್ಕೆ ಬಂದು ಪಾರಾಗಿದ್ದಾರೆ. ಅದರಲ್ಲಿ ಒಬ್ಬರಿಗೆ ಸಣ್ಣಪುಟ್ಟ ಗಾಯವಾಗಿದೆ ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ತಿಳಿಸಿದರು.

ಬುಧವಾರ ಸಂಜೆ 4.15ರ ಸುಮಾರಿಗೆ ಕಟ್ಟಡ ಕುಸಿದ ಮಾಹಿತಿ ಲಭಿಸಿತು. ತಕ್ಷಣವೇ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು. ನೆಲ ಅಂತಸ್ತಿನಲ್ಲಿದ್ದ ಎಲ್ಲರೂ ಹೊರಕ್ಕೆ ಬಂದಿದ್ದಾರೆ ಎನ್ನುವ ಮಾಹಿತಿ ಸಿಕ್ಕಿದೆ. ಆದರೂ, ಎಸ್‌ಡಿಆರ್‌ಎಫ್ ಸಿಬ್ಬಂದಿ ಜತೆಗೆ ಕಾರ್ಯಾಚರಣೆ ಮುಂದುರೆಸಲಾಗಿದೆ ಎಂದು ಅಗ್ನಿಶಾಮಕದ ಅಧಿಕಾರಿಗಳು ತಿಳಿಸಿದರು.

ಕಟ್ಟಡ ಮಾಲೀಕ ಚೆನ್ನೈನಲ್ಲಿ ನೆಲಸಿದ್ದಾರೆ. ಕಟ್ಟಡದಲ್ಲಿ ಐದು ಕುಟುಂಬಗಳು ನೆಲಸಿದ್ದವು. ನೆಲ ಅಂತಸ್ತಿನಲ್ಲಿ ಮಳಿಗೆ ಇತ್ತು. ಮೂರು ದ್ವಿಚಕ್ರ ವಾಹನಗಳು ಕಟ್ಟಡದ ಅವಶೇಷಗಳಡಿ ಸಿಲುಕಿವೆ ಎಂದು ಪೊಲೀಸರು ತಿಳಿಸಿದರು.

ತೆಲಂಗಾಣದಲ್ಲಿ ಮೇ 31ರಿಂದ ವಿಶ್ವ ಸುಂದರಿ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಈ ವರ್ಷ ನಡೆಯಲಿರುವ 72ನೇ ವಿಶ್ವ ಸುಂದರಿ ಸ್ಪರ್ಧೆಯ ಆತಿಥ್ಯವನ್ನು ತೆಲಂಗಾಣ ರಾಜ್ಯ ವಹಿಸಿಕೊಂಡಿದೆ.

ಮೇ 7ರಿಂದ ಮೇ 31ರ ಅವಧಿಯಲ್ಲಿ ರಾಜ್ಯದ ವಿವಿಧೆಡೆ ವಿಶ್ವ ಸುಂದರಿ ಸ್ಪರ್ಧೆಯು ಕೆಲವು ಹಂತಗಳಲ್ಲಿ ನಡೆಯಲಿದೆ. ಹೈದರಾಬಾದ್‌ನಲ್ಲಿ ಸ್ಪರ್ಧೆಯ ಉದ್ಘಾಟನೆ ಹಾಗೂ ಸಮಾರೋಪ ಸಮಾರಂಭಗಳು ನಿಗದಿಯಾಗಿವೆ. ಮೇ 31ರಂದು ವಿಶ್ವ ಸುಂದರಿ ಕಿರೀಟ ಯಾರಿಗೆ ಎನ್ನುವುದು ಗೊತ್ತಾಗಲಿದೆ.

ಮಿಸ್ ವರ್ಲ್ಡ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜ್ಯೂಲಿಯಾ ಮೋರ್ಲಿ ಹಾಗೂ ತೆಲಂಗಾಣ ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಸ್ಮಿತಾ ಸಭರ್‌ವಾಲ್ ಬುಧವಾರ ಜಂಟಿಯಾಗಿ ಸ್ಪರ್ಧೆಯನ್ನು ಅಧಿಕೃತವಾಗಿ ಪ್ರಕಟಿಸಿದರು.

120 ದೇಶಗಳಿಂದ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಭಾಗವಹಿಸಲು ಮೇ 7ರಂದು ಸೌಂದರ್ಯವತಿಯರು ಬರಲಿದ್ದಾರೆ.

ಸಂಸ್ಕೃತಿ, ಅನ್ವೇಷಣೆ ಹಾಗೂ ಹೊಸತನವನ್ನು ಪರಂಪರೆಯ ಜೊತೆಗೆ ಮಿಳಿತಗೊಳಿಸಿಕೊಂಡ ತೆಲಂಗಾಣ ರಾಜ್ಯದಲ್ಲಿ ವಿಶ್ವ ಸುಂದರಿ ಸ್ಪರ್ಧೆ ನಡೆಸಲು ಸಂತಸವಾಗುತ್ತಿದೆ. ಸಮುದಾಯಗಳನ್ನು ಸೌಂದರ್ಯ ಸ್ಪರ್ಧೆಯ ನೆಪದಲ್ಲಿ ಒಗ್ಗೂಡಿಸುವ ಪ್ರಯತ್ನ ಇದಾಗಿದೆ ಎಂದು ಜ್ಯೂಲಿಯಾ ಮೋರ್ಲಿ ಹೇಳಿದರು.

'ಕೌಶಲ ಹಾಗೂ ಬದ್ಧತೆಯನ್ನು ಮೊದಲಿನಿಂದಲೂ ಬಿಂಬಿಸುತ್ತಾ ಬಂದಿರುವ ತೆಲಂಗಾಣದಲ್ಲಿ ಎಲ್ಲ ಹಬ್ಬಗಳೂ ಬಣ್ಣಗಟ್ಟುತ್ತವೆ. ವಿಶ್ವ ಸುಂದರಿ ಸ್ಪರ್ಧೆಯನ್ನು ನಾವು ಸ್ವಾಗತಿಸುತ್ತೇವೆ' ಎಂದು ಸ್ಮಿತಾ ಸಭರ್‌ವಾಲ್ ಹರ್ಷ ವ್ಯಕ್ತಪಡಿಸಿದರು.

ಪರೀಕ್ಷೆ: ವಿದ್ಯಾರ್ಥಿಗಳಿಗೆ ಉಚಿತ ಪ್ರಯಾಣ

ಬೆಂಗಳೂರು: ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಬಿಎಂಟಿಸಿ ಸಾಮಾನ್ಯ ಬಸ್‌ಗಳಲ್ಲಿ ಉಚಿತ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ಹಿತ ಕಾಪಾಡಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಪಿಯುಸಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸಮಯದಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶಪತ್ರ ತೋರಿಸಿ ಉಚಿತವಾಗಿ ಪ್ರಯಾಣಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಹೂಡಿಕೆ ಹೆಸರಿನಲ್ಲಿ ಹಲವರಿಗೆ ವಂಚಿಸಿ ವಿದೇಶಕ್ಕೆ ಪರಾರಿಯಾಗಿದ್ದ ಆರೋಪಿ

ಮಾಜಿ ಪಿಡಿಒ ವಿಮಾನ ನಿಲ್ದಾಣದಲ್ಲೇ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಕೆಲಸ ಕೊಡಿಸುವುದಾಗಿ ಹಾಗೂ ಹೂಡಿಕೆಯ ಹೆಸರಿನಲ್ಲಿ ಹಣ ಪಡೆದು ಹಲವರಿಗೆ ವಂಚಿಸಿದ್ದ ಆರೋಪದ, ಮಾಜಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಯೋಗೇಂದ್ರ ಎಂಬಾತನನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯ (ಸಿ.ಕೆ.ಅಚ್ಚುಕಟ್ಟು) ಪೊಲೀಸರು ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ಚಿನ್ನದ ಉದ್ಯಮ ಹಾಗೂ ಕ್ರಿಪ್ಟೊ ಕರೆನ್ಸಿಯಲ್ಲಿ ಹೂಡಿಕೆ ಹೆಸರಿನಲ್ಲಿ ಹಣ ಪಡೆದು ಹಲವರಿಗೆ ವಂಚಿಸಿದ್ದ ಆರೋಪದ ಮೇಲೆ ಯೋಗೇಂದ್ರನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು
- ಕೊಲಂಬೊದಲ್ಲಿ ಅಡಗಿದ್ದ ಆರೋಪಿ
- ಕರ್ತವ್ಯ ಲೋಪಕ್ಕಾಗಿ 2020ರಲ್ಲಿ ಕೆಲಸದಿಂದ ವಜಾ
- ವಜಾಗೊಂಡ ನಂತರ ವಂಚನೆ ಕೃತ್ಯದಲ್ಲಿ ಭಾಗಿ

ಆರೋಪಿಯ ವಿರುದ್ಧ ಚನ್ನಮ್ಮನ ಕೆರೆ ಅಚ್ಚುಕಟ್ಟು, ಜೆ.ಪಿ. ನಗರ ಹಾಗೂ ವಿಶ್ವೇಶ್ವರಪುರ ಠಾಣೆಯಲ್ಲಿ ವಂಚನೆ ಪ್ರಕರಣಗಳು ದಾಖಲಾಗಿದ್ದವು.

ಹಣ ಕಳೆದುಕೊಂಡವರು ಪೊಲೀಸರಿಗೆ ದೂರು ನೀಡುತ್ತಿದ್ದಂತೆಯೇ ಆರೋಪಿ ವಿದೇಶಕ್ಕೆ ತೆರಳಿ ತಲೆಮರೆಸಿಕೊಂಡಿದ್ದ. ಆರೋಪಿಯ ವಿರುದ್ಧ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯ ಪೊಲೀಸರು ಲುಕ್‌ಔಟ್ ನೋಟಿಸ್ ಜಾರಿ ಮಾಡಿದ್ದರು. ಶ್ರೀಲಂಕಾದ ಕೊಲಂಬೊದಿಂದ ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆರೋಪಿ ಬರುತ್ತಿದ್ದಂತೆಯೇ ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ಆತನನ್ನು ವಶಕ್ಕೆ ಪಡೆದುಕೊಂಡು ಸಿ.ಕೆ.ಅಚ್ಚುಕಟ್ಟು ಠಾಣೆಯ ಪೊಲೀಸರಿಗೆ ಒಪ್ಪಿಸಿದ್ದಾರೆ.

'2023ರಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ಜೆ.ಪಿ.ನಗರ ಠಾಣೆಯ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಯೋಗೇಂದ್ರ ಕರ್ತವ್ಯ ಲೋಪದ ಆರೋಪದ ಮೇರೆಗೆ 2020ರಲ್ಲಿ ಕೆಲಸದಿಂದ ವಜಾಗೊಂಡಿದ್ದ.

'2023ರಲ್ಲಿ ಸರ್ಕಾರಿ ಕೆಲಸ ಕೊಡಿಸುವುದಾಗಿ ವ್ಯಕ್ತಿಯೊಬ್ಬರಿಂದ ₹17 ಲಕ್ಷ ಪಡೆದು ಪರಾರಿಯಾಗಿದ್ದ ಆರೋಪದ ಮೇಲೆ ಯೋಗೇಂದ್ರ ವಿರುದ್ಧ ಸಿ.ಕೆ. ಅಚ್ಚುಕಟ್ಟು ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

'ಕ್ರಿಪ್ಟೊ ಕರೆನ್ಸಿಯಲ್ಲಿ ಹೂಡಿಕೆ ಮಾಡಿದರೆ ದುಪ್ಪಟ್ಟು ಹಣ ಬರಲಿದೆ ಎಂದು ವ್ಯಕ್ತಿಯೊಬ್ಬರಿಂದ ₹1.35 ಕೋಟಿ ಪಡೆದು ವಂಚಿಸಿದ್ದ. ಹಣ ಕಳೆದುಕೊಂಡವರು ನೀಡಿದ ದೂರು ಆಧರಿಸಿ ಯೋಗೇಂದ್ರ ವಿರುದ್ಧ 2024ರಲ್ಲಿ ವಿ.ವಿ ಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಕೆಲಸದಿಂದ ವಜಾಗೊಂಡ ಬಳಿಕ, ವಂಚನೆಯ ಮೂಲಕ ಹಣ ಗಳಿಕೆಯಲ್ಲಿ ಆರೋಪಿ ತೊಡಗಿದ್ದ. ಸುಲಭವಾಗಿ ವಂಚನೆಗೊಳಗಾಗುವ ವ್ಯಕ್ತಿಗಳನ್ನು ಪತ್ತೆ ಹಚ್ಚುತ್ತಿದ್ದ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

'ಹೂಡಿಕೆ ಮಾಡಿದರೆ ದುಪ್ಪಟ್ಟು ಹಣ ಗಳಿಸಬಹುದು ಎಂಬುದಾಗಿ ನಂಬಿಸಿ ವಂಚಿಸುತ್ತಿದ್ದ. ಅಲ್ಲದೇ ತನಗೆ ರಾಜಕಾರಣಿಗಳ ಪರಿಚಯವಿದೆ. ಪ್ರಭಾವಿಗಳ ಗೊತ್ತು ಎಂದು ವಿವಿಧ ಆಮಿಷವೊಡ್ಡಿ ಹಣ ಪಡೆದು ವಂಚಿಸುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಪೊಲೀಸರು ಬಂಧನಕ್ಕೆ ಬರುವ ಮಾಹಿತಿ ತಿಳಿದು, ವಿದೇಶಕ್ಕೆ ತೆರಳಿ ತಲೆಮರೆಸಿಕೊಂಡಿದ್ದ. ವಂಚನೆಯಿಂದ ಬಂದ ಹಣದಿಂದಲೇ ಶ್ರೀಲಂಕಾ, ದುಬೈ ಸೇರಿದಂತೆ ವಿವಿಧ ದೇಶಗಳಲ್ಲಿ ಸುತ್ತಾಟ ನಡೆಸಿದ್ದ' ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

'ಮಾದಕ ದ್ರವ್ಯ ಜಾಲ ಹತ್ತಿಕ್ಕಲು ಸಮುದಾಯ ಸಹಕಾರ ಅಗತ್ಯ'

ಬೆಂಗಳೂರು: 'ಮಾದಕ ದ್ರವ್ಯ ಮಾರಾಟ ಜಾಲವನ್ನು ಹತ್ತಿಕ್ಕಲು ಸರ್ಕಾರದ ಜೊತೆಗೆ ಸಮುದಾಯದ ಸಹಕಾರವೂ ಅಗತ್ಯ' ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ (ಬಿಸಿಯು) ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಪ್ರತಿಪಾದಿಸಿದರು.

ವಿಶ್ವವಿದ್ಯಾಲಯದ ಸಮಾಜ ಕಾರ್ಯ ವಿಭಾಗ ಹಾಗೂ ಕ್ರೈಸ್ಟ್ ಡೀಮ್ಡ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಬುಧವಾರ ಏರ್ಪಡಿಸಿದ್ದ 'ಯುವಜನರಲ್ಲಿ ವ್ಯಸನ ಮತ್ತು ಚಿಕಿತ್ಸೆ' ವಿಷಯದ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳು ಹಾಗೂ ಯುವಜನರಲ್ಲಿ ಅನೇಕರು ತಂಬಾಕು, ಗುಟ್ಕಾ, ಕೊಕೇನ್, ಗಾಂಜಾ, ಅಫೀಮ್‌ನಂತಹ ಮಾದಕ ದ್ರವ್ಯ ವ್ಯಸನಕ್ಕೆ ಬಲಿಯಾಗುತ್ತಿದ್ದಾರೆ. ಈ ವ್ಯಸನ ತಪ್ಪಿಸಲು ಗಂಭೀರ ಪ್ರಯತ್ನ ಮಾಡಬೇಕಾಗಿದೆ' ಎಂದು ಪ್ರತಿಪಾದಿಸಿದರು.



ಅಧ್ಯಕ್ಷತೆ ವಹಿಸಿದ್ದ ಬಿಸಿಯು ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥೆ ಪ್ರೊ.ರಿತಿಕಾ ಸಿನ್ಹಾ ಬಿಸಿಯು ಆವರಣದಲ್ಲಿ ಆಪ್ತ ಸಲಹಾ ಕೇಂದ್ರ ಆರಂಭಿಸುವ ಇಂಗಿತ ವ್ಯಕ್ತಡಿಸಿದರು. ಕ್ರೈಸ್ಟ್ ಕಾಲೇಜಿನ ಸಾಮಾಜಿಕ ಕ್ರಿಯಾಶೀಲ ಕೇಂದ್ರದ ನಿರ್ದೇಶಕ ಪ್ರೊ.ವಿಕ್ಟರ್ ಪಾಲ್ ಮಾತನಾಡಿದರು. ಕ್ರೈಸ್ಟ್ ವಿಶ್ವವಿದ್ಯಾಲಯದ ಪ್ರೊ. ಸುಪರ್ಣ ಮುಜಂದಾರ್ಕರ್, ನಿಮ್ಹಾನ್ಸ್‌ನ ಡಾ.ನರಸಿಂಹ, ಡಾ.ಇ. ಸೀನು ಉಪನ್ಯಾಸ ನೀಡಿದರು.

'ಬಜೆಟ್ ಪೂರ್ವಭಾವಿ ಸಭೆಗಳಲ್ಲಿ ಸಾಮಾಜಿಕ ನ್ಯಾಯ ಮರೆ'

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಡೆಸುತ್ತಿರುವ ಬಜೆಟ್ ಪೂರ್ವಭಾವಿ ಸಭೆಗಳಿಗೆ ಅಲ್ಪಸಂಖ್ಯಾತ ಸಮುದಾಯಗಳ ಎಲ್ಲ ಮುಖಂಡರನ್ನು ಕರೆದು, ಇದುವರೆಗೂ ಚರ್ಚೆ ನಡೆಸದೇ ಇರುವುದು ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಧಕ್ಕೆ ತರುವಂತಿದೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರುವ ಅವರು, 'ಈಗಾಗಲೇ ದಲಿತ ಹಾಗೂ ಹಿಂದುಳಿದ ವರ್ಗಗಳ ಅನೇಕ ಸಂಘ–ಸಂಸ್ಥೆಗಳು ಮತ್ತು ನಾಯಕರೊಂದಿಗೆ ಸಭೆ ನಡೆಸಿ ಅವರ ಬೇಡಿಕೆಗಳನ್ನು ಆಲಿಸಿ, ಬಜೆಟ್ ಪೂರ್ವ ತಯಾರಿಯನ್ನು ಮಾಡಿಕೊಳ್ಳುತ್ತಿದ್ದೀರಿ. ಆದರೆ, ಅಲ್ಪಸಂಖ್ಯಾತ ಸಮುದಾಯವನ್ನು ಪ್ರತಿನಿಧಿಸುವ ಮುಖಂಡರೊಂದಿಗೆ ಸಭೆ ನಡೆಸದೇ, ಸಚಿವರೊಬ್ಬರೊಬ್ಬರೆ ಎಲ್ಲ ಅಲ್ಪಸಂಖ್ಯಾತರ ಧ್ವನಿ ಎಂಬಂತೆ ಬಿಂಬಿಸಲಾಗುತ್ತಿದೆ' ಎಂದು ದೂರಿದ್ದಾರೆ.

'ಅಲ್ಪಸಂಖ್ಯಾತರಲ್ಲಿ ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧ, ಪಾರ್ಸಿ, ಸಿಖ್ ಸಮುದಾಯಗಳೂ ಇವೆ. ಆದರೆ, ಇತ್ತೀಚೆಗೆ ಆಳುವವರು ಇದನ್ನು ಮರೆತುಹೋಗಿದ್ದಾರೆ. ಬಜೆಟ್ ಪೂರ್ವಭಾವಿ ಸಭೆಗೆ ಅಲ್ಪಸಂಖ್ಯಾತ ಸಮುದಾಯಗಳ ಎಲ್ಲ ಮುಖಂಡರು, ಸಂಘ–ಸಂಸ್ಥೆಗಳನ್ನು ಕರೆಯಬೇಕು. ಈ ಸಮುದಾಯಗಳ ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಬೇಡಿಕೆಗಳನ್ನು ಈಡೇರಿಸಲು ಮುಂದಾಗಬೇಕು' ಎಂದು ಆಗ್ರಹಿಸಿದ್ದಾರೆ.

ಸಂಪಿಗೇಹಳ್ಳಿ–ಚೊಕ್ಕನಹಳ್ಳಿ ಮುಖ್ಯರಸ್ತೆ ಗುಂಡಿಮಯ

• ಡಿ.ಸುರೇಶ್

ಯಲಹಂಕ: ಜಕ್ಕೂರು- ಸಂಪಿಗೇಹಳ್ಳಿ ಮುಖ್ಯರಸ್ತೆಯ ಜಕ್ಕೂರು ಕೆರೆ ಕೋಡಿಯಿಂದ ಚೊಕ್ಕನಹಳ್ಳಿ ಮಾರ್ಗವಾಗಿ ಹೆಗಡೆ ನಗರ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳಾಗಿದ್ದು, ಇದರಿಂದ ಈ ಮಾರ್ಗದಲ್ಲಿ ಸಂಚರಿಸುವ ವಾಹನ ಸವಾರರು ತೀವ್ರ ತೊಂದರೆ ಅನುಭವಿಸಬೇಕಾಗಿದೆ.

ಈ ರಸ್ತೆಯು ಯಲಹಂಕ-ಜಕ್ಕೂರು ಮಾರ್ಗವಾಗಿ ಸಂಪಿಗೇಹಳ್ಳಿ, ಚೊಕ್ಕನಹಳ್ಳಿ, ಅಗ್ರಹಾರ, ಕೋಗಿಲು, ಅಗ್ರಹಾರ ಬಡಾವಣೆ ಸೇರಿದಂತೆ ಹಲವು ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಇಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ.

ಆದರೆ ರಸ್ತೆಯುದ್ದಕ್ಕೂ ಗುಂಡಿಗಳು ಬಿದ್ದಿರುವುದರಿಂದ ವಾಹನ ಸವಾರರು ಈ ರಸ್ತೆಯಲ್ಲಿ ಸಂಚರಿಸಲು ತೀವ್ರ ಪ್ರಯಾಸ ಪಡಬೇಕಾಗಿದೆ ಎಂಬುದು ಸ್ಥಳೀಯರ ಆರೋಪ.



ಸಂಪಿಗೇಹಳ್ಳಿ ವೃತ್ತದಲ್ಲಿ ರಸ್ತೆ ಹಾಳಾಗಿರುವ ಪರಿಣಾಮ, ವಾಹನಸವಾರರು ತೊಂದರೆ ಅನುಭವಿಸಬೇಕಾಗಿದೆ.

ಈಗಾಗಲೇ ಹಲವು ಮಂದಿ ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗೊಂಡಿದ್ದಾರೆ. ಇತ್ತೀಚೆಗೆ ಸುರಿದಿದ್ದ ಭಾರಿ ಮಳೆಯಿಂದ ರಸ್ತೆಯು ತೀರಾ ಹಾಳಾಗಿದೆ. ರಾತ್ರಿ ವೇಳೆಯಲ್ಲಂತೂ ಗುಂಡಿಗಳು ಕಾಣದೆ ವಾಹನ ಸವಾರರು ಆತಂಕದಿಂದ ಈ ರಸ್ತೆಯಲ್ಲಿ ಸಾಗುತ್ತಿದ್ದಾರೆ. ಸಂಪಿಗೇಹಳ್ಳಿ ವೃತ್ತವೂ ಗುಂಡಿಗಳಿಂದ ಕೂಡಿದ್ದು, ರಸ್ತೆಯು ಕಿತ್ತುಹೋಗಿದೆ. ಇದರಿಂದ ಈ ಸ್ಥಳದಲ್ಲಿ ವಾಹನಗಳು ತಿರುವು ಪಡೆಯುವ ಸಂದರ್ಭದಲ್ಲಿ ಅಪಘಾತಗಳಿಗೆ ಎಡೆ ಮಾಡಿಕೊಟ್ಟಿದೆ ಎಂದು ಸ್ಥಳೀಯ ನಿವಾಸಿ ಅಜಯ್ ಕುಮಾರ್ ದೂರಿದರು.

ವಾಹನಗಳ ಸಂಚಾರದಿಂದ ಉಂಟಾಗುವ ದೂಳು ಕಿರಿಕಿರಿ ಉಂಟು ಮಾಡುತ್ತಿದೆ. ರಸ್ತೆಯ ಅಕ್ಕಪಕ್ಕದ ಅಂಗಡಿಗಳು ಮತ್ತು ಮನೆಗಳ ಹೊರಗೆ, ಒಳಗೆ ದೂಳಿನ ಮಜ್ಜನ. ಇದರಿಂದ ಸ್ಥಳೀಯ ನಿವಾಸಿಗಳು ಆರೋಗ್ಯ ಸಮಸ್ಯೆ ಎದುರಿಸಬೇಕಾಗಿದೆ. ರಸ್ತೆಯಲ್ಲಿ ಹರಡಿರುವ ಜಲ್ಲಿಕಲ್ಲುಗಳು ವಾಹನಗಳ ಚಕ್ರಗಳಿಗೆ ಸಿಲುಕಿ ಮೇಲೆ ಹಾರುವುದರಿಂದ ವಾಹನಗಳಿಗೂ ಹಾನಿಯಾಗುತ್ತಿದೆ ಎಂದು ಅವರು ದೂರುತ್ತಾರೆ. ಅಧಿಕಾರಿಗಳು ಕೂಡಲೇ ರಸ್ತೆ ಗುಂಡಿಗಳನ್ನು ಮುಚ್ಚಿ, ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯ ಮಾಡಿದ್ದಾರೆ.

ಶೀಘ್ರ ಕಾಮಗಾರಿ ಆರಂಭ

ಚೊಕ್ಕನಹಳ್ಳಿ ರಸ್ತೆಯಲ್ಲಿ ಚರಂಡಿ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. ಸಂಪಿಗೇಹಳ್ಳಿಯಿಂದ ಚೊಕ್ಕನಹಳ್ಳಿ ಮುಖ್ಯರಸ್ತೆಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಟೆಂಡರ್ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಕಾಮಗಾರಿ ಆರಂಭಿಸಲಾಗುವುದು.

ಮಾಲತೇಶ್, ಸಹಾಯಕ ಎಂಜಿನಿಯರ್, ಬಿಬಿಎಂಪಿ, ಬ್ಯಾಟರಾಯನಪುರ ಉಪವಿಭಾಗ

ರಾಷ್ಟ್ರಕವಿ ಗೋವಿಂದ ಪೈ ಜನ್ಮದಿನ: ಮಾರ್ಚ್ 23ರಂದು ಕವನ ಸ್ಪರ್ಧೆ

ಬೆಂಗಳೂರು: ರಾಷ್ಟ್ರಕವಿ ಗೋವಿಂದ ಪೈ ಜನ್ಮದಿನದ ಅಂಗವಾಗಿ ಮಾರ್ಚ್ 23ರಂದು ಕನ್ನಡ ಸಂಘರ್ಷ ಸಮಿತಿಯು ಉದಯೋನ್ಮುಖ ಕವಿ–ಕವಯಿತ್ರಿಯರಿಗೆ ಕವನ ಸ್ಪರ್ಧೆ ಆಯೋಜಿಸಿದೆ.

ಈವರೆಗೆ ಒಂದೂ ಕವನ ಸಂಕಲನ ಹೊರತರದ ಉದಯೋನ್ಮುಖರು, 'ನಾಡು–ನುಡಿ, ಸಾಹಿತ್ಯ, ಕನ್ನಡ ನಾಡಿನ ಪರಂಪರೆ' ಕುರಿತಾದ ಒಂದು ಸ್ವರಚಿತ ಕವನವನ್ನು ಸ್ಪರ್ಧೆಗೆ ಕಳುಹಿಸಿಕೊಡಬಹುದು. ಸ್ಪರ್ಧೆಯಲ್ಲಿ ಗೆದ್ದವರಿಗೆ ಪ್ರಥಮ ಬಹುಮಾನ ₹2500, ದ್ವಿತೀಯ ಬಹುಮಾನ ₹2000 ಹಾಗೂ ತೃತೀಯ ಬಹುಮಾನ ₹1500 ನಗದು ನೀಡಲಾಗುವುದು.

ಕವನ ಕಳುಹಿಸಲು ಕೊನೆ ದಿನ ಮಾರ್ಚ್ 5. ಕವನವನ್ನು ಎ.ಎಸ್. ನಾಗರಾಜಸ್ವಾಮಿ, ಕನ್ನಡ ಸಂಘರ್ಷ ಸಮಿತಿ, ನಂ.3, 1ನೇ ತಿರುವು, 1ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಬೆಂಗಳೂರು–56 ವಿಳಾಸಕ್ಕೆ ಕಳುಹಿಸಬೇಕು. ₹50 ಪ್ರವೇಶ ಶುಲ್ಕ ಇದೆ. ಹೆಚ್ಚಿನ ಮಾಹಿತಿಗಾಗಿ 97390 01410ಕ್ಕೆ ಸಂಪರ್ಕಿಸಬಹುದು.

ಗುಂಡಿನ ಚಕಮಕಿ: ನಾಲ್ವರು ನಕ್ಸಲರ ಹತ್ಯೆ

ಬಾಲಾಘಾಟ್ (ಪಿಟಿಐ): ಮೂವರು ಮಹಿಳೆಯರು ಸೇರಿದಂತೆ ನಾಲ್ವರು ನಕ್ಸಲರು ಪೊಲೀಸರ ಜೊತೆ ಬುಧವಾರ ನಡೆದ ಗುಂಡಿನ ಚಕಮಕಿಯಲ್ಲಿ ಮೃತಪಟ್ಟಿದ್ದಾರೆ.

ಹತ್ಯೆಯಾದವರಲ್ಲಿ ಕಮಾಂಡರ್ ಆಶಾ ಸೇರಿದ್ದು, ಅವರ ಸುಳಿವು ನೀಡಿದವರಿಗೆ ₹14 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಮಧ್ಯಪ್ರದೇಶ ಪೊಲೀಸರು ತಿಳಿಸಿದ್ದಾರೆ. ಛತ್ತೀಸಗಢದಲ್ಲಿ 'ಕೆಬಿ' ಹೆಸರಿನಲ್ಲಿ ನಕ್ಸಲ್ ಸಂಘಟನೆಯನ್ನು ಆಶಾ ಕಟ್ಟುತ್ತಿದ್ದರು. ಉಳಿದ ನಕ್ಸಲರ ಬಗೆಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಮೆಟ್ರೊ ಟಿಕೆಟ್ ದರ ಇಳಿಸಲು ಪ್ರಯಾಣಿಕರ ಸಂಘಟನೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ಪ್ರಯಾಣ ದರ ಏರಿಕೆಯ ಆದೇಶವನ್ನು ಹಿಂಪಡೆಯುವಂತೆ ಆಗ್ರಹಿಸಿ ಫೆಬ್ರುವರಿ 23ರಂದು ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣದಲ್ಲಿ 'ಮೆಟ್ರೊ ದರ ಏರಿಕೆಯ ವಿರುದ್ಧ ಸಮಾವೇಶ' ಹಮ್ಮಿಕೊಳ್ಳಲಾಗಿದೆ ಎಂದು ಬೆಂಗಳೂರು ಮೆಟ್ರೊ ಪ್ರಯಾಣಿಕರ ಸಂಘಟನೆ (ಬಿಎಂಸಿಎ) ತಿಳಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ಸದಸ್ಯರಾದ ರಾಜೇಶ್ ಭಟ್, ಎನ್. ರವಿ, ವಿ.ಎನ್. ರಾಜಶೇಖರ್, ಹನುಮೇಶ್ ಜಿ., ಶೋಭಾ, 'ಈ ಸಮಾವೇಶದಲ್ಲಿ ಮೆಟ್ರೊ ಪ್ರಯಾಣ ದರ ಇಳಿಸಲು ಆಗ್ರಹಿಸಿ ಮುಂದಿನ ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚಿಸಲಾಗುತ್ತದೆ' ಎಂದು ಹೇಳಿದರು.

'ಬಿಎಂಆರ್‌ಸಿಎಲ್ ಮೆಟ್ರೊ ಪ್ರಯಾಣ ದರ ಏರಿಕೆಯ ಹಿಂದಿರುವ ತರ್ಕವೇನು? 2022–23ರಲ್ಲಿ ಬಿಎಂಆರ್‌ಸಿಎಲ್ ₹108 ಕೋಟಿ ಆದಾಯ ಗಳಿಸಿತ್ತು. 2023–24ರಲ್ಲಿ ₹129.3 ಕೋಟಿ ಲಾಭ ಬಂದಿತ್ತು. 2025–26ನೇ ಸಾಲಿನಲ್ಲಿ ಈ ಆದಾಯ ₹200 ಕೋಟಿಗೆ ತಲುಪುವ ಸಾಧ್ಯತೆ ಇದೆ. ಆದರೆ, ಮೆಟ್ರೊ ಪ್ರಯಾಣ ದರ ಏರಿಸುವ ಮೂಲಕ ಪ್ರಯಾಣಿಕರ ಮೇಲೆ ಆರ್ಥಿಕ ಹೊರೆ ಹಾಕಿರುವುದು ಖಂಡನೀಯ' ಎಂದು ಹೇಳಿದರು.

'ಕೋಲ್ಕತ್ತ ಮೆಟ್ರೊ ದೇಶದಲ್ಲಿ ಅತ್ಯಂತ ಕಡಿಮೆ ಪ್ರಯಾಣ ದರವನ್ನು ಹೊಂದಿದೆ. ನವದೆಹಲಿ ಮತ್ತು ಚೆನ್ನೈ ಮೆಟ್ರೊಗಳ ಪ್ರಯಾಣ ದರ ಪ್ರಯಾಣಿಕ ಸ್ನೇಹಿಯಾಗಿದ್ದು, ಲಾಭದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ನಮ್ಮ ಮೆಟ್ರೊ ಉದ್ಯಮದ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಹೊರೆಯನ್ನು ಸಾರ್ವಜನಿಕರ ಮೇಲೆ ವರ್ಗಾಯಿಸುವ ಮೂಲಕ ಬಿಎಂಆರ್‌ಸಿಎಲ್ ಹಗಲು ದರೋಡೆ ಮಾಡುತ್ತಿದೆ' ಎಂದು ದೂರಿದರು.


'ಕಿಸೆಗೆ ಹೊರೆಯಾದ ನಮ್ಮ ಮೆಟ್ರೊ'

ಬೆಂಗಳೂರು: 'ನಮ್ಮ ಮೆಟ್ರೊ ಪ್ರಯಾಣ ದರವನ್ನು ವಿಪರೀತ ಏರಿಸಿರುವ ಬಿಎಂಆರ್‌ಸಿಎಲ್ ಆನಂತರ ಕೆಲವು ಸ್ಟೇಜ್‌ಗಳಿಗೆ ಸ್ವಲ್ಪ ಪ್ರಮಾಣದಲ್ಲಿ ದರ ಇಳಿಸಿ ಮುಂಗೈಗೆ ಬೆಲ್ಲ ಸವರುವ ಕೆಲಸ ಮಾಡಿದೆ. ಆದರೆ ಎಲ್ಲ ಸ್ಟೇಜ್‌ಗಳ ಪ್ರಯಾಣ ದರ ಇಳಿಸಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.





ಪ್ರತಿಯೊಂದು ಪದಾರ್ಥ ಮತ್ತು ಸೇವೆಯ ದರ ಏರಿಕೆ ಆಗುತ್ತಿರುವ ಸಂದರ್ಭದಲ್ಲಿ ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿರುವುದನ್ನು ಸಾರಾಸಗಟಾಗಿ ವಿರೋಧಿಸುವುದು ಅರ್ಥಹೀನ. ಹಣದುಬ್ಬರಕ್ಕೆ ಸ್ಪಂದಿಸಲೇಬೇಕಾದ ಅನಿವಾರ್ಯ ಬಿಎಂಆರ್‌ಸಿಎಲ್‌ಗೆ ಇದೆ. ಆದರೆ, ಏಳು ವರ್ಷಗಳಿಂದ ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿಲ್ಲವೆಂದು ಏಕಾಏಕಿ ಶೇಕಡ 45ರಷ್ಟು ಹೆಚ್ಚಿಸಿರುವುದು ತಾರ್ಕಿಕವಲ್ಲ. ಮೆಟ್ರೊ ಪ್ರಯಾಣ ದರವನ್ನು ಶೇ 10ರಿಂದ 15ರಷ್ಟು ಹೆಚ್ಚಿಸಿದ್ದರೆ ಪ್ರಯಾಣಿಕರು ಸ್ಪಂದಿಸುತ್ತಿದ್ದರು. ಮೆಟ್ರೊ ಪ್ರಯಾಣ ದರ ಏರಿಕೆಯಿಂದ ನಮ್ಮ ಮೆಟ್ರೊ ಉಳ್ಳವರ ಮೆಟ್ರೊ ಆಗುತ್ತಿರುವುದು ದುರ್ದೈವ.



ರಮಾನಂದ ಶರ್ಮಾ, ಜೆ.ಪಿ. ನಗರ

ಮೆಟ್ರೊದಲ್ಲಿ ಪ್ರಯಾಣ ಮಾಡುತ್ತಿದ್ದೆವು. ಈಗ ಪ್ರಯಾಣ ದರ ಏರಿಕೆ ಮಾಡಿರುವುದರಿಂದ ಸಮಸ್ಯೆ ಆಗಿದೆ. ಬಿಎಂಆರ್‌ಸಿಎಲ್ ಪ್ರಯಾಣ ದರ ಏರಿಕೆ ಮಾಡಿದೆ. ಆದರೆ, ಸೌಲಭ್ಯಗಳನ್ನು ಮಾತ್ರ ಸರಿಯಾಗಿ ನೀಡುತ್ತಿಲ್ಲ. ರಾತ್ರಿ 10 ಗಂಟೆಯ ನಂತರ ಮೆಟ್ರೊ ನಿಲ್ದಾಣಗಳಲ್ಲಿ ಹವಾ ನಿಯಂತ್ರಣ ವ್ಯವಸ್ಥೆ (ಎ.ಸಿ) ಬಂದ್ ಮಾಡಲಾಗುತ್ತದೆ. ಕುಡಿಯುವ ನೀರು ಹಾಗೂ ವೃದ್ಧರಿಗೆ ಕುಳಿತುಕೊಳ್ಳಲು ಸರಿಯಾದ ಆಸನಗಳ ವ್ಯವಸ್ಥೆಯೂ ಇಲ್ಲ.



ಗೌರಮ್ಮ, ಕೆ.ಆರ್. ಪುರ

ಸಮಯ ಮತ್ತು ಹಣ ಎರಡೂ ಅಮೂಲ್ಯವಾದದು. ಮೆಟ್ರೊ ಪ್ರಯಾಣ ದರ ಹೆಚ್ಚಳ ಮಾಡಿರುವುದರಿಂದ ಹಣ ಮತ್ತು ಸಮಯದಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಚಾರ ದಟ್ಟಣೆ ತಗ್ಗಿಸಲು ಹಾಗೂ ನಿತ್ಯದ ಪ್ರಯಾಣದ ಸಮಯ ಉಳಿಸುವ ಉದ್ದೇಶದಿಂದ ಆರಂಭವಾಗಿದ್ದ ನಮ್ಮ ಮೆಟ್ರೊ ಇಂದು ನಮ್ಮದಲ್ಲ ಎಂಬ ಭಾವನೆ ಮೂಡುತ್ತಿದೆ. ಬಿಎಂಆರ್‌ಸಿಎಲ್ ಅಭಿವೃದ್ಧಿಯ ಹೆಸರಿನಲ್ಲಿ ವ್ಯಾಪಾರ ಮಾಡಲು ಹೊರಟಿದೆ. ಮೆಟ್ರೊ ಪ್ರಯಾಣ ದರ ಹೆಚ್ಚಿಸಿರುವ ಬಿಎಂಆರ್‌ಸಿಎಲ್ ತನ್ನ ಸಿಬ್ಬಂದಿಗೆ ಶೇ 70ರಿಂದ 100ರಷ್ಟು ವೇತನ ಹೆಚ್ಚಿಸುತ್ತದೆಯೇ?




ಸುಪ್ರಿಯಾ , ಜ್ಞಾನಭಾರತಿ

ಮೆಟ್ರೊ ಪ್ರಯಾಣ ದರವನ್ನು ಅವೈಜ್ಞಾನಿಕವಾಗಿ ಏರಿಕೆ ಮಾಡಿರುವುದು ಖಂಡನೀಯ. ಇದು ಎಲ್ಲ ವರ್ಗದ ಜನರಿಗೆ ಹೊರೆಯಾಗಿ ಪರಿಣಮಿಸಿದೆ. ನಮ್ಮ ಮೆಟ್ರೊ ಎಂಬುದು ಹೆಸರಿಗಷ್ಟೇ ಸೀಮಿತವಾಗದೆ, ಅದನ್ನು ತನ್ನ ಕಾರ್ಯವೈಖರಿಯಲ್ಲೂ ಅನುಸರಿಸಬೇಕು. ಆಗ ಮಾತ್ರ ಎಲ್ಲರೂ ಮೆಟ್ರೊ ಸಂಚಾರವನ್ನು ನಮ್ಮದೆಂದು ಒಪ್ಪಿಕೊಳ್ಳಬಹುದು. ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಕಾರಾತ್ಮಕವಾಗಿ ಸ್ಪಂದಿಸುವ ಮೂಲಕ ಮೆಟ್ರೊ ಪ್ರಯಾಣ ದರವನ್ನು ಕಡಿತಗೊಳಿಸಬೇಕು.



ಭಾಗ್ಯಮ್ಮ, ನೆಲಮಂಗಲ

ಮೆಟ್ರೊದಲ್ಲಿ ಪ್ರಯಾಣಿಸಲು ತಿಂಗಳಿಗೆ ₹2 ಸಾವಿರ ಮೆಟ್ರೊ ಕಾರ್ಡ್‌ಗೆ ರಿಚಾರ್ಜ್ ಮಾಡುತ್ತಿದ್ದೆ. ಈಗ ಬಿಎಂಆರ್‌ಸಿಎಲ್ ಮೆಟ್ರೊ ಪ್ರಯಾಣ ದರ ಪರಿಷ್ಕರಣೆ ಮಾಡಿರುವುದರಿಂದ ತಿಂಗಳಿಗೆ ₹4 ಸಾವಿರ ಮೆಟ್ರೊ ಕಾರ್ಡ್‌ಗೆ ರಿಚಾರ್ಜ್ ಮಾಡಬೇಕಿದೆ. ಆದ್ದರಿಂದ ನಾನು ಮೆಟ್ರೊ ತೊರೆದು ಬಿಎಂಟಿಸಿ ಬಸ್‌ಗಳಲ್ಲಿ ಸಂಚರಿಸುತ್ತಿದ್ದೇನೆ. ಹಿರಿಯ ನಾಗರಿಕನಾಗಿದ್ದರಿಂದ ಬಿಎಂಟಿಸಿಯ ತಿಂಗಳ ಪಾಸ್‌ಗೆ ₹1080 ಪಾವತಿಸಿ ಓಡಾಡುತ್ತಿದ್ದೇನೆ. ಇದರಿಂದ ನನಗೆ ತಿಂಗಳಿಗೆ ₹1 ಸಾವಿರ ಉಳಿತಾಯವಾಗುತ್ತಿದೆ.



ಅಶೋಕ ಚಿಕ್ಕಪರಪ್ಪಾ, ಕೋಣನಕುಂಟೆ

ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿರುವುದು ಖಂಡನೀಯ. ಪ್ರತಿದಿನ ಬೆಂಗಳೂರು ನಗರದ ಸಂಚಾರ ದಟ್ಟಣೆಯಿಂದ ತಪ್ಪಿಸಿಕೊಳ್ಳಲು ನನ್ನಂತಹ ಲಕ್ಷಾಂತರ ಜನಸಾಮಾನ್ಯರಿಗೆ ವರದಾನವಾಗಿತ್ತು. ಈಗ ಬಿಎಂಆರ್‌ಸಿಎಲ್ ಮೆಟ್ರೊ ಪ್ರಯಾಣ ದರ ಏರಿಕೆ ಮಾಡುವ ಮೂಲಕ ಸಾರ್ವಜನಿಕರಿಗೆ ಸಮಸ್ಯೆ ಆಗಿದೆ. ಮೆಟ್ರೊ ಪ್ರಯಾಣ ದರ ಪರಿಷ್ಕರಿಸುವ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಚರ್ಚಿಸಿ, ಹಿಂದಿನ ಪ್ರಯಾಣ ದರವನ್ನು ಮುಂದುವರೆಸಬೇಕು.



ಪುರುಷೋತ್ತಮ, ಮಾಗಡಿ ರಸ್ತೆ

ನಮ್ಮ ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿರುವುದರಿಂದ ಜನಸಾಮಾನ್ಯರ ಮೇಲೆ ಹೆಚ್ಚುವರಿಯಾಗಿ ಆರ್ಥಿಕ ಹೊರೆ ಬೀಳಲಿದೆ. ನಗರದ ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು

ಅಭಿಪ್ರಾಯ ಕಳುಹಿಸಿ

ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ. ವಾಟ್ಸ್‌ಆ್ಯಪ್ ಸಂಖ್ಯೆ: 96060 38256

ನಗರದಲ್ಲಿ ಇಂದು

'ನಮ್ಮ ರಸ್ತೆ–2025' ಪ್ರದರ್ಶನ, ಚರ್ಚಾ ಕಾರ್ಯಕ್ರಮಕ್ಕೆ ಚಾಲನೆ: ಡಿ.ಕೆ. ಶಿವಕುಮಾರ್, ಆಯೋಜನೆ: ಬಿಬಿಎಂಪಿ, ಸ್ಥಳ: ಡಾ. ರಾಜ್‌ಕುಮಾರ್ ಗಾಜಿನ ಮನೆ, ಬಿಬಿಎಂಪಿ ಕೇಂದ್ರ ಕಚೇರಿ, ಬೆಳಿಗ್ಗೆ 10

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಬೆಂಗಳೂರು ನಗರ ರಾಜ್ಯ ಪರಿಷತ್ ಸದಸ್ಯರ ಹಾಗೂ ಜಿಲ್ಲೆ–ತಾಲ್ಲೂಕು ಶಾಖೆಗಳ ನಿರ್ದೇಶಕರು–ಪದಾಧಿಕಾರಿಗಳ ಸಮಾವೇಶದ ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಸಿ.ಎಸ್. ಷಡಾಕ್ಷರಿ, 'ಪ್ರಜಾಸ್ನೇಹಿ ಆಡಳಿತ ಕಾರ್ಯಾಗಾರ'ಕ್ಕೆ ಚಾಲನೆ: ಬಿ.ಎಸ್. ಪಾಟೀಲ, ಅತಿಥಿಗಳು: ಶಾಲಿನಿ ರಜನೀಶ್, ರವೀಂದ್ರ ಗುರುನಾಥ ಧಾಕಪ್ಪ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಸ್ಥಳ: ತ್ರಿಪುರ ವಾಸಿನಿ ಅರಮನೆ ಮೈದಾನ, ಮೇಕ್ರಿ ವೃತ್ತದ ಹತ್ತಿರ, ಬೆಳಿಗ್ಗೆ 10ರಿಂದ

'ಎಂಜಿನಿಯರಿಂಗ್ ವಿಜ್ಞಾನದಲ್ಲಿ ಅನ್ವಯಿಕ ಸಂಶೋಧನೆ' ಕುರಿತು ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಶಿವ ಉಮಾಪತಿ, ಎಂ.ಆರ್. ಸೀತಾರಾಮ್, ಕರಿಸಿದ್ಧಪ್ಪ, ಎನ್.ವಿ.ಆರ್. ನಾಯ್ಡು, ಅಧ್ಯಕ್ಷತೆ: ಎಂ.ಆರ್. ರಾಮಯ್ಯ, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯ ನಗರ, ಬೆಳಿಗ್ಗೆ 10.30

'ಸನಾತನ ವೈದಿಕ ಧರ್ಮ' ವಿಚಾರ ಗೋಷ್ಠಿ: ಉಪನ್ಯಾಸಕರು: ವಾಸವಅನುಜವಿಠ್ಠಲದಾಸ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10.30

'ಸಂವಿಧಾನ ಓದು, ವಿಚಾರ ಕ್ರಾಂತಿಗೆ ಆಹ್ವಾನ' ಉಪನ್ಯಾಸ: ರಘುನಾಥ ಚ.ಹ., ಆಯೋಜನೆ ಮತ್ತು ಸ್ಥಳ: ಕನ್ನಡ ವಿಭಾಗ, ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 11

ಮಕ್ಕಳ ಆರಂಭಿಕ ತಪಾಸಣೆ ಮತ್ತು ಚಿಕಿತ್ಸಾ ಕೇಂದ್ರದ ಉದ್ಘಾಟನೆ: ಅತಿಥಿಗಳು: ಜೂಹಿ ಸ್ಮಿತಾ ಸಿನ್ಹಾ, ಸಂಜಯ್ ಪ್ರಕಾಶ್, ನಟರಾಜ್, ಅಧ್ಯಕ್ಷತೆ: ಮಿಲಿಂದ್ ಗೋಖಲೆ, ಆಯೋಜನೆ: ಮನೋನಂದನ ಟ್ರಸ್ಟ್–ಈಐಸಿ, ಸ್ಥಳ: ಮನೋನಂದನ ಟ್ರಸ್ಟ್, 50ನೇ ಮುಖ್ಯರಸ್ತೆ, 1ನೇ ಹಂತ, ಕುಮಾರಸ್ವಾಮಿ ಲೇಔಟ್, ಸಂಜೆ 4

ಆ.ನೇ. ಉಪಾಧ್ಯೆ, ಡಿ.ಎಲ್.ಎನ್., ಎಂ.ಜಿ. ನಂಜುಂಡಾರಾಧ್ಯ ಸೋಸಲೆ ಅಯ್ಯಾಶಾಸ್ತ್ರಿ ದತ್ತಿ ಕಾರ್ಯಕ್ರಮ: 'ಡಿ.ಎಲ್.ಎನ್. ಅವರ ಸಂಶೋಧನಾ ಲೇಖನಗಳು' ವಿಚಾರ ಮಂಡನೆ: ಸತ್ಯಮಂಗಲ ಮಹಾದೇವ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

'ಭಾರತ್ ಗಂಧರ್ವ ಯಾತ್ರಾ' 16ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ: ವಾದ್ಯ ಮೇಳ ಮತ್ತು ಭಾರತೀಯ ಶಾಸ್ತ್ರೀಯ ಸಂಗೀತ ಗಾಯನ: ಮೈಸೂರು ಸುಮಂತ್, ಶಡಜ್ ಗೋಡ್ಖಿಂಡಿ, ಮೃದಂಗ: ಅದಮ್ಯಾ ರಮಾನಂದ, ತಬಲಾ: ರೂಪಕ್ ಕಲ್ಲೂರಕರ್, ಘಟ: ಶಮಿತಾ ಗೌಡ, ಯುಗಳ ಗಾಯನ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ: ತ್ರಿಶ್ಯೂರ್ ಸಹೋದರರು, ಪಿಟೀಲು: ಎಸ್. ಜನಾರ್ದನ್, ಮೃದಂಗ: ತ್ರಿಶ್ಯೂರ್ ಆರ್. ಮೋಹನ್, ಘಟ: ಕೊವ್ವೈ ಸುರೇಶ, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಸಂಜೆ 5.15ರಿಂದ

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಗೀತಾಂಜಲಿ ಸ್ಕೂಲ್ ಆಫ್ ನಾಟ್ಯಂ ವಿದ್ಯಾರ್ಥಿಗಳು, ನಿರ್ದೇಶನ: ಗೀತಾ ಅನಂತನಾರಾಯಣನ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.30


'ಶ್ರೀಕೃಷ್ಣದೇವರಾಯರ' ಕುರಿತು ಉಪನ್ಯಾಸ: ಸ್ಮಿತಾರೆಡ್ಡಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಹರಿನಾಮ ಸಂಕೀರ್ತನೆ: ಗಾಯನ: ಕವನ ಹೆಗಡೆ, ಹಾರ್ಮೋನಿಯಂ: ಮೃತ್ಯುಂಜಯ ಕಂಬಳೆತ್ತಿ, ತಬಲಾ: ಪ್ರಶಾಂತ್ ಹಾರೋಗೇರಿಮಠ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲು ಬಿಬಿಎಂಪಿ ವ್ಯಾಪ್ತಿ ಮೀರಿ ಕಾರ್ಯ

ಕೆಐಎಎಲ್‌ಗೆ ಎರಡು ಲಿಂಕ್ ರಸ್ತೆ

• ಆರ್. ಮಂಜುನಾಥ್



ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸುಗಮ ಸಂಚಾರಕ್ಕಾಗಿ ಎರಡು ಲಿಂಕ್ ರಸ್ತೆಗಳನ್ನು ನಿರ್ಮಿಸಲು ಬಿಬಿಎಂಪಿ ತನ್ನ ವ್ಯಾಪ್ತಿಯನ್ನು ಮೀರಿ ಕಾರ್ಯ ನಿರ್ವಹಿಸಲು ಸಜ್ಜಾಗಿದೆ.

ಸರ್ಕಾರದ ಆದೇಶದಂತೆ ಬಿಬಿಎಂಪಿ ತನ್ನ ವ್ಯಾಪ್ತಿಗೆ ಒಳಪಡದ ಪ್ರದೇಶ ಗಳಲ್ಲಿ ಎರಡು ರಸ್ತೆಗಳನ್ನು ನಿರ್ಮಿಸಲು ಮುಂದಾಗಿದೆ. ಯಲಹಂಕ ವಲಯದ ರಸ್ತೆ ಮೂಲಸೌಕರ್ಯ ವಿಭಾಗದಿಂದ ಈ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ. ಇದಕ್ಕಾಗಿ ಅಗತ್ಯವಾದ ಅನುದಾನ, ರಸ್ತೆ ವಿಸ್ತರಣೆ, ಭೂಸ್ವಾಧೀನದ ವೆಚ್ಚ, ಕಟ್ಟಡ ನೆಲಸಮ, ಪ್ರಸ್ತುತವಿರುವ ರಸ್ತೆಗೆ ಮರು–ಡಾಂಬರೀಕರಣ ಸೇರಿದ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಟೆಂಡರ್ ಆಹ್ವಾನಿಸಲಾಗಿದೆ.

ವಿಮಾನ ನಿಲ್ದಾಣಕ್ಕೆ ಬಾಗಲೂರು ಮಾರ್ಗವಾಗಿ ಈಗ ನಿರ್ಮಾಣವಾ-ಗುತ್ತಿರುವ ಪರ್ಯಾಯ ರಸ್ತೆಯನ್ನು ಹೊರತುಪಡಿಸಿ ಈ ಎರಡು ಲಿಂಕ್ ರಸ್ತೆಗಳನ್ನು ನಿರ್ಮಿಸಲು ಉದ್ದೇಶಿಸಲಾ-ಗಿದೆ. ಬಾಗಲೂರು ಮುಖ್ಯ ರಸ್ತೆಯಿಂದ ಕಂಟ್ರಿ ಕ್ಲಬ್ ಸಮೀಪದಲ್ಲಿ ಹೊಸ ಲಿಂಕ್ ರಸ್ತೆ ಹಾದು ಹೋಗಲಿದೆ. ಬೇಗೂರು ಬಳಿಯಿರುವ ವಿದ್ಯುತ್ ಪ್ರಸರಣಾ ಘಟಕದ ಸಮೀಪದಿಂದ ಸಾದಹಳ್ಳಿ ಗೇಟ್ ಮಾರ್ಗವಾಗಿ ವಿಮಾನ ನಿಲ್ದಾಣಕ್ಕೆ ಇನ್ನೊಂದು ಲಿಂಕ್ ರಸ್ತೆ ನಿರ್ಮಾಣವಾಗಲಿದೆ. ಈ ಎರಡೂ ಲಿಂಕ್ ರಸ್ತೆಗಳು ಒಂದಕ್ಕೊಂದು ಪೂರಕವಾಗಿ ಸಂಪರ್ಕ ಸಾಧಿಸಲಿವೆ.

'ಎರಡೂ ಲಿಂಕ್ ರಸ್ತೆಗಳನ್ನು ಬಹುತೇಕ ಹೊಸದಾಗಿಯೇ ನಿರ್ಮಾಣ ಮಾಡಬೇಕಿದೆ. ಈ ಭಾಗದಲ್ಲಿ ಕೆಲವು 'ರೆವಿನ್ಯೂ ಲೇಔಟ್'ಗಳಿವೆ. ಅಲ್ಲಿಂದ ಒಂದಷ್ಟು ಮೀಟರ್ ರಸ್ತೆ ಇದೆ. ಅದನ್ನು ವಿಸ್ತರಿಸಬೇಕಿದೆ. ಉಳಿದ ಭಾಗದಲ್ಲಿ ಹೊಸದಾಗಿ ರಸ್ತೆ ನಿರ್ಮಿಸ ಬೇಕಿದ್ದು, ಭೂಸ್ವಾಧೀನ ಆಗಲೇಬೇಕಿದೆ' ಎಂದು ಎಂಜಿನಿಯರ್‌ಗಳು ಮಾಹಿತಿ ನೀಡಿದರು.

'ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿಡಿಆರ್) ಯೋಜನೆಯಡಿ ರಸ್ತೆಗೆ ಅಗತ್ಯವಿರುವ ಜಮೀನು ಸ್ವಾಧೀನಪಡಿಸಿ ಕೊಳ್ಳಲು ಯೋಜಿಸಲಾಗಿದೆ. ಡಿಪಿಆರ್ ಸಿದ್ಧವಾದ ಬಳಿಕ ಎಷ್ಟು ಪ್ರಮಾಣದಲ್ಲಿ ಜಮೀನು ಸ್ವಾಧೀನವಾಗಲಿದೆ ಎಂಬುದು ಸ್ಪಷ್ಟವಾಗಲಿದೆ. ಸರ್ಕಾರದ ಆದೇಶದ ಮೇರೆಗೆ ಪಾಲಿಕೆ ವತಿಯಿಂದ ಈ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ' ಎಂದರು.

'ಸುಮಾರು 13 ಕಿ.ಮೀ. ಉದ್ದದಲ್ಲಿ ನಿರ್ಮಾಣವಾಗಲಿರುವ ಈ ಎರಡೂ ಲಿಂಕ್ ರಸ್ತೆಗಳಿಗೆ ಬಹುತೇಕ ಮಾರ್ಗದುದ್ದಕ್ಕೂ ಜಮೀನು ಸ್ವಾಧೀನ ಆಗಬೇಕಿದೆ. ಸರ್ಕಾರ ನಿಗದಿಪಡಿಸಿ ರುವ ಅನುದಾನ ಭೂಸ್ವಾಧೀನಕ್ಕೇ ವೆಚ್ಚವಾಗುವ ಸಂಭವವಿದೆ. ಅಲ್ಲದೆ, ಜಮೀನು ಕಳೆದುಕೊಳ್ಳುವವರು ಟಿಡಿಆರ್‌ಗೆ ಯಾವ ರೀತಿ ಒಪ್ಪುತ್ತಾರೋ ಈಗಲೇ ಹೇಳಲಾಗದು. ಎರಡು ಲಿಂಕ್ ರಸ್ತೆಗಳ ಮಾರ್ಗಗಳಲ್ಲಿ ಎರಡು ಮೇಲ್ಸೇತುವೆ ಹಾಗೂ ಒಂದು ರೈಲ್ವೆ ಮೇಲ್ಸೇತುವೆಯನ್ನೂ (ಆರ್‌ಒಬಿ) ನಿರ್ಮಿಸಬೇಕಾಗುತ್ತದೆ. ಹೀಗಾಗಿ, ಅನುದಾನದ ಕೊರತೆ ಎದುರಾಗಬಹುದು' ಎನ್ನುತ್ತಾರೆ ಅಧಿಕಾರಿಗಳು.



ಹೊಸ ಎಂಬಿಎ ಕೋರ್ಸ್‌ನ ಪರಿಚಯ ಪತ್ರವನ್ನು ಬಿಡುಗಡೆ ಮಾಡಲಾಯಿತು

ಸಿಎಂಆರ್ ವಿ.ವಿ: ಎಂಬಿಎ ಹೊಸ ಕೋರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿಎಂಆರ್ ವಿಶ್ವವಿದ್ಯಾ ಲಯವು, ಅಮೆರಿಕದ ಇನ್‌ಸ್ಟಿಟ್ಯೂಟ್ ಆಫ್ ಪ್ರಾಡಕ್ಟ್ ಲೀಡರ್‌ಶಿಪ್ ಇಂಕ್ ಸಂಸ್ಥೆಯ ಸಹಭಾಗಿತ್ವದಲ್ಲಿ ಎಂಬಿಎ ಪದವಿಯಲ್ಲಿ ತಾಂತ್ರಿಕ ನಿರ್ವಹಣೆ ಕಲಿಸುವ 'ಎಂಬಿಎ ಇನ್ ಟೆಕ್ನಾಲಜಿ ಮ್ಯಾನೇಜ್‌ಮೆಂಟ್' ಎಂಬ ಕೋರ್ಸ್ ಆರಂಭಿಸುತ್ತಿದೆ' ಎಂದು ವಿಶ್ವ ವಿದ್ಯಾಲಯದ ಸಮ ಕುಲಪತಿ ಜಯದೀಪ್ ಕೆ.ಆರ್.ರೆಡ್ಡಿ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, 'ಇದು ಉದ್ಯಮ ಕ್ಷೇತ್ರವನ್ನು ಬೆಂಬಲಿಸುವಂತಹ ಕೋರ್ಸ್. ಉನ್ನತ ತಂತ್ರಜ್ಞಾನಗಳ ಕಾಲದಲ್ಲಿ ಉದ್ಯಮವನ್ನು ಯಶಸ್ವಿ ಯಾಗಿಸಲು ವೃತ್ತಿಪರರಿಗೆ ಅಗತ್ಯವಿರುವ ನೈಪುಣ್ಯವನ್ನು ಕಲಿಸುವಂತೆ ಈ ಕೋರ್ಸ್ ಅನ್ನು ವಿನ್ಯಾಸಗೊಳಿಸಲಾಗಿದೆ. ಈ ಹೊಸ ಕೋರ್ಸ್‌ನಿಂದ ಟೆಕ್ನೊ ಮ್ಯಾನೇಜರ್‌ಗಳು ರೂಪುಗೊಳ್ಳಲಿದ್ದಾರೆ' ಎಂದು ಹೇಳಿದರು.

ಇನ್‌ಸ್ಟಿಟ್ಯೂಟ್ ಆಫ್ ಪ್ರಾಡಕ್ಟ್ ಲೀಡರ್‌ಶಿಪ್ ಇಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಾಯಿ ಸತೀಶ್ ವೇದಂ ಮಾತನಾಡಿ, 'ಮ್ಯಾನೇಜ್‌ಮೆಂಟ್ ಪರಿಕಲ್ಪನೆ ಈಗ ವಿಕಸನಗೊಂಡಿದೆ. ಮಾನವ ಸಂಪನ್ಮೂಲ ನಿರ್ವಹಣೆಯಿಂದ ಡಿಟಿಜಲ್ ಸಂಪನ್ಮೂಲದ ನಿರ್ವಹಣೆ ಯಡೆಗೆ ಹೊರಳಿದೆ. ಇದಕ್ಕೆ ತಕ್ಕಂತೆ ಉದ್ಯಮ–ತಾಂತ್ರಿಕತೆಯನ್ನು ಸರಿ ದೂಗಿಸಬಲ್ಲ ಟೆಕ್ನೊ ಮ್ಯಾನೇಜರ್‌ಗಳ ಅಗತ್ಯವಿದೆ' ಎಂದು ತಿಳಿಸಿದರು.

ಸಿಎಂಆರ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಕೆ.ಸಿ.ರಾಮಮೂರ್ತಿ, 'ಇನ್‌ಸ್ಟಿಟ್ಯೂಟ್ ಆಫ್ ಪ್ರಾಡಕ್ಟ್ ಲೀಡರ್‌ಶಿಪ್ ಜೊತೆಗಿನ ಸಹಭಾಗಿತ್ವವು ವ್ಯಾಪಾರೋದ್ಯಮಗಳಲ್ಲಿ ಯಶಸ್ಸು ಸಾಧಿಸಲು ಬೇಕಿರುವ ಕೌಶಲಗಳು, ಪ್ರತಿಭೆ ಹಾಗೂ ಅನುಭವವನ್ನು ಲಭ್ಯ ವಾಗಿಸುತ್ತದೆ' ಎಂದು ಹೇಳಿದರು.

ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಎಚ್.ಬಿ.ರಾಘವೇಂದ್ರ, ಡಿಲೈಟ್ ಲೂಪ್ ಸ್ಥಾಪಕ ಹಾಗೂ ಸಿಇಒ ಪಿಂಕೇಶ್ ಶಾ ಸುದ್ದಿ ಗೋಷ್ಠಿಯಲ್ಲಿದ್ದರು.



ಮಡಕೆ ಹೊಳಪು

ಬೇಸಿಗೆ ಶುರುವಾಗುತ್ತಿದ್ದಂತೆ ಬೇಡಿಕೆ ಹೆಚ್ಚಾಗುವ ಮಡಕೆಗಳನ್ನು ಬೆಂಗಳೂರಿನ ಪಾಟರಿ ಟೌನ್‌ನಲ್ಲಿ ಜೋಡಿಸುತ್ತಿರುವ ದೃಶ್ಯ

ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ಪುತ್ರನ ವಿರುದ್ಧ ದೂರು, ಯುವತಿ ಜತೆಗಿನ ಸಲುಗೆ ವಿಚಾರಕ್ಕೆ ಗಲಾಟೆ


ತಾಯಿ ಕಪಾಳಕ್ಕೆ ಹೊಡೆದ ಪಿಎಸ್‌ಐ

ಪ್ರಜಾವಾಣಿ ವಾರ್ತೆ

ಕೆ.ಆರ್. ಪುರ: ಮಗನ ಪ್ರೀತಿಯ ವಿಚಾರವನ್ನು ಪ್ರಶ್ನಿಸಿದ್ದಕ್ಕೆ ತಾಯಿಗೆ ಸಬ್‌ಇನ್‌ಸ್ಪೆಕ್ಟರ್ ಕಪಾಳಕ್ಕೆ ಹೊಡೆದಿದ್ದು, ಈ ಸಂಬಂಧ ಕೆ.ಆರ್.ಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಲ್ಲೆಗೊಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಂಗಳಮ್ಮ ಅವರು ದೂರು ನೀಡಿದ್ದು, ರಾಮಮೂರ್ತಿ ನಗರ ಠಾಣೆಯ ಪಿಎಸ್‌ಐ ಮಂಜುನಾಥ್ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಪುತ್ರ ಮಂಜುನಾಥ್‌ಗೆ 2011ರಲ್ಲಿ ಮದುವೆ ಮಾಡಲಾಗಿತ್ತು. ಕೆ.ಆರ್. ಪುರದ ಅಯ್ಯಪ್ಪನಗರದಲ್ಲಿ ದಂಪತಿ ವಾಸವಿದ್ದರು. ಅದೇ ಬಡಾವಣೆಯಲ್ಲಿ ನೆಲಸಿದ್ದ ಯುವತಿಯ ಜೊತೆಗೆ ಮಂಜುನಾಥ್ ಸಲುಗೆ ಬೆಳೆಸಿಕೊಂಡಿದ್ದ. ಒಂದು ವರ್ಷದಿಂದ ಬುದ್ಧಿಮಾತು ಹೇಳಿದ್ದರೂ, ಆಕೆಯ ಜತೆಗೆ ಸ್ನೇಹ ಮುಂದುವರೆಸಿದ್ದ. ಯುವತಿಗೂ ಕರೆ ಮಾಡಿ ತಿಳಿಸಿದ್ದರೂ ಪ್ರಯೋಜನ ಆಗಿರಲಿಲ್ಲ' ಎಂದು ತಾಯಿ ದೂರಿನಲ್ಲಿ ತಿಳಿಸಿದ್ದಾರೆ.



ಮಂಜುನಾಥ್

'ಫೆಬ್ರುವರಿ 16ರಂದು ಯುವತಿಯ ಮನೆಗೆ ಪುತ್ರಿಯರ ಜತೆಗೆ ತೆರಳಿದ್ದೆ. ಮಗನ ಜೊತೆಗಿನ ಸಂಬಂಧ ಕಡಿತಗೊಳಿಸುವಂತೆ ಮನವಿ ಮಾಡಿದ್ದೆ. ಆಕೆ ನನ್ನ ಜತೆಗೆ ಗಲಾಟೆ ಮಾಡಿದ್ದಳು. ಅದೇ ವೇಳೆ ಸ್ಥಳಕ್ಕೆ ಬಂದ ಮಂಜುನಾಥ್, ನನ್ನ ಕೆನ್ನೆಗೆ ಹೊಡೆದಿದ್ದಾನೆ. ಜಗಳ ಬಿಡಿಸಲು ಬಂದ ಇಬ್ಬರು ಪುತ್ರಿಯರ ಮೇಲೂ ಹಲ್ಲೆ ಮಾಡಿದ್ದಾನೆ. ಯುವತಿ ಮತ್ತು ಆಕೆಯ ತಮ್ಮ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ' ಎಂದು ಉಲ್ಲೇಖಿಸಲಾಗಿದೆ.

ಈ ಸಂಬಂಧ ಪ್ರಕರಣ ದಾಖಲಿಸಿ ಕೊಂಡಿರುವ ಕೆ.ಆರ್. ಪುರ ಠಾಣೆ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಥಾಯ್ಲೆಂಡ್‌ನ ಐವರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಥಾಯ್ಲೆಂಡ್‌ನಿಂದ ವಿಮಾನದ ಮೂಲಕ ಹೈಡ್ರೊ ಗಾಂಜಾ ತಂದಿದ್ದ ಐವರನ್ನು ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕದ(ಎನ್‌ಸಿಬಿ) ಅಧಿಕಾರಿಗಳು, ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ಬಂಧಿತರಿಂದ 20 ಕೆ.ಜಿ. ಹೈಡ್ರೊ ಗಾಂಜಾ ಜಪ್ತಿ ಮಾಡಿ ಕೊಳ್ಳಲಾಗಿದೆ ಎಂದು ಎನ್‌ಸಿಬಿ ಮೂಲಗಳು ತಿಳಿಸಿವೆ.

'ಬಂಧಿತರು 25ರಿಂದ 30 ವರ್ಷ ವಯಸ್ಸಿನ ಒಳಗಿನವರು. ಮಧ್ಯವರ್ತಿಗಳಿಂದ ಹೈಡ್ರೊ ಗಾಂಜಾವನ್ನು ಖರೀದಿಸಿ ಬೆಂಗಳೂರಿಗೆ ತಂದಿದ್ದರು. ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಎನ್‌ಸಿಬಿ ಹೇಳಿದೆ.

'ನಗರದಲ್ಲಿರುವ ಡ್ರಗ್ಸ್ ಪೆಡ್ಲರ್‌ಗಳಿಗೆ ಹೈಡ್ರೊ ಗಾಂಜಾ ಪೂರೈಸಲು ವಿದೇಶದಿಂದ ತಂದಿದ್ದರು. ಹೈಡ್ರೊ ಗಾಂಜಾಕ್ಕೆ ದುಬಾರಿ ಬೆಲೆಯಿದೆ. ಆರೋಪಿಗಳ ವಿಚಾರಣೆ ನಡೆಯುತ್ತಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವೇಶ್ಯಾವಾಟಿಕೆ: ಮನೆ ಮೇಲೆ ಸಿಸಿಬಿ ದಾಳಿ

ಬೆಂಗಳೂರು: ಗಿರಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಹೊಸಕೆರೆಹಳ್ಳಿಯ ದ್ವಾರಕಾನಗರದ ಮನೆಯೊಂದರ ಮೇಲೆ ದಾಳಿ ನಡೆಸಿದ ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ, ಹೊರ ಜಿಲ್ಲೆಯ ಮಹಿಳೆಯನ್ನು ರಕ್ಷಿಸಿದ್ದಾರೆ.

ಹೊರ ಜಿಲ್ಲೆಯಿಂದ ಮಹಿಳೆಯನ್ನು ಕರೆತಂದು ವೇಶ್ಯಾವಾಟಿಕೆಗೆ ದೂಡಿದ್ದ ಆರೋಪಿ ಮಹಿಳೆಯನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

'ವೇಶ್ಯಾವಾಟಿಕೆ ನಡೆಸುತ್ತಿದ್ದ ಮನೆಯ ಮೇಲೆ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಲಾಗಿದೆ. ಮಹಿಳೆಗೆ ಆಮಿಷವೊಡ್ಡಿ ಮನೆಯಲ್ಲಿ ಇರಿಸಿ ಕೊಳ್ಳಲಾಗಿತ್ತು. ಮೊಬೈಲ್ ಮೂಲಕ ಪರಿಚಯ ಸ್ಥರನ್ನು ಸಂಪರ್ಕಿಸಿ, ಮನೆಗೆ ಕರೆಸಿಕೊಂಡು ವೇಶ್ಯಾವಾಟಿಕೆ ನಡೆಸುತ್ತಾ ಮಹಿಳೆ ಹಣ ಸಂಪಾದನೆ ಮಾಡುತ್ತಿದ್ದರು. ಆಕೆಯ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ತಿಳಿಸಿದರು.

ವಿರಳ ಕಾಯಿಲೆ ಜಾಗೃತಿ ಓಟ 23ಕ್ಕೆ

ಭಾರತೀಯ ವಿರಳ ಕಾಯಿಲೆ ಸಂಸ್ಥೆಯಿಂದ ಆಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರಳ ಕಾಯಿಲೆ ಹಾಗೂ ಚಿಕಿತ್ಸೆ ಬಗ್ಗೆ ಜಾಗೃತಿ ಮೂಡಿಸಲು ಭಾರತೀಯ ವಿರಳ ಕಾಯಿಲೆ ಸಂಸ್ಥೆಯು (ಒಆರ್‌ಡಿಐ) ಇದೇ 23ರಂದು ಬೆಳಿಗ್ಗೆ 6 ಗಂಟೆಗೆ ಬೆಂಗಳೂರು ಸೇರಿ ದೇಶದ 21 ನಗರಗಳಲ್ಲಿ 'ರೇಸ್ ಫಾರ್ 7' ಜಾಗೃತಿ ಓಟ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಒಆರ್‌ಡಿಐ ಸಹ ಸಂಸ್ಥಾಪಕ ಪ್ರಸನ್ನ ಶಿರೋಳ್, 'ಬೆಂಗಳೂರಿನಲ್ಲಿ ಯು.ಬಿ. ಸಿಟಿ ಎದುರಿನ ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್ ಮೈದಾನದಿಂದ ಓಟ ಪ್ರಾರಂಭವಾಗಲಿದೆ. ಏಳು ಹಾಗೂ 10 ಕಿ.ಮೀ. ಓಟ ನಡೆಯಲಿದೆ. ಇದೇ ವೇಳೆ ಮೈಸೂರು, ನವದೆಹಲಿ, ಮುಂಬೈ, ಹೈದರಾಬಾದ್, ಜೈಪುರ, ಕೊಚ್ಚಿ, ಕೋಲ್ಕತ್ತ, ಚೆನ್ನೈ ಸೇರಿ ವಿವಿಧ ನಗರ ಗಳಲ್ಲಿಯೂ ನಡೆಯಲಿವೆ. ವಿರಳ ಕಾಯಿಲೆ ಎದುರಿಸುತ್ತಿರುವವರು, ಅವರ ಕುಟುಂಬಸ್ಥರು, ಸಾರ್ವಜನಿಕರು ಸಹ ಈ ಓಟದಲ್ಲಿ ಪಾಲ್ಗೊಳ್ಳುತ್ತಾರೆ. ದೇಶದಾದ್ಯಂತ ನಡೆಯುವ ಈ ಓಟದಲ್ಲಿ 10 ಸಾವಿರ ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಬೆಂಗಳೂರಿನಲ್ಲಿ ಮೂರು ಸಾವಿರ ಜನರು ಭಾಗವಹಿಸಬಹುದು' ಎಂದು ಹೇಳಿದರು.

'ರೋಗದ ಬಗ್ಗೆ ಜಾಗೃತಿ ಮೂಡಿಸುವ ಜತೆಗೆ ರೋಗಿಗಳಿಗೆ ಬೆಂಬಲ ಸೂಚಿಸಲು ನಿಧಿಯನ್ನೂ ಈ ಓಟದ ಮೂಲಕ ಸಂಗ್ರಹಿಸಲಾಗು ತ್ತಿದೆ. ಓಟದಲ್ಲಿ ಭಾಗವಹಿಸುವವರು ಹೆಸರು ನೋಂದಾಯಿಸಿಕೊಂಡು, ಹಣ ಪಾವತಿಸುವ ಅವಕಾಶ ನೀಡಲಾಗಿದೆ. ₹10 ಲಕ್ಷದಿಂದ ₹20 ಲಕ್ಷ ನಿಧಿ ಸಂಗ್ರಹವಾಗುವ ನಿರೀಕ್ಷೆಯಿದೆ. ಇದನ್ನು ರೋಗಿಗಳಿಗೆ ಪೂರಕ ಸೌಲಭ್ಯ ಒದಗಿಸಲು ಬಳಸಿಕೊಳ್ಳಲಾಗುವುದು. ಓಟ ಸಾಧ್ಯವಾಗದವರು ನಡಿಗೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಸರು ನೋಂದಾಯಿಸಿಕೊಂಡು ಭಾಗವಹಿಸಿದ ವರಿಗೆ ಟೀ ಶರ್ಟ್, ಪದಕ, ಪ್ರಮಾಣಪತ್ರ ಹಾಗೂ ತಿಂಡಿಯನ್ನೂ ಒದಗಿಸಲಾಗು ತ್ತದೆ' ಎಂದರು.

ಸೆಂಟರ್ ಫಾರ್ ಹ್ಯೂಮನ್ ಜೆನೆಟಿಕ್ಸ್ ಕೇಂದ್ರದ ಡಾ. ಮೀನಾಕ್ಷಿ ಭಟ್, 'ರೇಸ್ ಫಾರ್ 7 ಅಭಿಯಾನದ ಏಳು ಸಂಖ್ಯೆಯು ಏಳು ಸಾವಿರ ವಿರಳ ಕಾಯಿಲೆಗಳನ್ನು ಪ್ರತಿನಿಧಿಸುತ್ತದೆ. ಈ ಕಾಯಿಲೆಗಳು ಗೋಚರಿಸಲು ಕನಿಷ್ಠ ಏಳು ವರ್ಷಗಳು ಬೇಕಾಗುತ್ತವೆ. ದೇಶದಲ್ಲಿ ಏಳು ಕೋಟಿ ಜನರು ಈ ಕಾಯಿಲೆಯಿಂದ ಬಳಲು ತ್ತಿದ್ದಾರೆ. ಈ ಕಾಯಿಲೆ ಆನುವಂಶಿಕ ವಾಗಿದ್ದು, ಶೇಕಡ 5ರಷ್ಟು ಕಾಯಿಲೆಗಳಿಗೆ ಮಾತ್ರ ನಿಖರ ಚಿಕಿತ್ಸೆಗಳು ಲಭ್ಯವಿವೆ. ಉಳಿದ ಶೇ 95ರಷ್ಟು ಕಾಯಿಲೆಗಳಿಗೆ ಪೂರಕ ಚಿಕಿತ್ಸೆ ಒದಗಿಸಬೇಕಾಗುತ್ತದೆ. ಇರುವ ಚಿಕಿತ್ಸೆಯೂ ದುಬಾರಿಯಾಗಿದೆ' ಎಂದು ಹೇಳಿದರು.

ನೋಂದಣಿಗೆ: registration.ordindia.in

'ಜಾಗತಿಕ ಮಟ್ಟದ ನಿಯಮವನ್ನೇ ಪಾಲಿಸಿದ್ದೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾಗತಿಕ ಮಟ್ಟದಲ್ಲಿ ಪ್ರತಿ ಶಿಕ್ಷಣ ಸಂಸ್ಥೆ ಪಾಲಿಸುವ ನಿಯಮಗಳ ಪ್ರಕಾರ ವಿಳಂಬ ಶುಲ್ಕ ಪಾವತಿಗೆ ದಂಡ ವಿಧಿಸಲಾಗುತ್ತದೆ' ಎಂದು ಯಲಹಂಕದ ವಿಬ್‌ಗಯಾರ್ ಶಾಲೆಯ ಆಡಳಿತ ಮಂಡಳಿ ಸ್ಪಷ್ಟಪಡಿಸಿದೆ.

'ವಿಳಂಬ ಶುಲ್ಕ ಪಾವತಿಗೆ ಶಾಲೆಯವರು ಶೇ 3ರಷ್ಟು ದಂಡ ವಿಧಿಸಿದೆ' ಎಂಬ ಪೋಷಕರ ಆರೋಪ ಕುರಿತು ಪ್ರತಿಕ್ರಿಯಿಸಿ ರುವ ಆಡಳಿತ ಮಂಡಳಿ, 'ನಿಯಮ ಗಳಿದ್ದರೂ ನಾವು ಸಹಾನುಭೂತಿ, ನ್ಯಾಯದ ಪರ. ನೈಜ ಸಮಸ್ಯೆಗಳಿ ರುವ ಕುಟುಂಬಗಳಿಗೆ ನೆರವಾಗಲು ಮುಂದಾಗಿದ್ದೆವು. ಸಮಸ್ಯೆ ಪರಿಹರಿಸಲು ಮುಕ್ತವಾಗಿ ಚರ್ಚಿಸಲು ಬಯಸಿದ್ದೆವು' ಎಂದು ತಿಳಿಸಿದೆ.

'ಅರ್ಥಪೂರ್ಣ ಚರ್ಚೆಗಳಿಗೆ ನಾವು ಸಿದ್ಧರಾಗಿದ್ದೇವೆ. ಸಂಸ್ಥೆಯ ಮೌಲ್ಯಗಳು, ವಿದ್ಯಾರ್ಥಿಗಳ ಹಿತಾಸಕ್ತಿ ಎರಡನ್ನೂ ಎತ್ತಿಹಿಡಿಯುವ ರೀತಿಯಲ್ಲಿ ಸಮಸ್ಯೆ ಪರಿಹರಿಸಲು ಆಶಿಸುತ್ತೇವೆ. ಸಹಯೋಗ, ಪಾರದರ್ಶಕತೆ ಮತ್ತು ಸಂವಹನದ ಮೇಲೆ ನಂಬಿಕೆ ಇಟ್ಟು ಪ್ರತಿ ಮಗುವಿಗೂ ಉತ್ತಮ ಭವಿಷ್ಯ ರೂಪಿಸಲು ನಮ್ಮ ಸಂಸ್ಥೆ ಬದ್ಧವಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿವಾಜಿ ಒಂದು ಧರ್ಮಕ್ಕೆ ಸೀಮಿತರಲ್ಲ

ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಸಚಿವ ಶಿವರಾಜ ತಂಗಡಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಛತ್ರಪತಿ ಶಿವಾಜಿ ಮಹಾರಾಜರು ತನ್ನ ರಾಜ್ಯದಲ್ಲಿ ಎಲ್ಲ ಸಮುದಾಯಗಳಿಗೆ ಕೊಡುಗೆ ನೀಡಿದವರು. ಕೇಸರೀಕರಣಗೊಳಿಸಿ ಅವರನ್ನು ಒಂದು ಧರ್ಮಕ್ಕೆ ಸೀಮಿತ ಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಬೇಸರ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ಬುಧವಾರ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ತನ್ನದೇ ಆದ ಇತಿಹಾಸವನ್ನು ಸೃಷ್ಟಿಸಿದ್ದ ಶಿವಾಜಿ ಅವರ ಆಡಳಿತ ಅವಧಿಯಲ್ಲಿ ಎಲ್ಲ ಧರ್ಮಗಳ ಪರ ಇದ್ದರು. ಸರ್ವ- ಧರ್ಮ ಸಹಿಷ್ಣುತೆಗೆ ಶಿವಾಜಿಯ ಆಡಳಿತ ಮಾದರಿಯಾಗಿತ್ತು. ಇತಿಹಾಸವನ್ನು ಸರಿಯಾಗಿ ತಿಳಿದು ಕೊಳ್ಳಬೇಕು ಎಂದು ಸಲಹೆ ನೀಡಿದರು.



ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಉದಯ್ ಬಿ. ಗರುಡಾಚಾರ್, ಗೋಸಾಯಿ ಸಂಸ್ಥಾನದ ಮಂಜುನಾಥ ಭಾರತಿ ಸ್ವಾಮೀಜಿ, ಸಚಿವ ಶಿವರಾಜ ಎಸ್. ತಂಗಡಗಿ. ವಿಧಾನ ಪರಿಷತ್ ಸದಸ್ಯ ಮಾರುತಿರಾವ್ ಮುಳೆ ಅವರು ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಪ್ರಜಾವಾಣಿ ಚಿತ್ರ

ಮರಾಠ ದೊರೆ ಶಾಹು ಮಹಾರಾಜ್ ದೇಶದಲ್ಲಿಯೇ ಮೊದಲ ಬಾರಿಗೆ ಮೀಸಲಾತಿಯನ್ನು ಜಾರಿಗೆ ತಂದು ತುಳಿತಕ್ಕೊಳಗಾದವರಿಗೆ ಅವಕಾಶ ನೀಡಿದರು. ಅಂಬೇಡ್ಕರ್ ಅವರಿಗೆ ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಲು ಸಹಾಯ ಮಾಡಿದರು. ಹೀಗೇ ಅನೇಕ ರೀತಿಯಲ್ಲಿ ಮರಾಠರು ದೇಶಕ್ಕೆ ಕೊಡುಗೆಗಳನ್ನು ನೀಡಿದ್ದಾರೆ ಎಂದು ನೆನಪಿಸಿಕೊಂಡರು.

ಶ್ರೀಮಂತರ, ಅಧಿಕಾರಸ್ಥರ ಮಕ್ಕಳು ಉನ್ನತ ಹುದ್ದೆಗೆ ಹೋಗುವುದು ದೊಡ್ಡ ವಿಷಯವಲ್ಲ. ಕಟ್ಟಕಡೆಯ ವ್ಯಕ್ತಿಗಳ ಮಕ್ಕಳು ಹೋಗಬೇಕು. ಅದಕ್ಕಾಗಿ ಬಡವರ ಮಕ್ಕಳು ವಿದೇಶ ವ್ಯಾಸಂಗ ಮಾಡಲು ನೀಡಲಾಗು ತ್ತಿದ್ದ ಮೊತ್ತವನ್ನು ₹25 ಲಕ್ಷದಿಂದ 50 ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ ಎಂದರು.

ಹೋಟೆಲ್ ಉದ್ಯಮ ನಡೆಸುವವರಿಗೆ ₹5 ಲಕ್ಷದವರೆಗೆ ಸಾಲ ಸೌಲಭ್ಯ ಒದಗಿಸಲಾಗುವುದು. ಕನಕಗಿರಿ ಕ್ಷೇತ್ರದಲ್ಲಿ ಇರುವ ಸಂಭಾಜಿ ಸಮಾಧಿಯನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಮರಾಠ ಅಭಿವೃದ್ಧಿ ನಿಗಮದ ವತಿಯಿಂದ ಫಲಾನುಭವಿಗಳಿಗೆ ಸಾರಥಿ ಯೋಜನೆಯಡಿ ಕಾರುಗಳನ್ನು ವಿತರಿಸಲಾಯಿತು. ಗೋಸಾಯಿ ಸಂಸ್ಥಾನದ ಮಂಜುನಾಥ ಭಾರತಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕ ಉದಯ್ ಬಿ.ಗರುಡಾಚಾರ್ ಅಧ್ಯಕ್ಷತೆ ವಹಿಸಿದ್ದರು.

ವಿಧಾನಪರಿಷತ್ ಸದಸ್ಯ ಮಾರುತಿರಾವ್ ಮುಳೆ, ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಅಧ್ಯಕ್ಷ ಎಸ್. ಸುರೇಶ್ ರಾವ್ ಸಾಠೆ, ಮರಾಠ ಅಸೋಸಿಯೇಶನ್ ಅಧ್ಯಕ್ಷ ಮನೋಜ್ ಕುಮಾರ್, ಸಾಹಿತಿ ಜಗನ್ನಾಥರಾವ್ ಬಹುಳೆ, ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಜಂಟಿ ನಿರ್ದೇಶಕ ಬಲವಂತರಾಯ ಪಾಟೀಲ, ಮರಾಠ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಆರ್. ಪಾಗೋಜಿ ಭಾಗವಹಿಸಿದ್ದರು.

ಎಸ್ಸೆಸ್ಸೆಲ್ಸಿ ಫಲಿತಾಂಶ ವೃದ್ಧಿಗೆ ವಿಶೇಷ ತರಗತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಶಾಲೆಗಳಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ವೃದ್ಧಿಸಲು ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ಆಯೋಜಿಸಲಾಗಿದೆ ಎಂದು ಶಿಕ್ಷಣ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಹೇಳಿದರು.

ಪಾಲಿಕೆಯ ಪ್ರೌಢಶಾಲೆಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿ, ವಿದ್ಯಾರ್ಥಿಗಳಿಗೆ ಯಾವ ರೀತಿ ಶಿಕ್ಷಣ ನೀಡಲಾಗುತ್ತಿದೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಫಲಿತಾಂಶ ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ಬಿಬಿಎಂಪಿಯ 33 ಪ್ರೌಢಶಾಲೆಗಳಲ್ಲಿ, 2024-25ನೇ ಸಾಲಿನಲ್ಲಿ 3,148 ಬಾಲಕರು, 4,248 ಬಾಲಕಿಯರು ಸೇರಿದಂತೆ ಒಟ್ಟು 7,396 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಶೇಕಡ 100ರಷ್ಟು ಫಲಿತಾಂಶ ದಾಖಲಿಸುವ ಉದ್ದೇಶದಿಂದ, ಎಲ್ಲ ಶಾಲೆಗಳಲ್ಲಿಯೂ ಬೆಳಿಗ್ಗೆ ಮತ್ತು ಸಂಜೆ ವೇಳೆಯಲ್ಲಿ ಮೂರು ಗಂಟೆಗೂ ಹೆಚ್ಚು ಕಾಲ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಜೊತೆಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಬೇರೆ ಜಿಲ್ಲೆ, ಬೇರೆ ರಾಜ್ಯಗಳ ತೆಲುಗು, ಹಿಂದಿ, ತಮಿಳು ವಿದ್ಯಾರ್ಥಿಗಳೇ ಹೆಚ್ಚಿದ್ದಾರೆ. ಈ ವಿದ್ಯಾರ್ಥಿ ಗಳಿಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಯಾವ ವಿಷಯಗಳ ಕಲಿಕೆಯಲ್ಲಿ ಹಿಂದುಳಿದಿದ್ದಾರೆ ಎಂಬುದನ್ನು ಅರಿತು, ಆ ವಿಷಯಕ್ಕೆ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತಿದೆ ಎಂದರು.

ಸಿಂಗನಾಯಕನಹಳ್ಳಿ ಆರ್‌ಎಸ್‌ಎಸ್‌ಎನ್ ಅಧ್ಯಕ್ಷರ ಸ್ಥಾನ

ವಾಣಿಶ್ರೀ ವಿಶ್ವನಾಥ್ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಸಂಘದ (ಆರ್‌ಎಸ್‌ಎಸ್‌ಎನ್) ನೂತನ ಅಧ್ಯಕ್ಷರಾಗಿ ವಾಣಿಶ್ರೀ ವಿಶ್ವನಾಥ್ ಅವಿರೋಧವಾಗಿ ಆಯ್ಕೆ ಯಾಗಿದ್ದಾರೆ.

ಮುಂದಿನ ಐದು ವರ್ಷಗಳ ಅವಧಿಗಾಗಿ ಅಧ್ಯಕ್ಷರ ಸ್ಥಾನಕ್ಕಾಗಿ ಬುಧವಾರ ಚುನಾವಣಾ ಪ್ರಕ್ರಿಯೆ ನಡೆಯಿತು. ಒಟ್ಟು 12 ಸದಸ್ಯಬಲ ಹೊಂದಿರುವ ಸಂಘದಲ್ಲಿ ಇವರೊಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಈ ವೇಳೆ ಮಾತನಾಡಿದ ವಾಣಿಶ್ರೀ ವಿಶ್ವನಾಥ್, 'ಸಂಘದ ಜಾಗ ಇರುವ ಕಡೆಗಳಲ್ಲಿ ಈಗಾಗಲೇ ಕಲ್ಯಾಣ ಮಂಟಪ ಮತ್ತು ವಾಣಿಜ್ಯ ಕಟ್ಟಡ ಗಳನ್ನು ನಿರ್ಮಿಸಲಾಗಿದೆ. ಮುಂದಿನ ದಿನಗಳಲ್ಲಿ ಸಿಎ ನಿವೇಶನಗಳನ್ನು ಖರೀದಿಸಿ, ಹೆಚ್ಚುವರಿ ವಾಣಿಜ್ಯ ಕಟ್ಟಡ ಗಳನ್ನು ನಿರ್ಮಿಸಲಾಗುವುದು. ಹೆಚ್ಚುವರಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಯೋಜನೆ ರೂಪಿಸಲಾಗಿದೆ' ಎಂದು ತಿಳಿಸಿದರು.

'ರೈತರು ಹಾಗೂ ಮಹಿಳೆಯರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸಾಲ ಸೌಲಭ್ಯ ಗಳನ್ನು ನೀಡುವುದರ ಜೊತೆಗೆ ನಿರ್ದೇಶಕರು ಹಾಗೂ ಸಿಬ್ಬಂದಿಯ ಸಹಕಾರದೊಂದಿಗೆ ಸಂಘವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಪ್ರಯತ್ನ ಮಾಡಲಾಗುವುದು' ಎಂದು ಹೇಳಿದರು.



ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ವಾಣಿಶ್ರೀ ವಿಶ್ವನಾಥ್ ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಶಾಸಕ ಎಸ್‌ಆರ್‌ವಿಶ್ವನಾಥ್ ಸೇರಿ ಬಿಜೆಪಿ ಮುಖಂಡರು ಹಾಗೂ ನಿರ್ದೇಶಕರು ವಿಜಯೋತ್ಸವದಲ್ಲಿ ಪಾಲ್ಗೊಂಡರು

ಹೊಲಿಗೆಯಂತ್ರ ವಿತರಣೆ: ಇದೇ ಸಂದರ್ಭದಲ್ಲಿ ರಾಜಾನುಕುಂಟೆ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಹೊಲಿಗೆಯಂತ್ರ ತರಬೇತಿ ಪಡೆದಿರುವ 650 ಮಹಿಳೆಯರಿಗೆ ಉಚಿತವಾಗಿ ಹೊಲಿಗೆಯಂತ್ರ ವಿತರಿಸಲಾಯಿತು.

ಶಾಸಕ ಎಸ್.ಆರ್.ವಿಶ್ವನಾಥ್, ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್.ರಾಜಣ್ಣ, ಚೊಕ್ಕನಹಳ್ಳಿ ವೆಂಕಟೇಶ್, ಅಲೋಕ್ ವಿಶ್ವನಾಥ್, ಸಂಘದ ನಿರ್ದೇಶಕರಾದ ಎಂ.ಪಿ.ಈಶ್ವರಾಚಾರಿ, ಎ.ತಿಮ್ಮರಾಯಗೌಡ, ಕೆ.ಆರ್. ಪುಟ್ಟರಾಜು, ಮಂಜುನಾಥ.ಎಂ, ರಾಮಚಂದ್ರರೆಡ್ಡಿ.ಎಸ್.ಎನ್, ಎನ್. ಶಿವಕುಮಾರ್, ಮುನಿಯಪ್ಪ ಎನ್. ಕೂರ್ಲಪ್ಪ, ವೈ.ಕೆ.ಮುರಾರಿರಾಮು, ಜಿ.ಎಸ್. ಪುಷ್ಪಲತ, ಚಂದ್ರು.ಎ, ಅಮರಾವತಿ, ಮುಖ್ಯಕಾರ್ಯ ನಿರ್ವಹಣಾ ಅಧಿಕಾರಿ ಶಶಿಧರ್.ಆರ್ ಉಪಸ್ಥಿತರಿದ್ದರು.

ರ್‍ಯಾಪಿಡೊ ಬೈಕ್ ನಿಷೇಧಿಸಲು ಆಗ್ರಹ

ಬೆಂಗಳೂರು: ಅನಧಿಕೃತವಾಗಿ ಪ್ರಯಾಣಿಕರನ್ನು ಒಯ್ಯುತ್ತಿರುವ ರ್‍ಯಾಪಿಡೊ ಬೈಕ್‌ಗಳನ್ನು ನಿಷೇಧಿಸಲು ವಿಧಾನಮಂಡಲದ ಬಜೆಟ್ ಅಧಿವೇಶನ ದಲ್ಲಿ ಧ್ವನಿ ಎತ್ತಬೇಕು ಎಂದು ವಿವಿಧ ಆಟೊ ಸಂಘಗಳು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರಿಗೆ ಬುಧವಾರ ಮನವಿ ಸಲ್ಲಿಸಿವೆ.

ರ್‍ಯಾಪಿಡೊ ಬೈಕ್‌ಗಳಿಂದಾಗಿ ಪ್ರಯಾಣಿಕರು ಆಟೊ ಬಳಸುವುದು ಕಡಿಮೆಯಾಗಿದೆ. ಆದಾಯವಿಲ್ಲದೇ ಆಟೊ ಚಾಲಕರು ಮತ್ತು ಮಾಲೀಕರು ಜೀವನ ನಡೆಸುವುದೇ ಕಷ್ಟವಾಗಿದೆ. ಆಟೊ ಚಾಲಕರ ಪರ ಧ್ವನಿ ಎತ್ತಬೇಕು. ಸರ್ಕಾರವು ಚಾಲಕರ ಪರ ಕ್ರಮ ಕೈಗೊಳ್ಳುವಂತೆ ಮಾಡಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಇಂಡಿಯನ್ ವೆಹಿಕಲ್ ಡ್ರೈವರ್ಸ್ ಟ್ರೇಡ್ ಯೂನಿಯನ್ ಅಧ್ಯಕ್ಷ ಗಂಡಸಿ ಸದಾನಂದ ಸ್ವಾಮಿ, ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ಅಧ್ಯಕ್ಷ ಸಂತೋಷ್ ಕುಮಾರ್, ಪ್ರಧಾನ ಕಾರ್ಯದರ್ಶಿ ರಾಜು ಕನ್ನಡಿಗ, ಆಟೊ ಸೇನೆ ಅಧ್ಯಕ್ಷ ಚೇತನ್, ಪದಾಧಿಕಾರಿಗಳು ಭಾಗವಹಿಸಿದ್ದರು.

ಎ.ಐ ಕ್ಯಾಮೆರಾ ಸುಳಿವು: ಆರೋಪಿ ಬಂಧನ

ಬೆಂಗಳೂರು: ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಕೃತಕ ಬುದ್ಧಿಮತ್ತೆ ಆಧಾರಿತ ಮುಖಚಹರೆ ಗುರುತಿಸುವ ಕ್ಯಾಮೆರಾದ ನೆರವಿನಿಂದ ಮಡಿವಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಫ್ರೋಜ್ ಪಾಷಾ ಬಂಧಿತ ಆರೋಪಿ. ಡಕಾಯಿತಿ ಪ್ರಕರಣದಲ್ಲಿ ಜಾಮೀನು ಪಡೆದಿದ್ದ ಆರೋಪಿ ಬಳಿಕ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ.

ಜೈಲಿನಲ್ಲಿರುವ ಸಹೋದರನನ್ನು ಭೇಟಿ ಮಾಡಲು ಅಫ್ರೋಜ್ ಪಾಷಾ ಬಂದಿರುವ ಕುರಿತು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಭದ್ರತೆಗೆ ನಿಯೋಜಿಸಿರುವ ಕೈಗಾರಿಕಾ ಭದ್ರತಾ ಪಡೆಯ ಅಧಿಕಾರಿಗಳು ನೀಡಿದ ಮಾಹಿತಿ ಆಧರಿಸಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

10 ವರ್ಷಗಳ ಹಿಂದೆ ಮಡಿವಾಳ ಠಾಣೆಯಲ್ಲಿ ದಾಖಲಾಗಿದ್ದ ಡಕಾಯಿತಿ ಪ್ರಕರಣದಲ್ಲಿ ಜೈಲು ಸೇರಿದ್ದ ಅಫ್ರೋಜ್ ಪಾಷಾ ಜಾಮೀನು ಪಡೆದುಕೊಂಡಿದ್ದ. ನಂತರ ನ್ಯಾಯಾಲಯದ ವಿಚಾರಣೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ಈ ನಡುವೆ ಪ್ರಕರಣವೊಂದರಲ್ಲಿ ಬಂಧನವಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ಸಹೋದರನನ್ನು ಭೇಟಿಯಾಗಲು ಆರೋಪಿ ಬಂದಿದ್ದ. ಜೈಲಿನಲ್ಲಿ ಪೊಲೀಸ್ ಇಲಾಖೆಯಿಂದ ಅಳವಡಿಸಲಾಗಿದ್ದ ಕೃತಕ ಬುದ್ಧಿಮತ್ತೆ ಆಧಾರಿತ ಕ್ಯಾಮೆರಾದಲ್ಲಿ ಅಫ್ರೋಜ್ ಪಾಷಾನ ಮುಖಚಹರೆ ಪತ್ತೆಯಾಗಿತ್ತು. ಆತನ ವಿರುದ್ಧ ದಾಖಲಾಗಿರುವ ಪ್ರಕರಣಗಳು ಹಾಗೂ ಬಂಧನ ವಾರಂಟ್ ಜಾರಿಯಾದ ಬಗ್ಗೆ ಎಐ ಆಧಾರಿತ ಕ್ಯಾಮೆರಾ ಸುಳಿವು ನೀಡಿತ್ತು. ಕಾರಾಗೃಹದ ಅಧಿಕಾರಿಗಳು ಮಡಿವಾಳ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ಅವರು ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಬೆಂಗಾವಲು ಪಡೆ ತೆರಳುವ ಮಾರ್ಗದಲ್ಲಿ ಕರ್ತವ್ಯದಲ್ಲಿದ್ದ ಪೊಲೀಸ್

ಕಾನ್‌ಸ್ಟೆಬಲ್ ಮೇಲೆ ಬೈಕ್ ಹತ್ತಿಸಿದ್ದವ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಭದ್ರತೆಗಾಗಿ ನಿಯೋಜಿಸಿದ್ದ ಬೆಂಗಾವಲು ಪಡೆ ತೆರಳುವ ಮಾರ್ಗದಲ್ಲಿ ಕರ್ತವ್ಯದಲ್ಲಿದ್ದ ಸಂಚಾರ ವಿಭಾಗದ ಹೆಡ್ ಕಾನ್‌ಸ್ಟೆಬಲ್ ಮೇಲೆ ಸ್ಕೂಟರ್ ಹತ್ತಿಸಿ, ಗಾಯಗೊಳಿಸಿದ್ದ ಆರೋಪಿಯನ್ನು ಕಬ್ಬನ್ ಪಾರ್ಕ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಸ್ಸಾಂ ಅಹಮದ್ ದಿಲ್ವಾರ್ ಹುಸೇನ್ (22) ಬಂಧಿತ ಆರೋಪಿ. ಘಟನೆಯಲ್ಲಿ ಕಾನ್‌ಸ್ಟೆಬಲ್ ದಿನೇಶ್ ಅವರು ಗಾಯಗೊಂಡಿದ್ದರು.

'ಆರು ತಿಂಗಳಿಂದ ಶಿವಾಜಿನಗರ ಬಾಡಿಗೆ ಮನೆಯಲ್ಲಿ ನೆಲಸಿದ್ದ ಅಹಮದ್ ದಿಲ್ವಾರ್ ಹುಸೇನ್, ಕೋರಮಂಗಲದ ಮಾಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ. ಆತನನ್ನು ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಯಲಹಂಕದ ವಾಯುನೆಲೆಯಲ್ಲಿ ನಡೆದಿದ್ದ ಏರೊ ಇಂಡಿಯಾದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ರಾಜನಾಥ್ ಸಿಂಗ್ ಅವರು ನಗರಕ್ಕೆ ಬಂದಿದ್ದರು.



ಅಹಮದ್ ದಿಲ್ವಾರ್ ಹುಸೇನ್

ಫೆಬ್ರುವರಿ 9ರಂದು ಅವರು ತೆರಳುವ ಮಾರ್ಗದಲ್ಲಿ ಬಂದೋಬಸ್ತ್‌ಗೆಂದು ಹೆಚ್ಚಿನ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿತ್ತು. ಅಂದು ಮಧ್ಯಾಹ್ನ 1.50ರ ಸುಮಾರಿಗೆ ಅವರ ಬೆಂಗಾವಲು ಪಡೆ ತೆರಳುತ್ತಿತ್ತು. ದಿನೇಶ್ ಅವರು ಅನಿಲ್ ಕುಂಬ್ಳೆ ವೃತ್ತದಿಂದ ಬಿಆರ್‌ವಿ ಜಂಕ್ಷನ್ ಕಡೆಗೆ ಬರುವ ವಾಹನಗಳನ್ನು ತಾತ್ಕಾಲಿಕವಾಗಿ ತಡೆಯುವ ಕೆಲಸದಲ್ಲಿ ತೊಡಗಿದ್ದರು. ಅದೇ ವೇಳೆ ಆರೋಪಿ ವೇಗವಾಗಿ ಸ್ಕೂಟರ್‌ನಲ್ಲಿ ಬರುತ್ತಿದ್ದ. ಬೆಂಗಾವಲು ಪಡೆ ಬರುತ್ತಿದ್ದರೂ ಉದ್ದೇಶಪೂರ್ವಕವಾಗಿ ಸ್ಕೂಟರ್ ಅನ್ನು ಅತಿವೇಗವಾಗಿ ಚಲಾಯಿಸಿಕೊಂಡು ಮುನ್ನುಗ್ಗಿದ್ದ. ಸ್ಕೂಟರ್ ತಡೆದರೂ ಕಾನ್‌ಸ್ಟೆಬಲ್ ದಿನೇಶ್ ಅವರಿಗೆ ಡಿಕ್ಕಿ ಹೊಡೆಸಿ ಗಾಯಗೊಳಿಸಿದ್ದ' ಎಂದು ಪೊಲೀಸರು ಹೇಳಿದರು.

'ದಿನೇಶ್ ಅವರು ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ. ಅವರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸ್ನೇಹಿತನನ್ನು ಭೇಟಿಯಾಗಲು ಸ್ಕೂಟರ್‌ನಲ್ಲಿ ತೆರಳುತ್ತಿದ್ದುದ್ದಾಗಿ ಆರೋಪಿಯು ವಿಚಾರಣೆ ವೇಳೆ ತಿಳಿಸಿದ್ದಾನೆ. ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದ ಮೇಲೆ ಅಹಮದ್ ದಿಲ್ವಾರ್ ಹುಸೇನ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಎಚ್‌.ಟಿ.ಶೇಖರ್ ಮಾಹಿತಿ ನೀಡಿದರು.

ಜೆಸಿಬಿ ಯಂತ್ರದ ಚಕ್ರ ಹರಿದು ಮಗು ಸಾವು

ಅಪರಾಧ ಸುದ್ದಿ

ಬೆಂಗಳೂರು: ಕಾಡುಗೋಡಿ ಬೆಳ್ತೂರು ಸಿಟಿ ಲೇಔಟ್‌ನಲ್ಲಿ ಆಟವಾಡುತ್ತಿದ್ದ ಎರಡು ವರ್ಷದ ಮಗುವಿನ ಮೇಲೆ ಜೆಸಿಬಿ ಯಂತ್ರದ ಚಕ್ರಗಳು ಹರಿದ ಪರಿಣಾಮ ಮಗು ಮೃತಪಟ್ಟಿದೆ.

ಧನವ್ ರೆಡ್ಡಿ (2) ಮೃತ ಮಗು.

ಮಂಗಳವಾರ ಸಂಜೆ ಮಗು ಮನೆಯ ಎದುರು ಆಟವಾಡುತ್ತಿತ್ತು. ಅದೇ ಸಂದರ್ಭದಲ್ಲಿ ವೇಗವಾಗಿ ಬಂದ ಜೆಸಿಬಿ ಯಂತ್ರವು ಮಗುವಿಗೆ ಡಿಕ್ಕಿ ಹೊಡೆದಿದೆ. ಅಲ್ಲದೇ ಮಗುವಿನ ಮೇಲೆ ಅದರ ಚಕ್ರಗಳು ಹರಿದಿವೆ. ಗಾಯಗೊಂಡಿದ್ದ ಮಗುವನ್ನು ಸ್ಥಳೀಯರ ನೆರವಿನಿಂದ ಪೋಷಕರು ಆಸ್ಪತ್ರೆಗೆ ಕರೆದೊಯ್ಯಲು ಪ್ರಯತ್ನಿಸಿದರು. ಮಾರ್ಗಮಧ್ಯೆಯೇ ಮಗು ಮೃತಪಟ್ಟಿತ್ತು ಎಂದು ಮೂಲಗಳು ತಿಳಿಸಿವೆ. ಚಾಲಕ, ಜೆಸಿಬಿ ಯಂತ್ರವನ್ನು ಸ್ಥಳದಲ್ಲೇ ಬಿಟ್ಟು ಪರಾರಿ ಆಗಿದ್ದಾನೆ. ಆತನ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಮಹದೇವಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅತ್ತೆ ಸಾಯಿಸಬೇಕು, ಮಾತ್ರೆ ಬರೆದುಕೊಡಿ'

ಮಹಿಳೆ ವಿರುದ್ಧ ಸಂಜಯನಗರ ಠಾಣೆ ಪೊಲೀಸರಿಗೆ ದೂರು ನೀಡಿದ ವೈದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ತೆಯನ್ನು ಸಾಯಿಸಲು ಮಾತ್ರೆಯ ಕುರಿತು ಸಲಹೆ ನೀಡುವಂತೆ ಮಹಿಳೆಯೊಬ್ಬರು ವೈದ್ಯರೊಬ್ಬರ ಬಳಿ ವಾಟ್ಸ್‌ಆ್ಯಪ್‌ನಲ್ಲಿ ಸಲಹೆ ಕೇಳಿದ್ದು, ಸೊಸೆಯ ವಿರುದ್ಧ ಸಂಜಯನಗರ ಠಾಣೆಗೆ ದೂರು ನೀಡಲಾಗಿದೆ.

'ಭದ್ರಪ್ಪ ಲೇಔಟ್‌ನ ನಿವಾಸಿ, ವೈದ್ಯ ಸುನಿಲ್‌ಕುಮಾರ್ ಎಂಬುವರ ದೂರು ಆಧರಿಸಿ ಎನ್‌ಸಿಆರ್ ದಾಖಲು ಮಾಡಿಕೊಳ್ಳಲಾಗಿದೆ. ಸಂದೇಶ ಕಳುಹಿಸಿದ್ದು ಯಾರು ಎಂಬುದನ್ನು ಪತ್ತೆಹಚ್ಚಲಾಗುತ್ತಿದೆ. ಸಂದೇಶ ಅಸಲಿಯೇ? ಅಲ್ಲವೇ ಎಂಬುದನ್ನೂ ಪರಿಶೀಲಿಸಲಾಗುತ್ತಿದೆ. ದೂರುದಾರರಿಂದ ವಾಟ್ಸ್‌ಆ್ಯಪ್ ಸಂಭಾಷಣೆಯ ಸ್ಕ್ರೀನ್‌ಶಾಟ್ ಪಡೆದುಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಫೆಬ್ರುವರಿ 17ರಂದು ಮಧ್ಯಾಹ್ನ 2 ಗಂಟೆಗೆ ಮೊಬೈಲ್ ಸಂಖ್ಯೆಯೊಂದರಿಂದ ವಾಟ್ಸ್‌ಆ್ಯಪ್ ಸಂದೇಶ ಬಂದಿತ್ತು. 'ನಮ್ಮ ಅತ್ತೆ ತುಂಬಾ ಹಿಂಸೆ ನೀಡುತ್ತಾರೆ. ಅತ್ತೆಯನ್ನು ಸಾಯಿಸಲು ಎರಡು ಮಾತ್ರೆ ಬರೆದುಕೊಡಿ' ಎಂಬುದಾಗಿ ಕೇಳಿಕೊಂಡಿದ್ದರು. ಆಕೆ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ದೂರಿನಲ್ಲಿ ವೈದ್ಯ ಉಲ್ಲೇಖಿಸಿದ್ದಾರೆ.

'ನನ್ನ ಮೊಬೈಲ್ ನಂಬರ್ ಎಲ್ಲಿ ಸಿಕ್ಕಿತ್ತು' ಎಂದು ವಾಟ್ಸ್‌ಆ್ಯಪ್‌ನಲ್ಲೇ ಪ್ರತಿಕ್ರಿಯಿಸಿದ್ದೆ. ಅಲ್ಲದೇ, 'ನಾವು ಪ್ರಾಣ ಉಳಿಸುವವರು, ಪ್ರಾಣ ತೆಗೆಯುವವರು ಅಲ್ಲ' ಎಂದು ಹೇಳಿದ್ದೆ. 'ಇನ್‌ಸ್ಟಾಗ್ರಾಂ ಮೂಲಕ ಮೊಬೈಲ್



ಮಹಿಳೆ ಕಳುಹಿಸಿರುವ ಸಂದೇಶ

ಸಂಖ್ಯೆ ಪಡೆದುಕೊಂಡೆ' ಎಂದು ಆಕೆ ಹೇಳಿ ತಕ್ಷಣವೇ ಸಂದೇಶಗಳನ್ನು ಡಿಲಿಟ್ ಮಾಡಿ, ನನ್ನ ಮೊಬೈಲ್ ಸಂಖ್ಯೆ ಬ್ಲಾಕ್ ಮಾಡಿದ್ದಾರೆ' ಎಂದು ವೈದ್ಯ ತಿಳಿಸಿದ್ದಾರೆ.

ಪೊಲೀಸರಿಗೆ ದೂರು ನೀಡಿದ ಬಳಿಕ ಮಾಧ್ಯಮದವರ ಜತೆಗೆ ಮಾತನಾಡಿದ ಸುನಿಲ್‌ಕುಮಾರ್, 'ಹಾಯ್' ಎಂದು ಸಂದೇಶ ಕಳುಹಿಸಿದಾಗ, ಯಾಕೆ ನನ್ನನ್ನು ಸಂಪರ್ಕಿಸಿದ್ದು ಎಂದು ಕೇಳಿದ್ದೆ. ವಿಚಾರ ಹೇಳಿ ಎಂದು ಪ್ರತಿಕ್ರಿಯಿಸಿದ್ದೆ. 'ನೀವು ಬೈತೀರಾ ಅನ್ನುತ್ತೆ' ಎಂದು ಹೇಳಿದ್ದರು. ಏನು ಹೇಳಿ ಎಂದಾಗ, 'ಅತ್ತೆಯನ್ನು ಸಾಯಿಸಬೇಕಿದೆ; ಅದಕ್ಕೆ ನಿಮ್ಮನ್ನು ಕೇಳೋಣ ಅಂದ್ಕೊಂಡೆ' ಎಂದು ಸಂದೇಶ ಕಳುಹಿಸಿದ್ದರು. ಆ ಸಂದೇಶ ಓದಿ ನಾನು ಆಘಾತಕ್ಕೆ ಒಳಗಾದೆ' ಎಂದು ಹೇಳಿದರು.

'ವಾಟ್ಸ್‌ಆ್ಯಪ್ ಡಿ.ಪಿಯಲ್ಲಿ ಆಕೆಯ ಫೋಟೊ ಇರಲಿಲ್ಲ. ನನಗೆ ಸಂದೇಶ ಕಳುಹಿಸಿದವರು ಸಹನಾ ಎನ್ನಲಾಗಿದೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ' ಎಂದು ಹೇಳಿದರು.

'ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿದ್ದೇನೆ. ಹೀಗಾಗಿ ಕೆಲವು ಶತ್ರುಗಳೂ ಹುಟ್ಟಿಕೊಂಡಿದ್ದಾರೆ. ನನ್ನನ್ನು ಬಲೆಗೆ ಬೀಳಿಸುವ ಉದ್ದೇಶದಿಂದ ಯಾರಾದರೂ ಈ ರೀತಿ ಸಂದೇಶ ಕಳುಹಿಸಿರಬಹುದೇ ಎಂಬ ಶಂಕೆ ಇದೆ' ಎಂದು ಸುನಿಲ್‌ಕುಮಾರ್ ಹೇಳಿದರು.

ವಿಭಜಕಕ್ಕೆ ಬೈಕ್ ಡಿಕ್ಕಿ ವಿದ್ಯಾರ್ಥಿ ಸಾವು

ಆನೇಕಲ್: ತಾಲ್ಲೂಕಿನ ಚಿಕ್ಕಹಾಗಡೆ ಗೇಟ್ ಸಮೀಪ ರಸ್ತೆ ವಿಭಜಕಕ್ಕೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದು ಕಾಲೇಜು ವಿದ್ಯಾರ್ಥಿಯೊಬ್ಬ ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತೊಬ್ಬ ಗಾಯಗೊಂಡಿದ್ದಾನೆ. ಕಗ್ಗಲಿಪುರದ ಯಶಸ್ (25) ಮೃತ ವಿದ್ಯಾರ್ಥಿ. ವಿಜಯವಾಡದ ಪ್ರೇಮ್ ರಾಮ್ (23) ಗಾಯಗೊಂಡಿದ್ದಾನೆ. ಬೆಂಗಳೂರಿನ ಖಾಸಗಿ ಕಾಲೇಜಿನಲ್ಲಿ ಓದುತ್ತಿದ್ದರು. ಕುಡಿದ ಮತ್ತಿನಲ್ಲಿ ವೇಗವಾಗಿ ಬೈಕ್ ಚಲಾಯಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಇಂಡಿಯಾ ಲೇಬರ್ ಲೈನ್ ಸಹಾಯವಾಣಿಗೆ ನಾಲ್ಕು ವರ್ಷಗಳಲ್ಲಿ 7,160 ದೂರು

ಕಾರ್ಮಿಕರಿಗೆ ವಂಚನೆ: ಪ್ರಕರಣ ಹೆಚ್ಚಳ

• ವರುಣ ಹೆಗಡೆ



ಬೆಂಗಳೂರು: ಕಾರ್ಮಿಕರಿಗೆ ವಂಚಿಸುವ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚುತ್ತಲೇ ಇದ್ದು, 'ಇಂಡಿಯಾ ಲೇಬರ್ ಲೈನ್' ಉಚಿತ ಸಹಾಯವಾಣಿಯಡಿ ನಾಲ್ಕು ವರ್ಷಗಳಲ್ಲಿ 7,160 ದೂರುಗಳು ದಾಖಲಾಗಿವೆ.

ಇದು ಕಾರ್ಮಿಕರಿಗಾಗಿಯೇ ರೂಪಿಸಿರುವ ಸಹಾಯವಾಣಿಯಾಗಿದೆ. ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ವರ್ಕಿಂಗ್ ಪೀಪಲ್ಸ್ ಚಾರ್ಟರ್ (ಡಬ್ಲ್ಯುಪಿಸಿ) ಮತ್ತು ಆಜೀವಿಕ ಬ್ಯೂರೊ ಸಂಸ್ಥೆ ಜಂಟಿಯಾಗಿ ಈ ಸಹಾಯವಾಣಿಯನ್ನು 2021ರ ಜುಲೈನಲ್ಲಿ ಪ್ರಾರಂಭಿಸಿವೆ. ವೇತನ ತಾರತಮ್ಯ, ವಂಚನೆ, ಕೆಲಸದ ಸ್ಥಳದಲ್ಲಿ ಹಿಂಸೆ ಸೇರಿ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಈ ಸಹಾಯವಾಣಿಯಡಿ ಕಾರ್ಮಿಕರಿಗೆ ನೆರವು ಒದಗಿಸಲಾಗುತ್ತಿದೆ.

ಇಂಡಿಯಾ ಲೇಬರ್ ಲೈನ್ ತಂಡವು ವಕೀಲರು ಸೇರಿ ಕ್ಷೇತ್ರ ತಜ್ಞರನ್ನು ಒಳಗೊಂಡಿದ್ದು, ಸಲ್ಲಿಕೆಯಾಗಿರುವ ದೂರುಗಳಲ್ಲಿ ಶೇ 47ರಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಿದೆ. ಶೇ 5 ರಷ್ಟು ಪ್ರಕರಣಗಳಲ್ಲಿ ಕಾನೂನಾತ್ಮಕ ಹೋರಾಟ ನಡೆಸಲಾಗುತ್ತಿದೆ.

ಮಾಲೀಕರು, ಗುತ್ತಿಗೆದಾರರು ಹಾಗೂ ಎಂಜಿನಿಯರ್‌ಗಳಿಂದ ವಲಸೆ ಮತ್ತು ಅಸಂಘಟಿತ ಕಾರ್ಮಿಕರು ಎದುರಿಸುವ ಸಮಸ್ಯೆಗಳಿಗೆ ಕಾನೂನು ನೆರವನ್ನೂ ಇಂಡಿಯಾ ಲೇಬರ್ ಲೈನ್ ತಂಡ ಒದಗಿಸುತ್ತಿದೆ. ಬೆಂಗಳೂರು, ಹುಬ್ಬಳ್ಳಿ ಮತ್ತು ಮಂಗಳೂರಿನಲ್ಲಿ ಕೇಂದ್ರ ಹೊಂದಿದ್ದು, ಸುತ್ತಮುತ್ತಲಿನ ಜಿಲ್ಲೆಗಳಿಂದ ಬರುವ ದೂರುಗಳಿಗೆ ಅಲ್ಲಿಂದಲೇ ಸ್ಪಂದಿಸುತ್ತಿದೆ.

3,371 ಪ್ರಕರಣ ಇತ್ಯರ್ಥ: ಭವಿಷ್ಯ ನಿಧಿ (ಪಿಎಫ್) ಮತ್ತು ಗ್ರ್ಯಾಚ್ಯುಟಿ (ಉಪಧನ) ಸಮಸ್ಯೆ, ಅಧಿಕ ಅವಧಿ ದುಡಿಮೆ, ಅಪಘಾತ ಪರಿಹಾರ ನಿರಾಕರಣೆ ಹಾಗೂ ವೇತನ ವಿಳಂಬದ ಬಗ್ಗೆಯೂ ಕಾರ್ಮಿಕರು ಹೆಚ್ಚಾಗಿ ಸಹಾಯವಾಣಿ ಸಂಪರ್ಕಿಸಿದ್ದಾರೆ. ದಾಖಲಾಗಿರುವ ದೂರುಗಳಲ್ಲಿ 3,371 ಪ್ರಕರಣಗಳನ್ನು ಇಂಡಿಯಾ ಲೇಬರ್ ಲೈನ್ ತಂಡವು ಬಗೆ ಹರಿಸಿದೆ. ಬಾಧಿತರಾಗಿದ್ದ 7,399 ಕಾರ್ಮಿಕ ಕುಟುಂಬಗಳಿಗೆ ₹ 6.43 ಕೋಟಿ ಕೈಸೇರುವಂತೆ ಮಾಡಿದೆ. ಬೆಂಗಳೂರಿನಲ್ಲಿಯೇ ಅಧಿಕ ದೂರು ವರದಿಯಾಗುತ್ತಿದ್ದು, ನಾಲ್ಕು ವರ್ಷಗಳಲ್ಲಿ 4 ಸಾವಿರಕ್ಕೂ ಅಧಿಕ ದೂರುಗಳನ್ನು ಕಾರ್ಮಿಕರು ನೀಡಿದ್ದಾರೆ. ಇವುಗಳಲ್ಲಿ 2 ಸಾವಿರಕ್ಕೂ ಅಧಿಕ ದೂರುಗಳನ್ನು ಇತ್ಯರ್ಥ ಮಾಡುವ ಮೂಲಕ 5 ಸಾವಿರಕ್ಕೂ ಅಧಿಕ ಕುಟುಂಬಗಳಿಗೆ ನೆರವು ಒದಗಿಸಲಾಗಿದೆ.

'ಸಹಾಯವಾಣಿಗೆ ಕರೆ ಮಾಡಿದ ಕಾರ್ಮಿಕರಿಗೆ ಕಾನೂನು ಸಲಹೆಯೂ ಸೇರಿ ಎಲ್ಲ ರೀತಿಯ ನೆರವನ್ನು ಒದಗಿಸಲಾಗುತ್ತಿದೆ. ಕೆಲ ಪ್ರಕರಣಗಳಲ್ಲಿ ಮಾಲೀಕರು ಹಾಗೂ ಗುತ್ತಿಗೆದಾರರ ಭಯದ ಕಾರಣ ಕಾರ್ಮಿಕರು ದೂರನ್ನು ವಾಪಸ್ ಪಡೆಯುತ್ತಿದ್ದಾರೆ. ಇನ್ನೂ ಕೆಲ ಪ್ರಕರಣಗಳಲ್ಲಿ ಪರಸ್ಪರ ಒಪ್ಪಂದ ಮಾಡಿಕೊಂಡು ಇತ್ಯರ್ಥ ಮಾಡಿಕೊಂಡಿದ್ದಾರೆ. ಮೂರು ಸಾವಿರಕ್ಕೂ ಅಧಿಕ ಪ್ರಕರಣಗಳನ್ನು ಕಾನೂನಿನ ಪ್ರಕಾರ ಇತ್ಯರ್ಥ ಮಾಡಲಾಗಿದೆ. ಎಲ್ಲ ಸೇವೆಯೂ ಉಚಿತವಾಗಿದ್ದು, ಕಾರ್ಮಿಕರಿಗೆ ನ್ಯಾಯ ಒದಗಿಸಲು ನಾವು ಶ್ರಮಿಸುತ್ತಿದ್ದೇವೆ' ಎಂದು ಸಹಾಯವಾಣಿಯ ಸಹಾಯಕ ರಾಜ್ಯ ಸಂಯೋಜಕಿ ಗಾಯತ್ರಿ ರಘು ಕುಮಾರ್ ತಿಳಿಸಿದರು.

ವರ್ಷವಾರು ದಾಖಲಾದ ದೂರುಗಳು

ವರ್ಷ	ದೂರುಗಳು	ಪ್ರಕರಣ ಇತ್ಯರ್ಥ	ಒದಗಿಸಲಾದ ಹಣ	ನೆರವು ಪಡೆದ ಕುಟುಂಬ
2021-22	1,736	870	₹1.95 ಕೋಟಿ	2,499
2023	2,433	1,346	₹2.55 ಕೋಟಿ	2,588
2024	2,991	1,155	₹1.92 ಕೋಟಿ	2,312


ಯಾರೆಲ್ಲ ಕರೆ ಮಾಡಬಹುದು?

'ಅಸಂಘಟಿತ ವಲಯಗಳಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರ, ಮನೆ ಕೆಲಸ, ಸ್ವಚ್ಛತೆ, ಗಾರ್ಮೆಂಟ್ಸ್, ಸಣ್ಣ ಕೈಗಾರಿಕೆಗಳು, ಕಾರ್ಖಾನೆಗಳು, ಭದ್ರತೆ, ಸೇವಾ ವಲಯಗಳಾದ ನರ್ಸಿಂಗ್, ಹೋಮ್ ನರ್ಸಿಂಗ್ ಹಾಗೂ ಇನ್ನಿತರೆ ಅಸಂಘಟಿತ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ಈ ಸಹಾಯವಾಣಿಗೆ ಕರೆ ಮಾಡಬಹುದು. ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ಸಹಾಯವಾಣಿ ಸಕ್ರಿಯವಾಗಿ ಇರಲಿದೆ. ಬೇರೆ ಅವಧಿಯಲ್ಲಿ ಕರೆ ಮಾಡಿದರೂ, ಕಾರ್ಯಾವಧಿಯಲ್ಲಿ ಸಂಪರ್ಕಿಸಲಾಗುತ್ತದೆ' ಎಂದು ಸಹಾಯವಾಣಿಯ ರಾಜ್ಯ ಸಂಯೋಜಕ ಮುನಿರಾಜು ಟಿ. ಮಾಹಿತಿ ನೀಡಿದರು.

ಉಚಿತ ಸಹಾಯವಾಣಿ ಸಂಖ್ಯೆ: 18008339020

ರಾಜ್ಯ ಗುತ್ತಿಗೆದಾರರ ಸಂಘಕ್ಕೆ ಆರ್. ಮಂಜುನಾಥ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ



ಮಂಜುನಾಥ್

ಬೆಂಗಳೂರು: ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ಆರ್. ಮಂಜುನಾಥ್ ಅವರು ಅವಿರೋಧವಾಗಿ ಆಯ್ಕೆ ಆಗಿದ್ದಾರೆ.

ಕೆಂಪಣ್ಣ ಅವರ ನಿಧನದಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಜಗನ್ನಾಥ್ ಬಿ. ಶೇಗಜಿ ಅವರನ್ನು ಹಂಗಾಮಿಯಾಗಿ ನೇಮಿಸಲಾಗಿತ್ತು.

ಸಂಘದ ಬೈ-ಲಾದಂತೆ, ಕಾರ್ಯಕಾರಿ ಸಮಿತಿ ಸದಸ್ಯರು, ಅಧ್ಯಕ್ಷರನ್ನು ಆಯ್ಕೆ ಮಾಡಬೇಕು. ಚುನಾವಣಾಧಿಕಾರಿ ಲಕ್ಷ್ಮೀಶ ಅವರು ಅಧ್ಯಕ್ಷರ ಆಯ್ಕೆಯ ಚುನಾವಣೆ ಪ್ರಕ್ರಿಯೆಯನ್ನು ಬುಧವಾರ ನಡೆಸಿದರು.

ಸಂಘದ ಕಾರ್ಯಾಧ್ಯಕ್ಷರಾಗಿದ್ದ ಆರ್. ಮಂಜುನಾಥ್ ಅವರೊಬ್ಬರೇ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಆದ್ದರಿಂದ ಅವರನ್ನು ಅವಿರೋಧ ಆಯ್ಕೆ ಎಂದು ಘೋಷಿಸಲಾಯಿತು.

'ಕೆಂಪಣ್ಣ ಅವರು ಅಧ್ಯಕ್ಷರಾಗಿದ್ದಾಗ ಗುತ್ತಿಗೆದಾರರ ಪರವಾಗಿ ಹೋರಾಟಗಳನ್ನು ಮಾಡಿದ್ದೇನೆ. ಆಗಿನಿಂದಲೂ ಕಾರ್ಯಾಧ್ಯಕ್ಷ ಹುದ್ದೆಯಲ್ಲಿದ್ದ ನಾನು, ಗುತ್ತಿಗೆದಾರರ ಸಂಕಷ್ಟಗಳಿಗೆ ಸ್ಪಂದಿಸಿದ್ದೇನೆ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ನನ್ನನ್ನು ಅಧ್ಯಕ್ಷನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಅವರಿಗಾಗಿ ನಾನು ಹೋರಾಟ ಮಾಡುತ್ತೇನೆ' ಎಂದು ಆರ್. ಮಂಜುನಾಥ್ ಹೇಳಿದರು.

'ರಾಜ್ಯ ಘಟಕದ ಜೊತೆಗೆ ಜಿಲ್ಲಾ ಸಮಿತಿಗಳಿಗೆ ಹೆಚ್ಚು ಬಲ ನೀಡಿ, ಅವುಗಳನ್ನು ಸಂಘಟಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಜಿಲ್ಲಾ ಸಮಿತಿಗಳು ತಮ್ಮ ಹಕ್ಕುಗಳಿಗೆ ಹೋರಾಟ ನಡೆಸಲು ಸರ್ವರೀತಿಯಲ್ಲೂ ನೆರವು ನೀಡಲಾಗುತ್ತದೆ. ಸ್ಥಳೀಯ ಸಮಸ್ಯೆಗಳಿಗೆ ಅಲ್ಲೇ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತದೆ' ಎಂದರು.

'ರಾಜ್ಯದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರು ವರ್ಷಗಳಿಂದ ಬಿಲ್ ಪಾವತಿಯಾಗದೆ ಸಂಕಷ್ಟದಲ್ಲಿದ್ದಾರೆ. ಅವರಿಗೆ ಬಿಲ್ ಪಾವತಿ ಮಾಡಿಸುವುದು ಪ್ರಥಮ ಆದ್ಯತೆಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಈ ಬಗ್ಗೆ ಪರಿಹಾರ ಕಂಡುಕೊಳ್ಳಲಾಗುತ್ತದೆ. ಗುತ್ತಿಗೆದಾರರ ಹಿತರಕ್ಷಣೆ ಒತ್ತು ನೀಡಿ, ಕಾರ್ಯ ಚಟುವಟಿಕೆಗಳನ್ನು ರೂಪಿಸಲಾಗುತ್ತದೆ' ಎಂದು ತಿಳಿಸಿದರು.

ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ನಂದಕುಮಾರ್ ಅವರ ನೇತೃತ್ವದಲ್ಲಿ ಆರ್. ಮಂಜುನಾಥ್ ಅವರನ್ನು ಬುಧವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು.

ಜಿಬಿಎಸ್: ಮರಣ ಖಚಿತಪಟ್ಟಿಲ್ಲ

ಬೆಂಗಳೂರು: ರಾಜ್ಯದಲ್ಲಿ ಈವರೆಗೂ ಯಾವುದೇ ಜಿಬಿಎಸ್ (ಗೀಲನ್ ಬಾ ಸಿಂಡ್ರೋಮ್) ಮರಣ ಪ್ರಕರಣ ಖಚಿತಪಟ್ಟಿಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಚಿಕ್ಕೋಡಿಯ ಡೋಣೆವಾಡಿ ಗ್ರಾಮದ 64 ವರ್ಷದ ನಿವಾಸಿ ಹಾಗೂ ಸಂಕೇಶ್ವರ ಪಟ್ಟಣದ 14 ವರ್ಷದ ಬಾಲಕನ ಮರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖೆ ಸ್ಪಷ್ಟನೆ ನೀಡಿದೆ.

ಈ ಎರಡು ಪ್ರಕರಣಗಳಲ್ಲಿ ವೈದ್ಯರು ಸಂಶಯಾಸ್ಪದ ಜಿಬಿಎಸ್ ಕಾಯಿಲೆಯೆಂದು ಪರಿಗಣಿಸಿ, ಚಿಕಿತ್ಸೆ ನೀಡಿದ್ದಾರೆ. ಆದರೆ, ಇದೇ ಕಾಯಿಲೆಯೆಂದು ಖಚಿತಪಟ್ಟಿಲ್ಲ. ಮೃತಪಟ್ಟ ಇಬ್ಬರು ವಾಸಿಸುತ್ತಿದ್ದ ಪಟ್ಟಣ ಹಾಗೂ ಗ್ರಾಮಕ್ಕೆ ವೈದ್ಯಾಧಿಕಾರಿಗಳು, ಆರೋಗ್ಯ ಸಿಬ್ಬಂದಿ, ಆಶಾಗಳು ಭೇಟಿ ನೀಡಿ, ಸಮೀಕ್ಷಾ ಕಾರ್ಯ ಕೈಗೊಳ್ಳುತ್ತಿದ್ದಾರೆ ಎಂದು ಇಲಾಖೆಯ ಇಂಟಿಗ್ರೇಟೆಡ್ ಡಿಸೀಸ್ ಸರ್ವಲೆನ್ಸ್ ಪ್ರಾಜೆಕ್ಟ್‌ನ (ಐಡಿಎಸ್‌ಪಿ) ನಿರ್ದೇಶಕರು ತಿಳಿಸಿದ್ದಾರೆ.

ಮೃತರ ಮನೆಯವರು ಆರೋಗ್ಯದಿಂದ ಇದ್ದಾರೆ. ಅಲ್ಲಿನ ಜನರಿಗೆ ಶುದ್ಧ ಕುಡಿಯುವ ನೀರಿನ ಬಗ್ಗೆ ಆರೋಗ್ಯ ಶಿಕ್ಷಣ ಹಾಗೂ ಮಾಹಿತಿ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ.

ಸಾಮಾಜಿಕ ಭದ್ರತಾ ವಿಮಾ ಸೌಲಭ್ಯ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ರಾಜ್ಯದಲ್ಲಿ ನೇರ ಗುತ್ತಿಗೆ ಮೂಲಕ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಸಾಮಾಜಿಕ ಭದ್ರತಾ ವಿಮಾ ಸೌಲಭ್ಯ ಕಲ್ಪಿಸಲಾಗಿದೆ.


ಈ ಸಂಬಂಧ ಎನ್‌ಎಚ್‌ಎಂ ಮತ್ತು ಆ್ಯಕ್ಸಿಸ್ ಬ್ಯಾಂಕ್ ಒಪ್ಪಂದ ಮಾಡಿಕೊಂಡಿದ್ದು, ವೈಯಕ್ತಿಕ ಅಪಘಾತ ವಿಮೆ ಮತ್ತು ಅವಧಿ ವಿಮೆ (ಟರ್ಮ್ ಇನ್ಶುರೆನ್ಸ್) ಪರಿಚಯಿಸಲಾಗಿದೆ. ಈ ವಿಮಾ ಯೋಜನೆಗೆ ಉದ್ಯೋಗಿಗಳು ಮತ್ತು ಎನ್‌ಎಚ್‌ಎಂ ಯಾವುದೇ ಪ್ರೀಮಿಯಂ ಭರಿಸುತ್ತಿಲ್ಲ. ಆ್ಯಕ್ಸಿಸ್ ಬ್ಯಾಂಕ್ ಉಚಿತವಾಗಿ ಈ ವಿಮಾ ಸೌಲಭ್ಯ ಒದಗಿಸಲಿದೆ. ನೇರ ಗುತ್ತಿಗೆಯಡಿ ಕಾರ್ಯನಿರ್ವಹಿಸುವ 25 ಸಾವಿರ ಸಿಬ್ಬಂದಿ ಇದರ ಪ್ರಯೋಜನ ಪಡೆಯಲಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಈ ವಿಮಾ ಕವಚದಡಿ ವೈಯಕ್ತಿಕ ಅಪಘಾತ ವಿಮಾ ರಕ್ಷಣಾ ಮೊತ್ತ ₹ 60 ಲಕ್ಷ ನಿಗದಿಪಡಿಸಲಾಗಿದೆ. ಕರ್ತವ್ಯದ ಸಂದರ್ಭ ಅಥವಾ ಕರ್ತವ್ಯದ ನಂತರ ಅಪಘಾತ ಸಂಭವಿಸಿ, ಮೃತಪಟ್ಟಲ್ಲಿ ಸಂಪೂರ್ಣ ವಿಮಾ ರಕ್ಷಣೆ ಇರಲಿದೆ.

ಬೇಸಿಗೆ ಆರಂಭದಲ್ಲೇ ವಿದ್ಯುತ್ ಬೇಡಿಕೆ ಹೆಚ್ಚಳ

19 ಸಾವಿರ ಮೆ.ವಾ ದಾಟುವ ನಿರೀಕ್ಷೆ, ಮಾರ್ಚ್ ನಂತರ ಪ್ರತಿ ತಿಂಗಳು 500 ಮೆ.ವಾ ಖರೀದಿ

• ಗಾಣಧಾಳು ಶ್ರೀಕಂಠ



ಬೆಂಗಳೂರು: ಬೇಸಿಗೆ ಆರಂಭದಲ್ಲೇ ರಾಜ್ಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಗಣನೀಯವಾಗಿ ಹೆಚ್ಚುತ್ತಿದೆ. ಪ್ರತಿನಿತ್ಯ 17 ಸಾವಿರ ಮೆಗಾವಾಟ್ ವಿದ್ಯುತ್ ಬೇಡಿಕೆ ಇದ್ದು, ಮುಂದಿನ ಎರಡು ತಿಂಗಳಲ್ಲಿ ನಿತ್ಯದ ಬೇಡಿಕೆಯು 19 ಸಾವಿರ ಮೆಗಾವ್ಯಾಟ್ ಗಡಿ ದಾಟುವ ಸಾಧ್ಯತೆ ಇದೆ ಎಂದು ಇಂಧನ ಇಲಾಖೆ ಅಂದಾಜಿಸಿದೆ.

ಜನವರಿ ತಿಂಗಳಲ್ಲೇ ಮನೆಗಳಲ್ಲಿ ಫ್ಯಾನ್, ಎಸಿಗಳ ಉಪಯೋಗ ಹೆಚ್ಚಾಗಿದೆ. ಕಳೆದ ವರ್ಷ ಹೆಚ್ಚಿನ ಮಳೆಯಾದ ಕಾರಣ ಸಾಗುವಳಿ ಪ್ರದೇಶವೂ ವಿಸ್ತರಿಸಿದೆ. ಪರಿಣಾಮವಾಗಿ ಕೃಷಿ ಪಂಪ್‌ಸೆಟ್‌ಗಳ ಬಳಕೆಯೂ ಏರುತ್ತಿದೆ. ಇನ್ನೊಂದೆಡೆ ಗೃಹ ಜ್ಯೋತಿ ಯೋಜನೆಯೂ ವಿದ್ಯುತ್ ಬೇಡಿಕೆ ಹೆಚ್ಚಲು ಕಾರಣವಾಗಿದೆ.

ಜನವರಿಯಲ್ಲಿ ನಿತ್ಯ ಸರಾಸರಿ 290 ದಶಲಕ್ಷ ಯೂನಿಟ್ ವಿದ್ಯುತ್ ಬಳಕೆಯಾಗಿತ್ತು. ಫೆಬ್ರುವರಿ ಆರಂಭದಲ್ಲೇ 300 ದಶಲಕ್ಷ ಯೂನಿಟ್ ದಾಟಿತ್ತು. ಫೆ.17ರ ಪ್ರಕಾರ 321 ದಶಲಕ್ಷ ಯೂನಿಟ್ ಬಳಕೆಯಾಗಿದೆ. ರಾಜ್ಯದಲ್ಲಿ ಸದ್ಯ 16,662 ಮೆ.ವಾ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಕೊರತೆ ಸರಿದೂಗಿಸುವುದಕ್ಕಾಗಿ ಇಂಧನ ಇಲಾಖೆ ವಿದ್ಯುತ್ ಖರೀದಿಗೆ ಮುಂದಾಗಿದೆ.

ಮೂರು ವರ್ಷಗಳಿಂದ ಪ್ರತಿ ವರ್ಷ ಒಂದು ಸಾವಿರ ಮೆಗಾವಾಟ್‌ನಷ್ಟು ವಿದ್ಯುತ್ ಬೇಡಿಕೆ ಹೆಚ್ಚುತ್ತಿದೆ. 2023ರಲ್ಲಿ ನಿರೀಕ್ಷಿತ ಮಳೆಯಾಗದ ಕಾರಣ, ಜಲಾಶಯಗಳಲ್ಲಿ ನೀರಿನ ಸಂಗ್ರಹ ಕುಸಿದಿತ್ತು. ಒಳ ಹರಿವೂ ತಗ್ಗಿತ್ತು. ಜಲ ವಿದ್ಯುತ್ ಉತ್ಪಾದನೆಯೂ ಕುಸಿದಿತ್ತು. ಕಳೆದ ವರ್ಷ ಜನವರಿಯಲ್ಲೇ ವಿದ್ಯುತ್ ಅಭಾವವಾಗಿ, ಅನಿಯಮಿತ ಲೋಡ್‌ಶೆಡ್ಡಿಂಗ್ ಮಾಡಲಾಗಿತ್ತು.

ಈ ವರ್ಷ ಮುಂಗಾರು ಮತ್ತು ಹಿಂಗಾರು ಮಳೆ ಉತ್ತಮವಾಗಿತ್ತು. ಜಲಾಶಯಗಳೆಲ್ಲ ಭರ್ತಿಯಾಗಿವೆ. ಜಲವಿದ್ಯುತ್ ಉತ್ಪಾದನೆ ಆಶಾದಾಯಕವಾಗಿದೆ. ಇಂಧನ ಇಲಾಖೆ ಮಾಹಿತಿ ಪ್ರಕಾರ ಇದೇ ಪ್ರಮಾಣದಲ್ಲಿ ವಿದ್ಯುತ್ ಬಳಕೆ ಮುಂದುವರಿದರೂ, ಮುಂದಿನ 160 ದಿನಗಳವರೆಗೆ ಅಗತ್ಯವಿರುವ ವಿದ್ಯುತ್ ಉತ್ಪಾದಿಸುವಷ್ಟು ನೀರು ಜಲಾಶಯಗಳಲ್ಲಿ ಇದೆ.

ದಾಖಲೆಗಳ ಪ್ರಕಾರ, ರಾಜ್ಯದಲ್ಲಿ ಸುಮಾರು 34 ಲಕ್ಷ ಕೃಷಿ ಪಂಪ್‌ಸೆಟ್‌ಗಳಿವೆ. ಇದರಲ್ಲಿ 2.3 ಲಕ್ಷ ಅಕ್ರಮ ಪಂಪ್‌ಸೆಟ್‌ಗಳು. ಉತ್ಪಾದಿತ ವಿದ್ಯುತ್‌ನಲ್ಲಿ ಶೇಕಡ 35 ರಷ್ಟು ಕೃಷಿ ಪಂಪ್‌ಸೆಟ್‌ಗಳಿಗೆ ಬಳಕೆಯಾಗುತ್ತಿದೆ ಎಂದು ಅಂದಾಜಿಸಲಾಗಿದೆ. ಸರ್ಕಾರದ ಆದೇಶದಂತೆ ಕೃಷಿ ಪಂಪ್‌ಸೆಟ್‌ಗಳಿಗೆ ನಿತ್ಯ ಹಗಲಲ್ಲಿ 4 ತಾಸು ಮತ್ತು ರಾತ್ರಿ ವೇಳೆ 3 ತಾಸು ವಿದ್ಯುತ್ ಪೂರೈಸಲಾಗುತ್ತಿದೆ. ಈ ಲೆಕ್ಕಾಚಾರದಂತೆ ಕೃಷಿ ಪಂಪ್‌ಸೆಟ್‌ಗಳ ವಿದ್ಯುತ್ ಬಳಕೆ ಪ್ರಮಾಣವು ಶೇ 40ರಷ್ಟು ಹೆಚ್ಚಾಗಬಹುದೆಂಬ ನಿರೀಕ್ಷೆ ಇದೆ.

ಕೊರತೆ ನೀಗಿಸಲು ಖರೀದಿ: ಬೇಸಿಗೆಯಲ್ಲಿ ಎದುರಾಗಲಿರುವ ವಿದ್ಯುತ್ ಕೊರತೆಯನ್ನು ಸಮರ್ಥವಾಗಿ ನಿರ್ವಹಿಸಲು ಇಂಧನ ಇಲಾಖೆ ಸಿದ್ಧತೆ ನಡೆಸಿದೆ. ಇದರ ಭಾಗವಾಗಿ ದೀರ್ಘಾವಧಿಗೆ ವಿದ್ಯುತ್ ಖರೀದಿಸಲು ಮುಂದಾಗಿದೆ. ಇದರಿಂದ ಕಡಿಮೆ ದರಕ್ಕೆ ವಿದ್ಯುತ್ ಲಭ್ಯವಾಗುತ್ತದೆ ಎಂಬುದು ಇಲಾಖೆಯ ಲೆಕ್ಕಾಚಾರ. ಈಗಾಗಲೇ ಫೆಬ್ರುವರಿಯಲ್ಲಿ 300 ಮೆಗಾವಾಟ್ ಖರೀದಿಸಿದೆ. ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ತಲಾ 500 ಮೆಗಾವಾಟ್‌ಗೂ ಹೆಚ್ಚು ವಿದ್ಯುತ್ ಖರೀದಿಸಲಾಗುತ್ತದೆ ಎಂದು ಪಿಸಿಕೆಎಲ್ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ವರ್ಷ	ಬೇಡಿಕೆ (ಮೆ.ವಾ)
2022	14,766
2023	15,100
2024	17,000
2025	19,000 (ನಿರೀಕ್ಷೆ)

ವಿದ್ಯುತ್ ಉತ್ಪಾದನೆ

- 2,192 ಮೆ.ವಾ. ಉಷ್ಣ ವಿದ್ಯುತ್
- 1,287 ಮೆ.ವಾ. ಜಲ ವಿದ್ಯುತ್ (ಪ್ರಮುಖ ಜಲವಿದ್ಯುತ್)
- 489 ಮೆ.ವಾ ಯುಪಿಸಿಎಲ್
- 5,418 ಮೆ.ವಾ. ನವೀಕರಿಸಬಹುದಾದ ಇಂಧನ (ಸೌರ, ಪವನ ಇತ್ಯಾದಿ)

ಮುಡಾ: ಸಿದ್ದರಾಮಯ್ಯ ನಿರಾಳ?

ಒಂದನೇ ಪುಟದಿಂದ...

'ಪ್ರಕರಣದ ನಾಲ್ವರು ಆರೋಪಿಗಳಾದ ಸಿದ್ದರಾಮಯ್ಯ, ಪಾರ್ವತಿ, ಮಲ್ಲಿಕಾರ್ಜುನ ಸ್ವಾಮಿ ಮತ್ತು ದೇವರಾಜು ವಿರುದ್ಧದ ಆರೋಪಗಳನ್ನು ಸಾಬೀತು ಮಾಡುವಂತಹ ಸಾಕ್ಷ್ಯಗಳು ತನಿಖೆ ವೇಳೆ ಪತ್ತೆಯಾಗಿಲ್ಲ. ಇದು ಸಿವಿಲ್ ಸ್ವರೂಪದ ಪ್ರಕರಣವಾಗಿದೆ. ಕಾನೂನಿನ ತಪ್ಪು ತಿಳಿವಳಿಕೆಯಿಂದ ಆಗಿರುವಂತಹದ್ದಾಗಿದೆ. ತನಿಖೆ ನಡೆಸಲು ಮತ್ತು ಕ್ರಮ ತೆಗೆದುಕೊಳ್ಳಲು ತಕ್ಕುದಾದ ಪ್ರಕರಣವಾಗಿರುವುದಿಲ್ಲ. ಇದರಡಿಯಲ್ಲಿ ತನಿಖೆ ನಡೆಸದೆ ವಜಾ ಮಾಡಿದ ಮೊಕದ್ದಮೆಗಳು ಬರುತ್ತವೆ' ಎಂದು ವಿವರಿಸಿದ್ದಾರೆ.

ಈ ಪ್ರಕರಣದ ತನಿಖೆ ನಡೆಸಿದ್ದ ಉದೇಶ್ ಅವರು ನ್ಯಾಯಾಲಯದ ಆದೇಶದಂತೆ ಈ ಹಿಂದೆಯೇ 550 ಪುಟಗಳ ತನಿಖಾ ವರದಿಯನ್ನು ಲೋಕಾಯುಕ್ತ ಎಡಿಜಿಪಿ ಸುಬ್ರಹ್ಮಣ್ಯೇಶ್ವರ ರಾವ್ ಅವರಿಗೆ ಸಲ್ಲಿಸಿದ್ದಾರೆ. ವರದಿಯ ಪರಿಶೀಲನೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಮತ್ತೊಂದು ವರದಿ: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 2016ರಿಂದ 2024ರವರೆಗೆ 50:50 ಅನುಪಾತದಲ್ಲಿ ಹಂಚಿಕೆಯಾಗಿರುವ ಪರಿಹಾರಾತ್ಮಕ ನಿವೇಶನಗಳ ಆರೋಪದ ಬಗ್ಗೆ ಹೆಚ್ಚುವರಿ ತನಿಖೆ ನಡೆಸಿ ನ್ಯಾಯಾಲಯಕ್ಕೆ ಹೆಚ್ಚುವರಿ ಅಂತಿಮ ವರದಿಯನ್ನು ಸಲ್ಲಿಸಲಾಗುವುದು' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ನ್ಯಾಯಾಲಯಕ್ಕೆ ಯಾವ ದಿನ ಅಂತಿಮ ವರದಿ ಸಲ್ಲಿಸಲಾಗುತ್ತದೆ ಎಂಬುದನ್ನು ತನಿಖಾಧಿಕಾರಿ ಹೇಳಿಲ್ಲ. ಈ ಕುರಿತು ಪ್ರತಿಕ್ರಿಯೆಗೆ ಟಿ.ಜೆ. ಉದೇಶ್ ದೂರವಾಣಿ ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

'ಮೈಸೂರು ತಾಲ್ಲೂಕಿನ ಕೆಸರೆ ಗ್ರಾಮದ 3.16 ಎಕರೆ ಜಮೀನಿಗೆ ಪ್ರತಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಮುಡಾ ಅಕ್ರಮವಾಗಿ ಬದಲಿ ನಿವೇಶನಗಳನ್ನು ಮಂಜೂರು ಮಾಡಿದೆ. ಪ್ರಕರಣದಲ್ಲಿ ಸಿದ್ದರಾಮಯ್ಯ ಪ್ರಭಾವ ಬೀರಿದ್ದು, ತನಿಖೆ ನಡೆಸಬೇಕು' ಎಂದು ಕೋರಿ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಜನಪ್ರತಿನಿಧಿಗಳ ನ್ಯಾಯಾಲಯದ ಮೆಟ್ಟಿಲೇರಿದ್ದರು. ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಿ ವರದಿ ನೀಡುವಂತೆ ನ್ಯಾಯಾಲಯವು ಕಳೆದ ಸೆಪ್ಟೆಂಬರ್‌ನಲ್ಲಿ ಆದೇಶಿಸಿತ್ತು.

ನಾಲ್ವರು ತನಿಖಾಧಿಕಾರಿಗಳ ನೇತೃತ್ವದ ತಂಡವು ಐದು ತಿಂಗಳು ಪ್ರಕರಣದ ತನಿಖೆ ನಡೆಸಿದ್ದು, ಸಿದ್ದರಾಮಯ್ಯ ಸೇರಿದಂತೆ ಹಾಲಿ–ಮಾಜಿ ಜನಪ್ರತಿನಿಧಿಗಳು, ಅಧಿಕಾರಿಗಳು ಸಹಿತ ಹಲವರನ್ನು ವಿಚಾರಣೆಗೆ ಒಳಪಡಿಸಿತ್ತು.

'ಪ್ರೌಢಶಿಕ್ಷಣ ಮಂಡಳಿಯಿಂದಲೇ ನೃತ್ಯ, ಸಂಗೀತ ಪರೀಕ್ಷೆ ನಡೆಸಲಿ'

ಬೆಂಗಳೂರು: ಕರ್ನಾಟಕ ಪ್ರೌಢ ಶಿಕ್ಷಣ ಪರಿಕ್ಷಾ ಮಂಡಳಿಯಿಂದಲೇ ನೃತ್ಯ, ಸಂಗೀತ ಮತ್ತು ತಾಳವಾದ್ಯ ಪರೀಕ್ಷೆಗಳನ್ನು ನಡೆಸುವಂತಾಗಬೇಕು ಎಂದು ಕರ್ನಾಟಕ ಶಾಸ್ತ್ರೀಯ ನೃತ್ಯ ಕಲಾವಿದರ ಒಕ್ಕೂಟ ಸರ್ಕಾರಕ್ಕೆ ಮನವಿ ಮಾಡಿದೆ.

ಈ ಕುರಿತು ಒಕ್ಕೂಟದ ಟ್ರಸ್ಟಿ ಮತ್ತು ಸರ್ವ ಸದಸ್ಯರು ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದಾರೆ. 'ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಈ ಮೊದಲು ಪರೀಕ್ಷೆ ನಡೆಸುತ್ತಿತ್ತು. ಕಳೆದ ವರ್ಷದಿಂದ ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲಾಯಿತು. ವಿಶ್ವವಿದ್ಯಾಲಯ ನಡೆಸಿದ ಪರೀಕ್ಷಾ ಪ್ರಕ್ರಿಯೆ ಅವ್ಯವಸ್ಥೆಯಿಂದ ಕೂಡಿತ್ತು' ಎಂದು ಅಳಲು ತೋಡಿಕೊಂಡಿದ್ದಾರೆ.

'18 ಸಾವಿರ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು. ಪರೀಕ್ಷೆಯ ದಿನ ಪ್ರಶ್ನೆ ಪತ್ರಿಕೆಗಳೇ ಪೂರೈಕೆ ಆಗಿರಲಿಲ್ಲ. ಪರೀಕ್ಷೆ ಮುಗಿದು ನಾಲ್ಕು ತಿಂಗಳು ಕಳೆದರೂ ಫಲಿತಾಂಶ ಪ್ರಕಟ ಆಗಿರಲಿಲ್ಲ ' ಎಂದು ಸಮಸ್ಯೆಯನ್ನು ವಿವರಿಸಿದ್ದಾರೆ.

ಅನ್ನಭಾಗ್ಯ: ನಗದು ಬದಲು ಅಕ್ಕಿ

ಒಂದನೇ ಪುಟದಿಂದ...

ವಿಧಾನಸಭಾ ಚುನಾವಣೆಯಲ್ಲಿ ನೀಡಿದ್ದ 'ಗ್ಯಾರಂಟಿ' ಭರವಸೆಯಂತೆ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಪ್ರತಿಯೊಬ್ಬರಿಗೂ 10 ಕೆ.ಜಿ. ಅಕ್ಕಿ ನೀಡಬೇಕಿತ್ತು. ಅಗತ್ಯ ಪ್ರಮಾಣದ ಅಕ್ಕಿ ದೊರಕದ ಕಾರಣ ಕೇಂದ್ರ ನೀಡುತ್ತಿರುವ 5 ಕೆ.ಜಿ. ಅಕ್ಕಿಯನ್ನು ಮಾತ್ರ ಪೂರೈಸಿ, ಉಳಿದ 5 ಕೆ.ಜಿ. ಅಕ್ಕಿಯ ಬದಲು ಫಲಾನುಭವಿಗಳ ಖಾತೆಗೆ ಡಿಬಿಟಿ ಮೂಲಕ ₹170 ಜಮೆ ಮಾಡಲಾಗುತ್ತಿತ್ತು.

ತಿಂಗಳಿಗೆ ₹190 ಕೋಟಿ ಉಳಿತಾಯ: ಕೇಂದ್ರ ಸರ್ಕಾರ ಕೆ.ಜಿ.ಗೆ ₹22.50ರಂತೆ ಅಕ್ಕಿ ಸರಬರಾಜು ಮಾಡಲು ಒಪ್ಪಿಗೆ ನೀಡಿದ್ದು, ಇದರಿಂದ ರಾಜ್ಯ ಸರ್ಕಾರಕ್ಕೆ ಪ್ರತಿ ತಿಂಗಳು ಸುಮಾರು ₹190 ಕೋಟಿ ಉಳಿತಾಯವಾಗಲಿದೆ.

ಒಂದೂವರೆ ವರ್ಷದ ಹಿಂದೆ ಅನ್ನಭಾಗ್ಯ ಯೋಜನೆ ಆರಂಭಿಸಿದಾಗ ₹34.60 ನೀಡಲು ಸಿದ್ಧವಿದ್ದರೂ ಅಗತ್ಯ ಅಕ್ಕಿ ದೊರೆತಿರಲಿಲ್ಲ. ಹಾಗಾಗಿ, ಅಷ್ಟೇ ಹಣವನ್ನು ಫಲಾನುಭವಿಗಳ ಖಾತೆಗೆ ಜಮೆ ಮಾಡಲು ನಿರ್ಧಾರ ತೆಗೆದುಕೊಂಡಿತ್ತು. ಈಗ ₹22.50 ದರದಂತೆ ಅಕ್ಕಿ ಸಿಗುತ್ತಿದ್ದು, ರಾಜ್ಯ ಸರ್ಕಾರಕ್ಕೆ ದೊಡ್ಡ ಮೊತ್ತದ ಹಣ ಉಳಿತಾಯವಾಗಲಿದೆ.

ಅಂಕಿ ಅಂಶ

- 27.48 ಲಕ್ಷ ಟನ್ – ನಗದು ಬದಲು ವರ್ಷಕ್ಕೆ ಬೇಕಾಗುವ ಅಕ್ಕಿ
- 4.12 ಕೋಟಿ – ನಗದು ಪಡೆದ ಫಲಾನುಭವಿಗಳು
- ₹1,452 ಕೋಟಿ – ಇದುವರೆಗೆ ವರ್ಗಾವಣೆ ಮಾಡಿದ ಹಣ
- 5.36 ಕೋಟಿ – ಒಟ್ಟು ಪಡಿತರದಾರರು



ಬಿಪಿಎಲ್ ಕಾರ್ಡ್ ಪಡೆಯಲು ನಿಗದಿ ಮಾಡಿರುವ ಆರ್ಥಿಕ ಮಾನದಂಡವನ್ನು ಪರಿಷ್ಕರಿಸಲು ಹಲವರು ಕೋರಿದ್ದಾರೆ. ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು

ಕೆ.ಎಚ್. ಮುನಿಯಪ್ಪ, ಆಹಾರ ಸಚಿವ

ಕಾರ್ಮಿಕರ ವೇತನ ಹೆಚ್ಚಳ ಕೋರಿಕೆ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಕಾರ್ಮಿಕರೂ ಸೇರಿ ವಿವಿಧ ವಲಯಗಳ ಕಾರ್ಮಿಕರ ಕನಿಷ್ಠ ವೇತನವನ್ನು 7 ವರ್ಷಗಳಿಂದ ಪರಿಷ್ಕರಣೆ ಮಾಡಿಲ್ಲ' ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಬುಧವಾರ ಆದೇಶಿಸಿದೆ.

'ಆಲ್ ಇಂಡಿಯಾ ಸೆಂಟ್ರಲ್ ಯೂನಿಯನ್ ಆಫ್ ಟ್ರೇಡ್ ಕೌನ್ಸಿಲ್' (ಎಐಸಿಸಿಟಿಯು) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ಮೈತ್ರೇಯಿ ಕೃಷ್ಣನ್ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಹಾಗೂ ಮುಖ್ಯ ಕಾರ್ಮಿಕ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಮಾರ್ಚ್ 10ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಅಧಿಸೂಚಿತ ಉದ್ಯೋಗಗಳ ಕನಿಷ್ಠ ವೇತನವನ್ನು ಪ್ರತಿ 5 ವರ್ಷಕ್ಕೊಮ್ಮೆ ಪರಿಷ್ಕರಣೆ ಮಾಡಬೇಕು. 2017ರಲ್ಲಿ ಕನಿಷ್ಠ ವೇತನ ಪರಿಷ್ಕರಣೆ ಮಾಡಲಾಗಿದ್ದು ನಂತರದಲ್ಲಿ ಮಾಡಿಲ್ಲ. ಆದ್ದರಿಂದ, ಸುಪ್ರೀಂ ಕೋರ್ಟ್ ಮಾನದಂಡಗಳಿಗೆ ಅನುಗುಣವಾಗಿ ಕನಿಷ್ಠ ವೇತನ ಪರಿಷ್ಕರಿಸಲು ಕೇಂದ್ರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಯಾವ ವರ್ಗ?: 'ಕೃಷಿ ಕಾರ್ಮಿಕರು ಹಾಗೂ ಇತರೆ ಗಣಿಗಾರಿಕೆ, ಕಟ್ಟಡ, ರಸ್ತೆಗಳ ನಿರ್ಮಾಣ ಹಾಗೂ ನಿರ್ವಹಣೆ, ಕಲ್ಲು ಗಣಿಗಾರಿಕೆ, ಸ್ವೀಪಿಂಗ್ ಮತ್ತು ಕ್ಲೀನಿಂಗ್, ವಾಚ್ ಆ್ಯಂಡ್ ವಾರ್ಡ್, ಲೋಡಿಂಗ್, ಅನ್ ಲೋಡಿಂಗ್ ವಲಯದ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕರ ಕನಿಷ್ಠ ವೇತನವನ್ನು ಕಳೆದ ಏಳು ವರ್ಷಗಳಿಂದ ಪರಿಷ್ಕರಣೆ ಮಾಡಿಲ್ಲ' ಎಂದು ವಿವರಿಸಲಾಗಿದೆ.

'ಕೇಂದ್ರ ನೌಕರರ ಜಾತಿ ಪರಿಶೀಲನೆ ಅಧಿಕಾರ ಡಿಸಿವಿಸಿಗೂ ಇದೆ'

ಬೆಂಗಳೂರು: 'ಕೇಂದ್ರ ಸರ್ಕಾರಿ ನೌಕರರ ಜಾತಿ ಪ್ರಮಾಣ ಪತ್ರ ಪರಿಶೀಲಿಸುವ ಅಧಿಕಾರ ಜಿಲ್ಲಾ ಜಾತಿ ಪ್ರಮಾಣಪತ್ರ ಪರಿಶೀಲನಾ ಸಮಿತಿಗೆ (ಡಿಸಿವಿಸಿ) ಇದೆ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

'ನನ್ನ ಜಾತಿ ಪ್ರಮಾಣಪತ್ರ ಪರಿಶೀಲನೆಯನ್ನು ಡಿಸಿವಿಸಿಗೆ ವಹಿಸಿರುವುದು ಕಾನೂನುಬಾಹಿರ' ಎಂದು ಆಕ್ಷೇಪಿಸಿ ಹೊಸಪೇಟೆಯ ನೈರುತ್ಯ ರೈಲ್ವೆ ವಲಯದ ನಿವೃತ್ತ ತಾಂತ್ರಿಕ ಸಿಬ್ಬಂದಿ ಸಂಗಪ್ಪ ಎಂ.ಬಾಗೇವಾಡಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಪೀಠ ಆದೇಶಿಸಿದೆ.

'ಸಂಭಾವ್ಯ ಕೇಂದ್ರ ಸರ್ಕಾರಿ ಉದ್ಯೋಗಿ ಅಥವಾ ಕೇಂದ್ರ ಸರ್ಕಾರದ ಸಿಬ್ಬಂದಿಗೆ ತಹಶೀಲ್ದಾರ್ ಜಾತಿ ಪ್ರಮಾಣ ಪತ್ರ ವಿತರಣೆ ಮಾಡಿದ್ದರೆ, ಅದನ್ನು ಪರಿಶೀಲನೆ ಮಾಡುವ ಅಧಿಕಾರವನ್ನು ಡಿಸಿವಿಸಿ ಹೊಂದಿರುತ್ತದೆ. ಕರ್ನಾಟಕ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ (ನೇಮಕಾತಿಯಲ್ಲಿ ಮೀಸಲು ಇತ್ಯಾದಿ) ಕಾಯ್ದೆ–1992ರ ಅನುಸಾರವೇ ಡಿಸಿವಿಸಿ ರಚನೆ ಮಾಡಲಾಗಿದೆ. ಅವುಗಳಿಗೆ ಜಾತಿ ಪ್ರಮಾಣಪತ್ರಗಳ ಪರಿಶೀಲನೆ ಮಾಡುವ ಅಧಿಕಾರವನ್ನು ಸಂವಿಧಾನದತ್ತ-ವಾಗಿ ಕೊಡಮಾಡಲಾಗಿದೆ. ಹಾಗಾಗಿ, ಈ ಪ್ರಕರಣದಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ' ಎಂದು ನ್ಯಾಯಪೀಠ ತಿಳಿಸಿದೆ.

ಜಾಮೀನು ರದ್ದು ಕೋರಿಕೆ: ನೆಕ್ಕಂಟಿಗೆ ನೋಟಿಸ್

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಹುಕೋಟಿ ಮೊತ್ತದ ಅಕ್ರಮ ವರ್ಗಾವಣೆ ಪ್ರಕರಣದ ಆರೋಪಿಯಾದ ಮಾಜಿ ಸಚಿವ ಬಿ.ನಾಗೇಂದ್ರ ಆಪ್ತ ನೆಕ್ಕಂಟಿ ನಾಗರಾಜ್ ಜಾಮೀನು ರದ್ದುಪಡಿಸಬೇಕು' ಎಂದು ಕೋರಿ ಇ.ಡಿ (ಜಾರಿ ನಿರ್ದೇಶನಾಲಯ) ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ನೆಕ್ಕಂಟಿ ನಾಗರಾಜ್‌ಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಇ.ಡಿ ಸಲ್ಲಿಸಿರುವ ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಂ.ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ನೆಕ್ಕಂಟಿ ನಾಗರಾಜ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿತು.

ಕುಲಪತಿ ಹುದ್ದೆ: ಮೂವರ ಹೆಸರು ಅಂತಿಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿ ಕುಲಪತಿ ಆಯ್ಕೆಗಾಗಿ ರಚಿಸಲಾದ ಶೋಧನಾ ಸಮಿತಿಯು ಕೆಂಪೇಗೌಡ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಾಧ್ಯಾಪಕ ಡಾ.ಬಿ.ಸಿ. ಭಗವಾನ್ ಸೇರಿದಂತೆ ಮೂರು ಹೆಸರನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡಾ.ಬಿ.ಸಿ. ರವಿಕುಮಾರ್, ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡಾ.ನಳಿನಿ ಅವರ ಹೆಸರು ಪಟ್ಟಿಯಲ್ಲಿವೆ.

ಈಗಿರುವ ಕುಲಪತಿ ಎಂ.ಕೆ. ರಮೇಶ್ ಅವರು 2022ರ ಫೆಬ್ರವರಿ 11ರಂದು ಮೂರು ವರ್ಷಗಳ ಅವಧಿಗೆ ಕುಲಪತಿಯಾಗಿ ನೇಮಕವಾಗಿದ್ದರು. ಅವರ ಅವಧಿ ಇದೇ ಫೆ. 10ರಂದು ಮುಕ್ತಾಯವಾಗಿತ್ತು.

ಪದ್ಧತಿ ನಿಷೇಧಿಸಿದ ಕಾಯ್ದೆ ಅನುಷ್ಠಾನ ಕುರಿತ ರಾಷ್ಟ್ರೀಯ ಸಮಾವೇಶ

'ಮಲಹೊರುವ ಪದ್ಧತಿ ಇನ್ನೂ ಇದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ದೇಶದಲ್ಲಿ ಮಲಹೊರುವ ಪದ್ಧತಿ ಇಲ್ಲ. ದೇಶದಲ್ಲಿ ಅಂತಹ ಕೆಲಸ ಮಾಡುವ ಒಬ್ಬ ಕಾರ್ಮಿಕನೂ ಇಲ್ಲ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಮತ್ತು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ದಾಖಲೆಗಳಲ್ಲಿ ಘೋಷಿಸಿದೆ. ಅಂದರೆ ದೇಶದಲ್ಲಿ ಬರಿಗೈಲಿ ಮಲಹೊರುವ, ಮಲಗುಂಡಿ ಸ್ವಚ್ಛಗೊಳಿಸುವ ಪದ್ಧತಿ ಸಂಪೂರ್ಣವಾಗಿ ನಿರ್ಮೂಲನೆ ಆಗಿದೆಯೇ?...'

ಸಫಾಯಿ ಕರ್ಮಚಾರಿ ಕಾವಲು ಸಮಿತಿ, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ, ತಮಟೆ ಶಕ್ತಿ ಟ್ರಸ್ಟ್ ಸಹಯೋಗದಲ್ಲಿ ಬುಧವಾರ ಆಯೋಜಿಸಲಾಗಿದ್ದ 'ಮಲಹೊರುವ ವೃತ್ತಿ ನಿಷೇಧ ಮತ್ತು ಪುನರ್ವಸತಿ ಕಾಯ್ದೆ–2013'ರ ಅನುಷ್ಠಾನ ಸವಾಲುಗಳ ಕುರಿತ ರಾಷ್ಟ್ರೀಯ ಸಮಾವೇಶದಲ್ಲಿ ಸಂವಾದಕ್ಕೆ ಎತ್ತಿಕೊಳ್ಳಲಾದ ಪ್ರಶ್ನೆ ಇದು.

'ಕೈಗವಸು ಹಾಕಿಕೊಂಡು ಮಲ ಗುಂಡಿ, ಛೇಂಬರ್ ಸ್ವಚ್ಛಗೊಳಿಸಿದರೆ ಅದನ್ನು 'ಮಲಹೊರುವ ಪದ್ಧತಿ' ಎಂದು ಈ ಕಾಯ್ದೆಯು ಪರಿಗಣಿಸುವುದಿಲ್ಲ. ಇದನ್ನೇ ಮುಂದಿಟ್ಟುಕೊಂಡು ಕೇಂದ್ರ ಸರ್ಕಾರವು ದೇಶದಲ್ಲಿ ಈ ಪದ್ಧತಿ ಇಲ್ಲ ಎನ್ನುತ್ತಿದೆ' ಎಂದು ಸಫಾಯಿ ಕರ್ಮಚಾರಿ ಕಾವಲು ಸಮಿತಿಯ ಸದಸ್ಯ ಸಿದ್ಧಾರ್ಥ ಕೆ.ಜೆ. ಪ್ರತಿಪಾದಿಸಿದರು.

'ಈ ಪದ್ಧತಿ ಎಲ್ಲಿ ನಿರ್ಮೂಲನೆ ಆಗಿದೆ' ಎಂದು ಪ್ರಶ್ನಿಸುತ್ತಾ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಮಾತು ಆರಂಭಿಸಿದರು. 'ನಗರ, ಪಟ್ಟಣ ಬಿಡಿ. ಉತ್ತರ ಕರ್ನಾಟಕ ಸಣ್ಣ-ಸಣ್ಣ ಹಳ್ಳಿಗಳಲ್ಲೂ ಜನ 'ಮಲಗುಂಡಿ ಸ್ವಚ್ಛಗೊಳಿಸಬೇಕೇ? ನಮ್ಮನ್ನು ಸಂಪರ್ಕಿಸಿ' ಎಂದು ಮನೆ-ಮನೆಗೆ ಜಾಹೀರಾತು ಫಲಕಗಳನ್ನು ನೇತುಹಾಕಿದ್ದಾರೆ. ಅವರು ಬರಿಗೈಯಲ್ಲಿಯೇ ಮಲಹೊರುವುದನ್ನು ನೋಡಿದ್ದೇನೆ' ಎಂದು ವಾದ ಮುಂದಿಟ್ಟರು.

'ಈಗಿನ ಕೇಂದ್ರ ಸರ್ಕಾರವು ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರ ಎಂದು ಬಿಂಬಿಸುತ್ತಿದೆ. ಅಭಿವೃದ್ಧಿ ಹೊಂದಿದ ದೇಶದಲ್ಲಿ ಮಲಹೊರುವ ಪದ್ಧತಿ ಇದೆಯೆಂದರೆ ಅವಮಾನ ಆಗುವುದಿಲ್ಲವೇ. ಹೀಗಾಗಿಯೇ ಸುಳ್ಳು ಮಾಹಿತಿಯನ್ನು ಜಗತ್ತಿನ ಎದುರು ಇಡುತ್ತಿದೆ' ಎಂದು ಕವಯತ್ರಿ ಮತ್ತು ಸಾಮಾಜಿಕ ಕಾರ್ಯಕರ್ತೆ ದು.ಸರಸ್ವತಿ ಆರೋಪಿಸಿದರು.

ಕಾನೂನಿನಲ್ಲಿ ಇರುವ ಈ ತೊಡಕುಗಳನ್ನು ನಿವಾರಿಸಲು ಕಾನೂನು ಹೋರಾಟದ ಅಗತ್ಯ ಹಿಂದೆಂದಿಗಿಂತ ಇಂದು ಹೆಚ್ಚು ಅನಿವಾರ್ಯ ಎಂಬ ನಿರ್ಣಯದೊಂದಿಗೆ ಉದ್ಘಾಟನಾ ಕಾರ್ಯಕ್ರಮ ಕೊನೆಯಾಯಿತು.

> ದೇಶದ ಎಲ್ಲ ನಗರ–ಪಟ್ಟಣ–ಪುರಸಭೆಗಳಿಗೂ ಕೇಂದ್ರ ಸರ್ಕಾರವು ಅತ್ಯಾಧುನಿಕ ಯಂತ್ರಗಳನ್ನು ನೀಡಬೇಕು. ಜನರು ಬರಿಗೈಲಿ ಮಲ ಸ್ವಚ್ಛಗೊಳಿಸುವುದಕ್ಕೆ ನಿಜವಾಗಿಯೂ ಕೊನೆ ಹಾಡಬೇಕು
>
> **ಎಲ್.ಹನುಮಂತಯ್ಯ,** ಸಾಹಿತಿ

> ಪೌರ ಕಾರ್ಮಿಕರು ಮದ್ಯ ಕುಡಿಯುತ್ತಾರೆ, ಅಂತಹವರಿಗೆ ರಾಜ್ಯ ಸರ್ಕಾರದ ಪ್ರಶಸ್ತಿ ಬೇಡ ಎಂದು ನಿರಾಕರಿಸುವ ಕಾಲ ಈಗಲೂ ಇದೆ. ಘನತೆಯ ಬದುಕಿಗೆ ಕಾನೂನು ಹೋರಾಟವೇ ಅನಿವಾರ್ಯ
>
> **ದು.ಸರಸ್ವತಿ,** ಕವಯತ್ರಿ

ಪ್ರಯಾಗರಾಜ್‌ನಲ್ಲಿ ನಿಲುಗಡೆ ಇಲ್ಲ

ಬೆಂಗಳೂರು: ಉತ್ತರ ಮಧ್ಯ ರೈಲ್ವೆ ವಲಯದಲ್ಲಿ ವಿವಿಧ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಯಶವಂತಪುರದಿಂದ ಲಖನೌಗೆ ಹೋಗುವ ಮತ್ತು ಅಲ್ಲಿಂದ ವಾಪಸ್ ಬರುವ ರೈಲುಗಳು ಪ್ರಯಾಗರಾಜ್ ಸಹಿತ ವಿವಿಧ ನಿಲ್ದಾಣಗಳಲ್ಲಿ ನಿಲ್ಲುವುದಿಲ್ಲ ಎಂದು ರೈಲ್ವೆ ಇಲಾಖೆ ಪ್ರಕಟಣೆ ತಿಳಿಸಿದೆ.

ದರ – ಶುಲ್ಕ ಏರಿಕೆ ವಿರುದ್ಧ ಆಕ್ರೋಶ • ಆರ್ಥಿಕ ಸ್ಥಿತಿಯ ಬಗ್ಗೆ ಶ್ವೇತಪತ್ರ ಪ್ರಕಟಿಸಲು ವಿಜಯೇಂದ್ರ ಆಗ್ರಹ

‘ಪತನದ ಹಾದಿಯಲ್ಲಿ ರಾಜ್ಯದ ಆರ್ಥಿಕತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಆರ್ಥಿಕ ಸ್ಥಿತಿ ಹಿಂದೆಂದೂ ಕಂಡು ಕೇಳರಿಯದ ರೀತಿಯಲ್ಲಿ ಪತನದ ಹಾದಿಯಲ್ಲಿದೆ. ಕಾಂಗ್ರೆಸ್ ನೇತೃತ್ವದ ಸರ್ಕಾರ ರಾಜ್ಯವನ್ನು ದಿವಾಳಿ ಅಂಚಿಗೆ ತಂದು ನಿಲ್ಲಿಸಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ದೂರಿದರು.

‘ಮುಖ್ಯಮಂತ್ರಿಯವರು ಕೂಡಲೇ ರಾಜ್ಯದ ಆರ್ಥಿಕ ಸ್ಥಿತಿಯ ಬಗ್ಗೆ ಶ್ವೇತಪತ್ರ ಮಂಡಿಸಬೇಕು’ ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲಾಗದೇ ಪರದಾಡುತ್ತಿರುವ ಸರ್ಕಾರ ಎಲ್ಲದರ ದರವನ್ನು ಏರಿಕೆ ಮಾಡಿದೆ. ಇದರಿಂದ ಸಾರ್ವಜನಿಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದರು.

‘ರಾಜ್ಯದ ವಿವಿಧ ಇಲಾಖೆಗಳಿಂದ ₹6,000 ಕೋಟಿ ಮೊತ್ತದ ವಿದ್ಯುತ್



ಹಾವಾಡಿಗರು ಬುಟ್ಟಿಯಿಂದ ಹಾವು ಹೊರಬಿಡುತ್ತೇನೆ ಎಂದು ಬೆದರಿಸುವಂತೆ ಜಾತಿ ಗಣತಿ ವರದಿ ಬಿಡುಗಡೆ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಹೇಳುತ್ತಿರುತ್ತಾರೆ

ಬಿ.ವೈ.ವಿಜಯೇಂದ್ರ, ಬಿಜೆಪಿ ಅಧ್ಯಕ್ಷ

ಬಿಲ್ ಪಾವತಿ ಆಗದೇ ಬಾಕಿ ಉಳಿದಿದೆ. ಸಂಬಂಧಪಟ್ಟ ಇಲಾಖೆಗಳ ಸಚಿವರ ಜತೆ ಚರ್ಚೆ ಮಾಡುವುದಾಗಿ ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ. ಮತ್ತೊಂದೆಡೆ ನೌಕರರಿಗೆ ಸಂಬಳ ಕೊಡಲು ಸಾಧ್ಯವಾಗದ ಸ್ಥಿತಿ ತಲುಪಿದೆ. ಪ್ರತಿ ತಿಂಗಳು ನಿಯಮಿತವಾಗಿ ಗ್ಯಾರಂಟಿ ಯೋಜನೆಯ ಹಣ ಕೊಡಬೇಕು ಎನ್ನುವುದಕ್ಕೆ, ಅದು ತಿಂಗಳ ಸಂಬಳ ಅಲ್ಲ ಎಂದು ಜಾರ್ಜ್ ಹೇಳಿಕೆ ನೀಡಿದ್ದಾರೆ. ರಾಜ್ಯದ ಜನರನ್ನೇನು ಭಿಕ್ಷುಕರು ಅಂತ ಅಂದುಕೊಂಡಿದ್ದೀರಾ’ ಎಂದು ವಿಜಯೇಂದ್ರ ಪ್ರಶ್ನಿಸಿದರು.

‘ಶಕ್ತಿ’ ಯೋಜನೆಗಾಗಿ ಕೆಎಸ್ಆರ್‌ಟಿಸಿಗೆ ಸರ್ಕಾರ ₹7,000 ಕೋಟಿ ಕೊಡದೇ ಬಾಕಿ ಉಳಿಸಿಕೊಂಡಿದೆ. ಹೀಗಾಗಿ ಕೆಎಸ್‌ಆರ್‌ಟಿಸಿ ಮುಚ್ಚುವ ಸ್ಥಿತಿ ತಲುಪಿದೆ. ಈ ಸರ್ಕಾರ ಕಳೆದ ಎರಡು ವರ್ಷದಲ್ಲಿ ₹1,90,000 ಕೋಟಿ ಸಾಲ ಮಾಡಿದೆ ಎಂದರು.

ದೇಶದ ಇತರೆಡೆ ಮೆಟ್ರೊ ಪ್ರಯಾಣ ದರ ಏರಿಸಿಲ್ಲ. ಕೇಂದ್ರ ಏರಿಕೆ ಮಾಡುವುದಿದ್ದರೆ ಅಲ್ಲೂ ಮಾಡಬೇಕಿತ್ತು. ಮೆಟ್ರೊ ಪ್ರಯಾಣ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸಿದ್ದೇ ರಾಜ್ಯ ಸರ್ಕಾರ. ಗ್ಯಾರಂಟಿಗೆ ಹಣ ಹೊಂದಿಸಲಾಗದೇ ದರ ಏರಿಸಿದ್ದಾರೆ ಎಂದು ದೂರಿದರು.

ಸಂಸದ ಪಿ.ಸಿ.ಮೋಹನ್, ಶಾಸಕರಾದ ಗೋಪಾಲಯ್ಯ, ಉದಯ್ ಗರುಡಾಚಾರ್, ಮುಖ್ಯ ವಕ್ತಾರ ಅಶ್ವಥನಾರಾಯಣ ಇದ್ದರು.

‘ದರ ಏರಿಕೆಯಲ್ಲಿ ದಾಖಲೆ’

ಸ್ವತ್ತಿನ ನೋಂದಣಿ ಶುಲ್ಕ ಶೇ 600, ಮಾರ್ಗಸೂಚಿ ದರ ಶೇ 30, ವಾಹನಗಳ ನೋಂದಣಿ ಶುಲ್ಕ ಶೇ 10, ಆಸ್ಪತ್ರೆಗಳ ಸೇವಾ ಶುಲ್ಕ ಶೇ 30, ಹಾಲಿನ ದರ ಶೇ 15, ಬಸ್ ಪ್ರಯಾಣ ದರ ಶೇ 15, ನೀರಿನ ದರ ಶೇ 30 ಹಾಗೂ ಮೆಟ್ರೊ ಪ್ರಯಾಣ ದರ ಶೇ 50 ರಷ್ಟು ಏರಿಕೆ ಮಾಡಿದೆ. ರಾಜ್ಯ ಸರ್ಕಾರ ದರ ಏರಿಕೆಯಲ್ಲೂ ದಾಖಲೆ ಮಾಡಿದೆ ಎಂದು ವಿಜಯೇಂದ್ರ ಹೇಳಿದರು.

‘ಕೇಂದ್ರ ಬಜೆಟ್ ಅನ್ಯಾಯದ ವಿರುದ್ಧ ಶೆಟ್ಟರ್ ದನಿ ಎತ್ತಲಿ’

ಗದಗ: ‘ಸಂಸದ ಜಗದೀಶ ಶೆಟ್ಟರ್ ಅವರಿಗೆ ರಾಜ್ಯ ಸರ್ಕಾರದ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ. ರಾಜ್ಯದ ಜನರ ಬಗ್ಗೆ ಅವರಿಗೆ ನಿಜವಾಗಿಯೂ ಕಾಳಜಿಯಿದ್ದರೆ, ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಆದ ಅನ್ಯಾಯದ ವಿರುದ್ಧ ಧ್ವನಿ ಎತ್ತಲಿ’ ಎಂದು ಸಚಿವ ಎಚ್.ಕೆ.ಪಾಟೀಲ ಹೇಳಿದರು.



ಎಚ್‌.ಕೆ.ಪಾಟೀಲ

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ವಿಫಲವಾಗಿವೆ ಎಂದು ಸಂಸದ ಜಗದೀಶ ಶೆಟ್ಟರ್ ಆರೋಪಕ್ಕೆ ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಹಿಂದೆ ರಾಜ್ಯದಲ್ಲಿ ತೀವ್ರ ಬರಗಾಲ ಇದ್ದಾಗಲೂ ಕೇಂದ್ರ ಸರ್ಕಾರ ಪರಿಹಾರ ನೀಡಲಿಲ್ಲ. ಸುಪ್ರೀಂ ಕೋರ್ಟ್‌ಗೆ ಹೋದರೂ ರಾಜ್ಯಕ್ಕೆ ಪರಿಹಾರದ ಹಣ ಸಿಗಲಿಲ್ಲ’ ಎಂದರು.

‘ಗೃಹಲಕ್ಷ್ಮಿ, ಅನ್ನಭಾಗ್ಯ ಯೋಜನೆ ಹಣ ತಾಂತ್ರಿಕ ಕಾರಣದಿಂದ ವಿಳಂಬ ಆಗಿದೆಯೇ ಹೊರತು ಹಣದ ಕೊರತೆಯಿಂದಲ್ಲ. ಈ ಎರಡೂ ಯೋಜನೆಗಳ ಹಣವನ್ನು ಪ್ರತಿ ತಿಂಗಳು ನಿರಂತರವಾಗಿ ಮುಟ್ಟಿಸುವ ಪ್ರಯತ್ನ ಸರ್ಕಾರ ಮಾಡಲಿದೆ’ ಎಂದರು.

ಸುದ್ದಿ 2 ನಿಮಿಷ

ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆಯೇ ಇಲ್ಲ: ಯತೀಂದ್ರ

ಮೈಸೂರು: ‘ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆಯೇ ಇಲ್ಲ. ಸಿದ್ದರಾಮಯ್ಯ ಅವರಿಗೆ ಸಂಪೂರ್ಣ ಬೆಂಬಲ ಕೊಡುವುದಾಗಿ ಹೈಕಮಾಂಡ್ ನಾಯಕರು ಹೇಳಿದ್ದಾರೆ’ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ‘ಮುಖ್ಯಮಂತ್ರಿ ಬದಲಾವಣೆ ವಿಚಾರವನ್ನು ಯಾರೂ ಮಾತನಾಡುತ್ತಿಲ್ಲ. ಅದು ಮಾಧ್ಯಮಗಳಲ್ಲಿ ಮಾತ್ರ ಚರ್ಚೆ ಆಗುತ್ತಿದೆ. ಇದಕ್ಕೆಲ್ಲಾ ವಿರಾಮ ಹಾಕಬೇಕು’ ಎಂದರು.

‘ಮುಖ್ಯಮಂತ್ರಿ ಬದಲಾವಣೆ ಮಾಡುವುದಿಲ್ಲ ಎಂದು ಹೈಕಮಾಂಡ್ ಈಗಾಗಲೇ ಹೇಳಿದೆ. ವಿರೋಧಪಕ್ಷದವರು ಮುಖ್ಯಮಂತ್ರಿ ವಿರುದ್ಧ ದೊಡ್ಡ ಆರೋಪ ಮಾಡಿ ಪಾದಯಾತ್ರೆ ನಡೆಸಿದ ಸಂದರ್ಭದಲ್ಲೇ ಹೈಕಮಾಂಡ್ ಗಟ್ಟಿಯಾಗಿಯೇ ಹೇಳಿದೆ. ಅವರೊಂದಿಗೆ ಹಿಂದಿನಿಂದಲೂ ನಿಂತಿದೆ’ ಎಂದು ತಿಳಿಸಿದರು.

‘ಪಕ್ಷದಲ್ಲಿ ಯಾವುದೇ ಬಣವಿಲ್ಲ. ರಾಜಕೀಯ ಪಕ್ಷ ಎಂದ ಮೇಲೆ ಒಂದಷ್ಟು ಚರ್ಚೆಗಳು ನಡೆಯುತ್ತವೆ. ಆದರೆ, ಬಣ ರಾಜಕಾರಣ ನಮ್ಮಲ್ಲಿಲ್ಲ’ ಎಂದು ಹೇಳಿದರು.

‘ಗೃಹಲಕ್ಷ್ಮಿ ಯೋಜನೆಯಡಿ ಎಷ್ಟು ತಿಂಗಳಿಂದ ಹಣ ಬಂದಿಲ್ಲವೋ ಅದೆಲ್ಲವನ್ನೂ ಸೇರಿಸಿ ಫಲಾನುಭವಿಗಳ ಖಾತೆಗೆ ಸರ್ಕಾರದಿಂದ ಪಾವತಿಸಲಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿ ಈಗಾಗಲೇ ಸ್ಪಷ್ಟನೆ ಕೊಟ್ಟಿದ್ದಾರೆ’ ಎಂದರು.



‘108’ ಆಂಬುಲೆನ್ಸ್‌ಗೆ ಸರ್ಜರಿ

ತುಮಕೂರು: ರಾಜ್ಯದಾದ್ಯಂತ 108 ಆಂಬುಲೆನ್ಸ್ ವ್ಯವಸ್ಥೆ ಸರಿಪಡಿಸಲು ಈ ಬಾರಿ ಬಜೆಟ್‌ನಲ್ಲಿ ‘ಮೇಜರ್ ಸರ್ಜರಿ’ ಮಾಡಲಾಗುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘108 ಆಂಬುಲೆನ್ಸ್ ವ್ಯವಸ್ಥೆಗೆ ಹೊಸ ರೂಪ ನೀಡಲಾಗುತ್ತಿದೆ. ಈ ಬಜೆಟ್‌ನಲ್ಲಿ ಅದನ್ನು ಪ್ರಕಟಿಸಲಾಗುತ್ತದೆ. ಮುಂದೆ ಸಾಕಷ್ಟು ಸುಧಾರಣೆಯಾಗಲಿದೆ’ ಎಂದು ಹೇಳಿದರು.

ಬಾಣಂತಿ– ಮಗು ಸಾವಿನ ಸಂಖ್ಯೆ ಹೆಚ್ಚಾದ ಸಮಯದಲ್ಲಿ ಹಲವು ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಂಡಿದ್ದು, ಇತ್ತೀಚಿನ ದಿನಗಳಲ್ಲಿ ಸಾವಿನ ಸಂಖ್ಯೆ ಇಳಿಕೆಯಾಗಿದೆ. ಮುಂದೆ ಮತ್ತಷ್ಟು ಕಡಿಮೆಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಗೀಲನ್ ಬಾ ಸಿಂಡ್ರೋಮ್ (ಜಿಬಿಎಸ್) ಕಾಯಿಲೆಯಿಂದ ಮಹಾರಾಷ್ಟ್ರದಲ್ಲಿ ಸಾವು ಸಂಭವಿಸಿದೆ. ರಾಜ್ಯದಲ್ಲಿ ಅಂತಹ ಗಂಭೀರ ಸ್ಥಿತಿ ಇಲ್ಲ. ಅನಗತ್ಯವಾಗಿ ಜನರಲ್ಲಿ ಭಯ ಹುಟ್ಟಿಸಬಾರದು ಎಂದರು.

ಮತ್ತೊಮ್ಮೆ ನಾನೇ ಅಧ್ಯಕ್ಷ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನೇ ಮತ್ತೊಮ್ಮೆ ಅಧ್ಯಕ್ಷನಾಗಿ ಆಯ್ಕೆಯಾಗುವ ವಿಶ್ವಾಸವಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮರು ನೇಮಕದ ಬಗ್ಗೆ ಯಾವುದೇ ಅನುಮಾನವಿಲ್ಲ’ ಎಂದರು. ರಾಜ್ಯದ ಹಲವು ಜಿಲ್ಲೆಗಳ ಬಿಜೆಪಿ ಅಧ್ಯಕ್ಷರ ಆಯ್ಕೆ ಬಾಕಿ ಇದ್ದು, ಎರಡು– ಮೂರು ದಿನಗಳಲ್ಲಿ ನಡೆಯಲಿದೆ ಆದಷ್ಟು ಬೇಗನೆ ಜಿಲ್ಲಾಧ್ಯಕ್ಷರ ಪಟ್ಟಿಯನ್ನು ವರಿಷ್ಠರಿಗೆ ಕಳುಹಿಸಲಾಗುವುದು ಎಂದರು.

ಪಕ್ಷದ ಆಂತರಿಕ ಸಮಸ್ಯೆಗಳು ವರಿಷ್ಠರ ಗಮನಕ್ಕೆ ಬಂದಿದೆ. ಯಾರಿಗೆ ನೋಟಿಸ್ ಕೊಡಬೇಕಿತ್ತೋ ಅವರಿಗೆ ಕೊಟ್ಟಾಗಿದೆ. ನೋಟಿಸ್ ಪಡೆದವರು ಉತ್ತರವನ್ನೂ ಕೊಟ್ಟಿದ್ದಾರೆ. ಪಕ್ಷ ಮತ್ತು ಕಾರ್ಯಕರ್ತರ ಹಿತದೃಷ್ಟಿಯಿಂದ ವರಿಷ್ಠರು ಸಮಸ್ಯೆಗಳನ್ನು ಬಗೆಹರಿಸುತ್ತಾರೆ ಎಂದು ವಿಜಯೇಂದ್ರ ಹೇಳಿದರು.

ರೆಬೆಲ್ ಎನ್ನಬೇಡಿ: ‘ಯತ್ನಾಳ ಮತ್ತು ತಂಡದವರಿಗೆ ರೆಬೆಲ್‌ಗಳು ಎನ್ನಬೇಡಿ’ ಎಂದು ಸುದ್ದಿಗಾರರಿಗೆ ಸಲಹೆ ನೀಡಿದ ಅವರು, ‘ನಾವು– ಅವರು ಎಲ್ಲ ಸೇರಿ ಪಕ್ಷವನ್ನು ಬಲಪಡಿಸಿ, ಭ್ರಷ್ಟ ಕಾಂಗ್ರೆಸ್ ವಿರುದ್ಧ ಪ್ರಬಲ ಹೋರಾಟ ರೂಪಿಸಬೇಕಾಗಿದೆ. ಮತ್ತೊಮ್ಮೆ ಬಿಜೆಪಿಯನ್ನು ಅಧಿಕಾರಕ್ಕೆ ತರಲು ನಾವೆಲ್ಲರೂ ಒಟ್ಟಾಗಿ ಹೋರಾಟ ನಡೆಸಲು ಸಿದ್ಧರಿದ್ದೇವೆ’ ಎಂದು ಅವರು ತಿಳಿಸಿದರು.

ಯತ್ನಾಳ ಬಣದ ಸಭೆ ಇಂದು

ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಅವರ ತಂಡ ಸದಸ್ಯರು ಗುರುವಾರ ಬೆಂಗಳೂರಿನಲ್ಲಿ ಸಭೆ ಸೇರಿ ಮುಂದಿನ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲಿದ್ದಾರೆ.



ಬಸನಗೌಡ ಪಾಟೀಲ ಯತ್ನಾಳ

‘ಯತ್ನಾಳ ಅವರಿಗೆ ಶಿಸ್ತು ಸಮಿತಿ ನೋಟಿಸ್ ಕೊಟ್ಟ ಬಳಿಕ ನಡೆಯುತ್ತಿರುವ ಮೊದಲ ಸಭೆ ಇದಾಗಿದೆ. ನೋಟಿಸ್‌ಗೆ ಯತ್ನಾಳ ಅವರು ಈಗಾಗಲೇ ಉತ್ತರವನ್ನೂ ನೀಡಿದ್ದಾರೆ. ಮುಂದೇನು ಮಾಡಬೇಕು ಎಂಬ ಕುರಿತು ನಾಳೆಯ ಸಭೆಯಲ್ಲಿ ಚರ್ಚಿಸ ಲಾಗುವುದು’ ಎಂದು ಮೂಲಗಳು ತಿಳಿಸಿವೆ.

‘ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರ ನಿವಾಸದಲ್ಲಿ ಸಭೆ ನಡೆಯಲಿದೆ. ನೋಟಿಸ್ ಜಾರಿ ಮಾಡಿದ ನಂತರದ ಬೆಳವಣಿಗೆಗಳ ಬಗ್ಗೆ ಚರ್ಚಿಸುವುದರ ಜತೆಗೆ ಎಂತಹದ್ದೇ ಸಮಯ ಬಂದರೂ ಯತ್ನಾಳ ಅವರ ಜತೆ ದೃಢವಾಗಿ ನಿಲ್ಲುವ ವಿಚಾರದಲ್ಲಿ ನಿರ್ಣಯ ತೆಗೆದುಕೊಳ್ಳಲಾಗುವುದು’ ಎಂದು ಮೂಲಗಳು ಹೇಳಿವೆ.

ಒಪ್ಪಿಗೆ ನಂತರ ಶೋಷಿತರ ಸಮಾವೇಶ: ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆಗೂ ಮೊದಲು ಕಾಂಗ್ರೆಸ್ ಪಕ್ಷ ನೀಡಿದ್ದ ಭರವಸೆಯಂತೆ ‘ಶೋಷಿತರ ಸಮಾವೇಶ’ ಮಾಡಬೇಕಿದೆ. ಹೈಕಮಾಂಡ್ ಅನುಮತಿ ನೀಡಿದ ನಂತರ ಸಮಾವೇಶ ಹಮ್ಮಿಕೊಳ್ಳಲಾಗುತ್ತದೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.



ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ವಿಧಾನಸಭಾ ಚುನಾವಣೆಗೂ ಮೊದಲು ಚಿತ್ರದುರ್ಗದಲ್ಲಿ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಪರಿಶಿಷ್ಟರು, ಹಿಂದುಳಿದ ವರ್ಗ, ಅಲ್ಪ ಸಂಖ್ಯಾತರ ಕಲ್ಯಾಣಕ್ಕಾಗಿ ಸಮಾವೇಶ ನಡೆಸುವ ಭರವಸೆ ನೀಡಲಾಗಿತ್ತು ಎಂದರು.

‘ಅಧಿಕಾರ ಶಾಶ್ವತ ಅಲ್ಲ’

‘ಅಧಿಕಾರ ಯಾರಿಗೂ ಶಾಶ್ವತ ಅಲ್ಲ, ಇರುವಷ್ಟು ದಿನ ಒಳ್ಳೆಯ ಕೆಲಸ ಮಾಡಬೇಕು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ಅಥವಾ ಮುಂದುವರಿಕೆ ಚರ್ಚೆ ಅನಗತ್ಯ. ಇಂತಹ ಚರ್ಚೆಗಳ ಕುರಿತು ಪ್ರತಿಕ್ರಿಯಿಸುವುದಿಲ್ಲ. ಯಾರೇ ಆದರೂ ತಮಗೆ ಸಿಕ್ಕ ಅವಕಾಶ ಸದುಪಯೋಗ ಮಾಡಿಕೊಳ್ಳಬೇಕು. ಅನಗತ್ಯ ಚರ್ಚೆಗಳಿಗೆ ಪ್ರತಿಕ್ರಿಯೆ ನೀಡುತ್ತಾ ಕುಳಿತುಕೊಳ್ಳಲು ಆಗದು ಎಂದರು.



ಡೊಳ್ಳುಕುಣಿತ ಸಿದ್ಧಾರೂಢ ಸ್ವಾಮಿ ಕಥಾಮೃತದ ಶತಮಾನೋತ್ಸವದ ಪ್ರಯುಕ್ತ ಹುಬ್ಬಳ್ಳಿಯಲ್ಲಿ ಬುಧವಾರ ನಡೆದ ಆರೂಢ ಜ್ಯೋತಿಯಾತ್ರೆಯಲ್ಲಿ ಡೊಳ್ಳುಕುಣಿತದ ಕಲಾವಿದರು ಪಾಲ್ಗೊಂಡಿದ್ದರು

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಮಂತ್ರಾಲಯ: ₹ 3.29 ಕೋಟಿ ಕಾಣಿಕೆ ಸಂಗ್ರಹ


ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಬುಧವಾರ ಕಾಣಿಕೆ ಹುಂಡಿ ತೆರೆದು 28 ದಿನಗಳ ಅವಧಿಯಲ್ಲಿ ಸಂಗ್ರಹವಾದ ಕಾಣಿಕೆ ಲೆಕ್ಕಮಾಡಲಾಗಿದ್ದು, ಚಿನ್ನಾಭರಣ ಹಾಗೂ ₹ 3.29 ಕೋಟಿ ನಗದು ಕಾಣಿಕೆ ಸಂಗ್ರಹವಾಗಿದೆ. ₹3,21,05,005 ನಗದು, ₹ 8,10,100 ಮೊತ್ತದ ನಾಣ್ಯ, 58 ಗ್ರಾಂ ಚಿನ್ನ ಹಾಗೂ 1,280 ಗ್ರಾಂ ಬೆಳ್ಳಿಯು ಕಾಣಿಕೆ ರೂಪದಲ್ಲಿ ಬಂದಿದೆ ಎಂದು ಮಠದ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷಿಗೆ ಭೂಮಿ ಖರೀದಿಸಿದ್ದೇನೆ, ನನಗೆ 1986ರಿಂದಲೂ ಕಿರುಕುಳ: ಎಚ್‌ಡಿಕೆ

‘ದ್ವೇಷ ರಾಜಕಾರಣದಿಂದ ಸರ್ವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕೀಯ ದ್ವೇಷದ ಕಾರಣಕ್ಕೆ ಕಾಂಗ್ರೆಸ್ ಸರ್ಕಾರವು, ಕೇತಗಾನಹಳ್ಳಿಯ ನಮ್ಮ ತೋಟದ ಸರ್ವೆ ಕಾರ್ಯ ನಡೆಸುತ್ತಿದೆ. ಈ ವಿಚಾರದಲ್ಲಿ ನನ್ನ ವಿರುದ್ಧ 40 ವರ್ಷಗಳಿಂದಲೂ ದ್ವೇಷ ಕಾರುತ್ತಿದ್ದಾರೆ’ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.



ನಗರದಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈವರೆಗೆ ಯಾವುದೇ ತನಿಖೆ ನಡೆಸಲು ಐಪಿಎಸ್ ಅಧಿಕಾರಿಗಳನ್ನು ಒಳಗೊಂಡ ಎಸ್‌ಐಟಿ ರಚಿಸಲಾಗುತ್ತಿತ್ತು. ರಾಜ್ಯ ಸರ್ಕಾರ ಹೊಸ ಸಂಪ್ರದಾಯ ಆರಂಭಿಸಿ, ಐಎಎಸ್ ಅಧಿಕಾರಿಗಳ ಎಸ್‌ಐಟಿ ರಚಿಸಿದೆ’ ಎಂದರು.

‘1984ರಲ್ಲಿ ನಾನು ರಾಜಕೀಯಕ್ಕೆ ಬಂದಿರಲೇ ಇಲ್ಲ. ಸಿನಿಮಾ ಹಂಚಿಕೆದಾರನಾಗಿ ಗಳಿಸಿದ ಹಣದಲ್ಲಿ ಖರೀದಿಸಿದ ಜಮೀನು ಅದು. ಆ ಬಗ್ಗೆ 1986ರಲ್ಲಿ ಮಾಜಿ ಶಾಸಕ ಸಿ.ಎಂ. ಲಿಂಗಪ್ಪ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯ ರಾಮಚಂದ್ರ ಅವರು ಆಗಿನ ಪ್ರಧಾನಿ, ಗೃಹ ಸಚಿವರಿಗೆ ದೂರು ನೀಡಿದ್ದರು. ಈ ಜಮೀನಿನ ಸಂಬಂಧ ಅಂದಿನಿಂದಲೂ ಕಿರುಕುಳ ನೀಡುತ್ತಲೇ ಇದ್ದಾರೆ’ ಎಂದರು.

‘ನಾನು ಕೃಷಿ ಚಟುವಟಿಕೆಗಾಗಿ ಭೂಮಿ ಖರೀದಿಸಿದ್ದೇನೆ ಮತ್ತು ಆ ಉದ್ದೇಶಕ್ಕೇ ಬಳಸುತ್ತಿದ್ದೇನೆ. ಈವರೆಗೂ ಇಲ್ಲದಿದ್ದ ಕೆಲ ದೂರುದಾರರು, ನಿನ್ನೆ–ಮೊನ್ನೆಯಿಂದ ಪ್ರತ್ಯಕ್ಷರಾಗಿದ್ದಾರೆ. ಇಲ್ಲಸಲ್ಲದ ಹೇಳಿಕೆ ನೀಡುತ್ತಿದ್ದಾರೆ. ರಾಜ್ಯ ಸರ್ಕಾರವೇ ಇದಕ್ಕೆ ಕುಮ್ಮಕ್ಕು ನೀಡುತ್ತಿದೆ’ ಎಂದು ಆರೋಪಿಸಿದರು.

‘ಈ ಪ್ರಕರಣದಲ್ಲಿ 2012ರಿಂದಲೂ ತನಿಖೆ ನಡೆಸುತ್ತಲೇ ಇದ್ದಾರೆ, ಇನ್ನೂ ಮುಗಿದಿಲ್ಲ. ಈಗ ಎಸ್‌ಐಟಿ ನನಗೆ ಯಾವುದೇ ನೋಟಿಸ್ ನೀಡದೆ ಸರ್ವೆ ನಡೆಸಲು ಮುಂದಾಗಿತ್ತು. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದೆ. ಸರ್ವೆ ಮಾಡಿಕೊಳ್ಳಲಿ. ಯಾರೆಲ್ಲಾ ಎಷ್ಟು ಭೂಮಿ ಕಬಳಿಸಿದ್ದಾರೆ ಎಂಬುದರ ದಾಖಲೆ ನನ್ನ ಬಳಿ ಇದೆ’ ಎಂದರು.

‘ಸಿ.ಎಂ ಯೋಗ್ಯತೆ ಅರಿತುಕೊಳ್ಳಬೇಕು’

‘ದೇವೇಗೌಡರು ನೀರಾವರಿಗಾಗಿ ಏನೆಲ್ಲಾ ಮಾಡಿದ್ದಾರೆ ಎಂಬುದು ರಾಜ್ಯದ ಜನತೆಗೆ ಗೊತ್ತಿದೆ. ಇದೇ ಸಿದ್ದರಾಮಯ್ಯ ನೀರಾವರಿಗಾಗಿ ಏನಾದರೂ ಮಾಡಿದ್ದಾರಾ? ಒಮ್ಮೆಯಾದರೂ ವಿಧಾನಸಭೆಯಲ್ಲಿ ಆ ಬಗ್ಗೆ ಮಾತನಾಡಿದ್ದಾರಾ? ಅನಾರೋಗ್ಯದ ನಡುವೆಯೂ ದೇವೇಗೌಡರು ರಾಜ್ಯಸಭೆಯಲ್ಲಿ ಗೋದಾವರಿ–ಕಾವೇರಿ ಜೋಡಣೆ ಬಗ್ಗೆ ಮಾತನಾಡಿದ್ದಾರೆ. ಅವರ ಬಗ್ಗೆ ಅಗೌರವದಿಂದ ಮಾತನಾಡುವುದಕ್ಕೂ ಮೊದಲು ಮುಖ್ಯಮಂತ್ರಿ ತಮ್ಮ ಯೋಗ್ಯತೆ ಅರಿತುಕೊಂಡರೆ ಉತ್ತಮ’ ಎಂದು ಎಚ್‌.ಡಿ. ಕುಮಾರಸ್ವಾಮಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

‘ದುಡ್ಡು ಹೊಡೆದದ್ದೇ ಡಿಕೆಶಿ ಕೊಡುಗೆ’: ‘ರಾಜ್ಯಕ್ಕೆ, ನೀರಾವರಿಗೆ ನನ್ನ ಕೊಡುಗೆ ಏನು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದ್ದಾರೆ. ರಾಜ್ಯಕ್ಕೆ ಅವರ ಕೊಡುಗೆ ಏನು? ದುಡ್ಡು ಕೊಳ್ಳೆ ಹೊಡೆದಿರುವುದೊಂದೇ ಅವರ ಕೊಡುಗೆ’ ಎಂದರು.

ಪರೋಕ್ಷವಾಗಿ ಕೋರ್ಟ್ ಆದೇಶ ಟೀಕೆ: ಕೃಷ್ಣ ಬೈರೇಗೌಡ

‘ಹೈಕೋರ್ಟ್ ಸೂಚನೆಯಂತೆ ಅಧಿಕಾರಿಗಳು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರ ಕುಟುಂಬದ ಜಮೀನು ಸರ್ವೆ ಮಾಡಿದ್ದಾರೆ. ಹೈಕೋರ್ಟ್ ಆದೇಶವನ್ನು ನೇರವಾಗಿ ಟೀಕಿಸಲು ಆಗದ ಕುಮಾರಸ್ವಾಮಿ ಸರ್ಕಾರವನ್ನು ದೂರುತ್ತಿದ್ದಾರೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.



ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಹೀಗೆ ಆದೇಶ ಮಾಡಬೇಕು ಎಂದು ರಾಜ್ಯ ಸರ್ಕಾರ ಕೋರ್ಟ್‌ಗೆ ಸೂಚನೆ ನೀಡಲು ಆಗುತ್ತದೆಯೇ? ಕೇತಗಾನಹಳ್ಳಿ ಜಮೀನು ಒತ್ತುವರಿ ಪ್ರಕರಣ ಕುರಿತು ಸರ್ವೆ ನಡೆಸಿ, ವರದಿ ನೀಡದಿದ್ದರೆ ಜೈಲಿಗೆ ಕಳುಹಿಸಲಾಗುವುದು ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಹೇಳಿದ್ದು ರಾಜ್ಯ ಸರ್ಕಾರನಾ? ಅಥವಾ ಸಿದ್ದರಾಮಯ್ಯನವರಾ’ ಎಂದು ಪ್ರಶ್ನಿಸಿದರು.

‘ಹೈಕೋರ್ಟ್ ಸೂಚನೆಯಂತೆ ಅಧಿಕಾರಿಗಳು ತಮ್ಮ ಕೆಲಸ ಮಾಡಿದ್ದಾರೆ. ಒಂದು ವೇಳೆ ಅಧಿಕಾರಿಗಳು ತಪ್ಪು ಮಾಡಿದರೆ ಕೋರ್ಟ್‌ನಲ್ಲೇ ಪ್ರಶ್ನಿಸಲು ಅವಕಾಶವಿದೆ. ಸರ್ಕಾರವನ್ನು ಟೀಕೆ ಮಾಡುವುದರಲ್ಲಿ ಅರ್ಥವಿಲ್ಲ’ ಎಂದರು.

‘ಒತ್ತುವರಿ ಜಾಗ ವಶಕ್ಕೆ ಪಡೆಯಲಿ’

ಧಾರವಾಡ: ‘ರಾಮನಗರ ಜಿಲ್ಲೆಯ ಕೇತಗಾನಹಳ್ಳಿಯಲ್ಲಿ ಪ್ರಭಾವಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವ 71 ಎಕರೆ ಗೋಮಾಳ ಜಾಗವನ್ನು ಸರ್ಕಾರ ವಶಪಡಿಸಿಕೊಳ್ಳಬೇಕು’ ಎಂದು ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್.ಆರ್.ಹಿರೇಮಠ ಒತ್ತಾಯಿಸಿದರು.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ, ಸಾವಿತ್ರಮ್ಮ, ಸಂಸದ ಡಾ. ಸಿ.ಎನ್. ಮಂಜುನಾಥ, ಮಾಜಿ ಶಾಸಕ ಡಿ.ಸಿ. ತಮ್ಮಣ್ಣ, ಕೆ.ಜಿ. ಪ್ರಮೀಳಾ, ಡಿ.ಟಿ. ಸಂತೋಷ, ದಿ. ನಂಜುಂಡಯ್ಯ, ಸುನಂದಾ ಅವರು ಗೋಮಾಳ ಒತ್ತುವರಿ ಮಾಡಿದ್ದಾರೆ’ ಎಂದು ಆರೋಪಿಸಿದರು.

‘ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಪ್ರಕರಣದಲ್ಲಿ ಶಾಮೀಲಾದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಆಗ್ರಹಿಸಿದರು.

‘ಈ ಪ್ರಕರಣದ ಸಂಬಂಧ ಸರ್ಕಾರ 5 ವರ್ಷದಿಂದ ಅನುಪಾಲನಾ ವರದಿ ಸಲ್ಲಿಸದಿರುವುದನ್ನು ಹೈಕೋರ್ಟ್ ಗಂಭೀರವಾಗಿ ಪರಿಗಣಿಸಿದೆ. ಈ ಕುರಿತು ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿದ್ದು, ಹೈಕೋರ್ಟ್ ಆದೇಶಕ್ಕೆ ಸಂಬಂಧಿಸಿದಂತೆ ದಂತೆ ಸರ್ಕಾರ ಫೆಬ್ರುವರಿ 21ರಂದು ಅನುಪಾಲನಾ ವರದಿ ಸಲ್ಲಿಸಬೇಕಿದೆ’ ಎಂದರು.

ಕಪಿಲ ಹುಮನಾಬಾದೆಗೆ ‘ಟೊಟೊ ಪುರಸ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೊಟೊ ಫಂಡ್ಸ್ ದಿ ಆರ್ಟ್ಸ್ (ಟಿ.ಎಫ್.ಎ) ಸಂಸ್ಥೆಯು ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಲೇಖಕ ಕಪಿಲ ಹುಮನಾಬಾದೆ ಅವರಿಗೆ ಪ್ರಸಕ್ತ ಸಾಲಿನ ‘ಟೊಟೊ ಪುರಸ್ಕಾರ’ ಪ್ರದಾನ ಮಾಡಲಾಯಿತು.

ಕನ್ನಡ ಸೃಜನಶೀಲ ಬರವಣಿಗೆಗಾಗಿ ಈ ಪುರಸ್ಕಾರಕ್ಕೆ ಅವರನ್ನು ಆಯ್ಕೆ ಮಾಡಲಾಗಿತ್ತು. ರಂಗಭೂಮಿ ಕಲಾವಿದೆ ಮಾಯಾ ಕೃಷ್ಣ ರಾವ್ ಅವರು ಪುರಸ್ಕಾರ ಪ್ರದಾನ ಮಾಡಿ ಗೌರವಿಸಿದರು. ಈ ಪುರಸ್ಕಾರವು ₹60 ಸಾವಿರ ನಗದು ಒಳಗೊಂಡಿದೆ.

‘ಆಂಗೀರಸ್ ಟೊಟೊ ವೆಲ್ಲಾನಿ ಅವರ ಸ್ಮರಣಾರ್ಥ ಟಿಎಫ್‌ಎ ಕಳೆದ 21 ವರ್ಷಗಳಿಂದ 29 ವರ್ಷದೊಳಗಿನ ಯುವ ಬರಹಗಾರರನ್ನು ಪ್ರೋತ್ಸಾಹಿಸಲು ಈ ಸ್ಪರ್ಧೆಯನ್ನು ಆಯೋಜಿಸುತ್ತ ಬಂದಿದೆ. ಕನ್ನಡ ಸೃಜನಶೀಲ ಬರವಣಿಗೆ ವಿಭಾಗದಲ್ಲಿ ಈ ಸಲ 76 ಬರಹಗಾರರು ಸ್ಪರ್ಧಿಸಿದ್ದರು. ಕೊನೆಯ ಸುತ್ತಿನಲ್ಲಿ ಸುವರ್ಣಾ ಚೆಳ್ಳೂರು, ವಿನಯ ಗುಂಟೆ ಮತ್ತು ಕಪಿಲ ಹುಮನಾಬಾದೆ ಆಯ್ಕೆಯಾಗಿದ್ದರು’ ಎಂದು ಟೊಟೊ ಬಳಗ ತಿಳಿಸಿದೆ.



ಕಪಿಲ ಹುಮನಾಬಾದೆ ಅವರಿಗೆ ಮಾಯಾ ಕೃಷ್ಣ ರಾವ್ ‘ಟೊಟೊ ಪುರಸ್ಕಾರ’ ಪ್ರದಾನ ಮಾಡಿದರು

ಸೆಲ್ಫಿ: ರೈಲು ಹರಿದು ಮೂವರು ಸಾವು

ದೊಡ್ಡಬಳ್ಳಾಪುರ (ಬೆಂ.ಗ್ರಾ. ಜಿಲ್ಲೆ): ರೈಲು ಬರುವಾಗ ಸೆಲ್ಫಿ ತೆಗೆದುಕೊಳ್ಳಲು ಹೋದ ಮೂವರು ಯುವಕರು ಬುಧವಾರ ರಾತ್ರಿ ರೈಲಿಗೆ ಸಿಲುಕಿ ಪ್ರಾಣ ಕಳೆದುಕೊಂಡಿದ್ದಾರೆ.

ಇಲ್ಲಿಯ ಸಿದ್ದೇನಾಯಕನಹಳ್ಳಿಯ ರೈಲು ಹಳಿ ಬಳಿ ನಿಂತು ಬುಧವಾರ ರಾತ್ರಿ ಸೆಲ್ಫಿ ತೆಗೆದುಕೊಳ್ಳುತ್ತಿದ್ದ ಉತ್ತರ ಪ್ರದೇಶದ ರಾಹುಲ್ (18), ಬಿಕೇಶ್ (20) ಹಾಗೂ ಲಲ್ಲನ್ (24) ರೈಲಿಗೆ ಸಿಲುಕಿ ಮೃತಪಟ್ಟಿದ್ದಾರೆ.

ಯುವಕರು ಸೆಲ್ಫಿ ತೆಗೆದುಕೊಳ್ಳುತ್ತಿದ್ದಾಗ ಸತ್ಯಸಾಯಿ–ಬೆಂಗಳೂರು ಪ್ಯಾಸೆಂಜರ್ ರೈಲು ಬಂದಿದೆ. ಈ ವೇಳೆ ಮೂವರೂ ಆಯತಪ್ಪಿ ರೈಲಿನಡಿ ಬಿದ್ದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೂವರು ಯುವಕರು ನಗರದ ಮುತ್ತೂರಿನಲ್ಲಿ ವಾಸವಾಗಿದ್ದರು. ಮನೆ ಕಟ್ಟಡ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಬೀದರ್‌ನ ಐದು ತಾಲ್ಲೂಕು ಕೇಂದ್ರಗಳ ಗಡಿಯಲ್ಲಿ ಚೆಕ್‌ಪೋಸ್ಟ್ ಆರಂಭ

ಮಹಾರಾಷ್ಟ್ರದ ಮೊಟ್ಟೆ, ಮಾಂಸಕ್ಕೆ ನಿರ್ಬಂಧ

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಜಿಲ್ಲೆಯ ಗಡಿಭಾಗದಲ್ಲಿ ಕಾಗೆ, ಕೋಳಿಗಳಲ್ಲಿ ಹಕ್ಕಿಜ್ವರ ದೃಢಪಟ್ಟಿರುವುದರಿಂದ ಮಹಾರಾಷ್ಟ್ರದಿಂದ ಜಿಲ್ಲೆಗೆ ಮೊಟ್ಟೆ, ಕೋಳಿ ಮಾಂಸ, ಗೊಬ್ಬರ ಸಾಗಾಟದ ಮೇಲೆ ಜಿಲ್ಲಾಡಳಿತ ನಿರ್ಬಂಧ ಹೇರಿದೆ.

ಮಹಾರಾಷ್ಟ್ರದೊಂದಿಗೆ ಗಡಿಭಾಗ ಹಂಚಿಕೊಂಡಿರುವ ಜಿಲ್ಲೆಯ ಐದು ತಾಲ್ಲೂಕುಗಳ ಗಡಿಯಲ್ಲಿ ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿದೆ. ಜಿಲ್ಲೆಯ ಔರಾದ್ (ಬಿ) ತಾಲ್ಲೂಕಿನ ಜಂಬಗಿ, ಚಿಂತಾಕಿ, ಬಾದಲಗಾಂವ್, ಏಕಂಬಾ, ಭಾಲ್ಕಿ ತಾಲ್ಲೂಕಿನಅಳವಾಯಿ, ಲಖನಗಾಂವ್, ಬಸವಕಲ್ಯಾಣ ತಾಲ್ಲೂಕಿನ ಚಂಡಕಾಪೂರ, ಕಮಲನಗರ ಪಟ್ಟಣ, ಹುಲಸೂರ ಪಟ್ಟಣದಲ್ಲಿ ಚೆಕ್‌ಪೋಸ್ಟ್ ತೆರೆಯಲಾಗಿದೆ. ಮೂರು ಪಾಳಿಗಳಲ್ಲಿ ಅಧಿಕಾರಿಗಳು, ಸಿಬ್ಬಂದಿ ಕೆಲಸ ನಿರ್ವಹಿಸುತ್ತಿದ್ದಾರೆ.

ಮಹಾರಾಷ್ಟ್ರದಿಂದ ಜಿಲ್ಲೆಯ ಕಡೆಗೆ ಸಂಚರಿಸುವ ಎಲ್ಲ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾರೆ. ಮೊಟ್ಟೆ, ಕೋಳಿ ಮಾಂಸ, ಕೋಳಿಯಿಂದ ತಯಾರಿಸಲಾಗುವ ಇತರೆ ಉತ್ಪನ್ನಗಳಿದ್ದರೆ ತಡೆದು ವಾಪಸ್ ಕಳಿಸುತ್ತಿದ್ದಾರೆ. ಪರಿಸ್ಥಿತಿ ನಿಯಂತ್ರಣಕ್ಕೆ ಬರುವವರೆಗೆ ಈ ಆದೇಶ ಜಾರಿಯಲ್ಲಿರಲಿದೆ.

‘ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ಉದಗೀರ್‌ನಲ್ಲಿ ಏಕಾಏಕಿ 40ರಿಂದ50 ಕಾಗೆಗಳು ಸಾವನ್ನಪ್ಪಿದ್ದವು. ಮಧ್ಯ ಪ್ರದೇಶದ ಭೋಪಾಲ್‌ನಲ್ಲಿರುವ ದೇಶದ ಏಕಮಾತ್ರ ಪ್ರಯೋಗಾಲಯಕ್ಕೆ ಸ್ಯಾಂಪಲ್ ಕಳುಹಿಸಲಾಗಿತ್ತು. ಎಚ್‌5ಎನ್‌1 ವೈರಸ್‌ನಿಂದ ಉಂಟಾಗುವ ಹಕ್ಕಿಜ್ವರ ಇರುವುದು ದೃಢಪಟ್ಟಿದೆ. ಕಾಗೆಗಳಿಂದ ಕೋಳಿಗಳಿಗೂ ಹರಡಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲೆಯ ಗಡಿಭಾಗಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿದೆ. ಮಹಾರಾಷ್ಟ್ರದಿಂದ ಮೊಟ್ಟೆ, ಕೋಳಿ ಹಾಗೂ ಕೋಳಿ ಉತ್ಪನ್ನಗಳನ್ನು ಜಿಲ್ಲೆಗೆ ಸಾಗಾಟ ಮಾಡದಂತೆ ತಡೆಯಲಾಗುತ್ತಿದೆ’ ಎಂದು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪನಿರ್ದೇಶಕ ನರಸಪ್ಪ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಜಿಲ್ಲೆಯ ಕೋಳಿ ಫಾರ್ಮ್‌ಗಳಿಗೆ ನಮ್ಮ ಸಿಬ್ಬಂದಿ ಭೇಟಿ ಕೊಟ್ಟು ಪರಿಶೀಲನೆ ನಡೆಸುತ್ತಿದ್ದಾರೆ. ಎಲ್ಲಾದರೂ ಹಠಾತ್ ಆಗಿ ಕೋಳಿಗಳು ಸಾವನ್ನಪ್ಪಿದರೆ ಗಮನಕ್ಕೆ ತರಬೇಕು ಎಂದು ಕೋಳಿ ಫಾರ್ಮ್ ಮಾಲೀಕರಿಗೆ ತಿಳಿಸಲಾಗಿದೆ’ ಎಂದರು.



ಮಹಾರಾಷ್ಟ್ರದ ಮೊಟ್ಟೆ, ಕೋಳಿ ಮಾಂಸವನ್ನು ನಿರ್ಬಂಧಿಸಿರುವುದರಿಂದ ಜಿಲ್ಲೆಯ ವ್ಯಾಪಾರಸ್ಥರು ನೆರೆಯ ತೆಲಂಗಾಣ, ಆಂಧ್ರ ಪ್ರದೇಶದ ಮೂಲಕ ಆಮದು ಮಾಡಿಕೊಳ್ಳುತ್ತಿದ್ದಾರೆ. ಹಕ್ಕಿಜ್ವರದ ವಿಷಯ ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿದ್ದಂತೆ ಜನ ಮೊಟ್ಟೆ, ಕೋಳಿ ಮಾಂಸ ಸೇವಿಸಲು ಹಿಂದೇಟು ಹಾಕುತ್ತಿದ್ದಾರೆ.



ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಚಂಡಕಾಪೂರದ ಚೆಕ್‌ಪೋಸ್ಟ್‌ನಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಅಧಿಕಾರಿಗಳು ವಾಹನ ಪರಿಶೀಲಿಸಿದರು

‘ಮೊಟ್ಟೆ, ಮಾಂಸ ಹೆಚ್ಚು ಬೇಯಿಸಿ ತಿನ್ನಿ’

‘ಎಚ್‌5ಎನ್‌1 ವೈರಸ್ ಮಾರಣಾಂತಿಕವಾದದ್ದು. ಕೋಳಿಗಳಿಂದ ಕೋಳಿಗಳಿಗೆ, ಅವುಗಳಿಂದ ಮನುಷ್ಯರಿಗೂ ಹರಡುವ ಸಾಧ್ಯತೆ ಇದೆ. ಮೊಟ್ಟೆ ಹಾಗೂ ಕೋಳಿ ಮಾಂಸದ ಪದಾರ್ಥಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೇಯಿಸಿ ತಿನ್ನಬೇಕು. ಇದರಿಂದ ವೈರಸ್ ಹರಡುವ ಅಪಾಯ ಕಡಿಮೆ ಇರುತ್ತದೆ’ ಎಂದು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪನಿರ್ದೇಶಕ ನರಸಪ್ಪ ಸಲಹೆ ಮಾಡಿದ್ದಾರೆ.

ಕೆಐಎ: ₹2 ಕೋಟಿ ಮೌಲ್ಯದ ವಿದೇಶಿ ಕರೆನ್ಸಿ ವಶ

ನವದೆಹಲಿ(ಪಿಟಿಐ): ಬೆಂಗಳೂರು ವಿಮಾನ ನಿಲ್ದಾಣದಿಂದ (ಕೆಐಎ) ಕೊಲಂಬೊಗೆ ಕಳ್ಳಸಾಗಣೆ ಮಾಡುತ್ತಿದ್ದ ₹2.12 ಕೋಟಿ ಮೌಲ್ಯದ ವಿದೇಶಿ ಕರೆನ್ಸಿಗಳನ್ನು ಶ್ರೀಲಂಕಾ ಪ್ರಜೆಯಿಂದ ವಶಕ್ಕೆ ಪಡೆಯಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ತಿಳಿಸಿದೆ.

ಭದ್ರತಾ ತಪಾಸಣೆ ವೇಳೆ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಸಿಬ್ಬಂದಿ ನೋಟುಗಳನ್ನು ಪತ್ತೆಹಚ್ಚಿ, ಮಾಹಿತಿ ನೀಡಿದ್ದರು ಎಂದು ಕೇಂದ್ರೀಯ ತನಿಖಾ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.

ಶ್ರೀಲಂಕಾ ಪ್ರಜೆ ವಿಮಲ್ರಾಜ್ ತುರೈಸಿಂಗಂ ಅವರಿಂದ ಡಾಲರ್, ಯೂರೊ, ರಿಯಾಲ್ ಕರೆನ್ಸಿ ವಶಪಡಿಸಿಕೊಳ್ಳಲಾಗಿದೆ. ತುರೈಸಿಂಗಂ ಈ ಕರೆನ್ಸಿಗಳನ್ನು ಚೆನ್ನೈನಲ್ಲಿ ನಗದು ಪಾವತಿಸಿ ಖರೀದಿಸಿರುವುದು ಗೊತ್ತಾಗಿದೆ ಎಂದು ಇ.ಡಿ ತಿಳಿಸಿದೆ.

ಜಾರ್ಜ್ ಹೇಳಿಕೆಗೆ ಅಶೋಕ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೃಹಲಕ್ಷ್ಮಿ, ಅನ್ನಭಾಗ್ಯದ ಹಣವನ್ನು ತಿಂಗಳು, ತಿಂಗಳು ಹಾಕುವುದಕ್ಕೆ ಸಂಬಳ ಅಲ್ವಲ್ಲ’ ಎಂಬ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರ ಹೇಳಿಕೆಯನ್ನು ಬಿಜೆಪಿ ನಾಯಕರು ಕಟುವಾಗಿ ಟೀಕಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು, ‘ಗೃಹಲಕ್ಷ್ಮಿ, ಅನ್ನಭಾಗ್ಯ ಹಣ ತಿಂಗಳ ಸಂಬಳ ಅಲ್ವಲ್ಲ ಎಂದು ಹೇಳಿದ್ದೀರಿ, ಹಣ ಕೊಡಿ ಅಂತ ಮತದಾರರೇನು ನಿಮ್ಮ ಬಳಿ ಭಿಕ್ಷೆ ಬೇಡುತ್ತಿಲ್ಲ. ಈ ಗ್ಯಾರಂಟಿ ಪ್ರಾರಂಭಿಸಿ ಅಂತ ಜನ ಕೇಳಿರಲೂ ಇಲ್ಲ’ ಎಂದು ಹೇಳಿದ್ದಾರೆ.

‘ನಿಮ್ಮ ಕಾಂಗ್ರೆಸ್ ಪಕ್ಷದ ಅಧಿಕಾರದ ತೆವಲಿಗೆ ಬೇಕಾಬಿಟ್ಟಿ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿ, ಈಗ ಮತದಾರರ ಬಗ್ಗೆ ಏಕೆ ಕೀಳಾಗಿ ಮಾತನಾಡುತ್ತೀರಿ? ನಿಮ್ಮ ಕೈಲಾದರೆ ಕೊಟ್ಟ ಮಾತಿನಂತೆ ಗ್ಯಾರಂಟಿ ಯೋಜನೆಗಳನ್ನು ಗೌರವದಿಂದ ಜಾರಿ ಮಾಡಿ. ನಿಮ್ಮ ಕೈಲಾಗದಿದ್ದರೆ ಬಿಟ್ಟುಬಿಡಿ. ಗ್ಯಾರಂಟಿ ಯೋಜನೆಗಳು ಜಾರಿ ಆಗುವ ಮುನ್ನವೂ ಜನರು ತಮ್ಮ ಬದುಕು ಕಟ್ಟಿಕೊಂಡಿದ್ದರು. ಅವು ಇಲ್ಲದೆಯೂ ತಮ್ಮ ಬದುಕು ಕಟ್ಟಿಕೊಳ್ಳುತ್ತಾರೆ. ಕಾಂಗ್ರೆಸ್ ಕೋಳಿ ಕೂಗಿದರೆ ಕರ್ನಾಟಕದಲ್ಲಿ ಬೆಳಕು ಹರಿಯುತ್ತದೆ ಎನ್ನುವ ದುಸ್ಥಿತಿ ಕನ್ನಡಿಗರಿಗೆ ಬಂದಿಲ್ಲ’ ಎಂದರು.

‘ಕನ್ನಡಿಗರ ಸ್ವಾಭಿಮಾನ ಕೆಣಕಬೇಡಿ. ಈಗಾಗಲೇ ದೇಶದಾದ್ಯಂತ ಕಾಂಗ್ರೆಸ್ ಪಕ್ಷಕ್ಕೆ ಅಡ್ರೆಸ್ ಇಲ್ಲದಂತಾಗಿದೆ. ಕನ್ನಡಿಗರ ಸ್ವಾಭಿಮಾನಕ್ಕೆ ಪೆಟ್ಟು ಬಿದ್ದರೆ ಕರ್ನಾಟಕದಲ್ಲೂ ಕಾಂಗ್ರೆಸ್ ನಿರ್ನಾಮ ಆಗುವುದು ಗ್ಯಾರಂಟಿ’ ಎಂದಿದ್ದಾರೆ.

ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ಬಡವರ ಬಗ್ಗೆ ಕಾಂಗ್ರೆಸ್ ಪಕ್ಷ ಮತ್ತು ಸಿದ್ದರಾಮಯ್ಯ ಸರ್ಕಾರಕ್ಕಿರುವ ತಾತ್ಸಾರ ಈ ಹೇಳಿಕೆಯಿಂದ ಗೊತ್ತಾಗುತ್ತದೆ. ಅಧಿಕಾರಕ್ಕೆ ಬಂದಾಗಿನಿಂದಲೂ ಒಂದಲ್ಲ ಒಂದು ನೆಪ ಹೇಳಿ ಗ್ಯಾರಂಟಿ ಅನುಷ್ಠಾನದಲ್ಲಿ ನಿರ್ಲಕ್ಷ್ಯ ತೋರುತ್ತಿದ್ದಾರೆ. ಗ್ಯಾರಂಟಿ ನೆಪದಲ್ಲಿ ಅವರು ಮಾಡಿದ ಒಂದೇ ಸಾಧನೆ ಎಂದರೆ ಬೆಲೆ ಏರಿಕೆ ಎಂದು ಹೇಳಿದರು.

465 ಭೂ ಮಾಪಕರಿಗೆ ಆಧುನಿಕ ತಂತ್ರಜ್ಞಾನದ ರೋವರ್ ವಿತರಿಸಿದ ಸಚಿವ ಕೃಷ್ಣ ಬೈರೇಗೌಡ

ಭೂಮಾಪನ: ಸರಪಳಿ ಪದ್ಧತಿಗೆ ಮುಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಮಿ ಅಳತೆಗೆ ಶತಮಾನಗಳಿಂದ ಬಳಸುತ್ತಿದ್ದ ಸರಪಳಿ ಪದ್ಧತಿ ಇತಿಹಾಸದ ಪುಟಕ್ಕೆ ಸೇರಲು ತಯಾರಾಗಿದೆ. ಇನ್ನು ಮುಂದೆ ರಾಜ್ಯದಲ್ಲಿ ಸರ್ವೆಗೆ ಆಧುನಿಕ ತಂತ್ರಜ್ಞಾನ ಆಧಾರಿತ ರೋವರ್ ಬಳಕೆಯಾಗಲಿದೆ.

ಭೂಮಾಪನ ಮತ್ತು ನೋಂದಣಿ ಆಯುಕ್ತರ ಕಚೇರಿಯಲ್ಲಿ ಬುಧವಾರ 465 ಜನ ಭೂ ಮಾಪಕರಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ರೋವರ್‌ಗಳನ್ನು ವಿತರಿಸಿದರು.

ಸರಪಳಿ ಬಳಸಿ ನಡೆಸುತ್ತಿದ್ದ ಸರ್ವೆಯಲ್ಲಿ ನಡೆಯುವ ಅಕ್ರಮವನ್ನು ತಡೆಯಲು ಮತ್ತು ತ್ವರಿತವಾಗಿ ಸರ್ವೆ ನಡೆಸಲು, ಅಧಿಕಾರಿಗಳ ಕೆಲಸ ಕಡಿಮೆ ಮಾಡಲು ರೋವರ್ ಬಳಕೆಯಾಗಲಿದೆ ಎಂದು ಕೃಷ್ಣ ಬೈರೇಗೌಡ ಅವರು ತಿಳಿಸಿದರು.

ಸರಪಳಿ ಬಳಸಿ ಸರ್ವೆ ಮಾಡುವಾಗ ಕೆಲವರು ತಮ್ಮ ಹಿತಾಸಕ್ತಿಗೆ ಅನುಗುಣವಾಗಿ ಅಳತೆಯಲ್ಲಿ ಹೆಚ್ಚು ಕಮ್ಮಿ ಮಾಡುತ್ತಿದ್ದರು. ಇದರಿಂದ ಅನೇಕರು ಇಂದಿಗೂ ಕೋರ್ಟ್ ಕಚೇರಿಗೆ ಅಲೆಯುತ್ತಿದ್ದಾರೆ. ರೋವರ್ ಸರ್ವೆಯಲ್ಲಿ ಇಂಥ ಅಕ್ರಮಗಳಿಗೆ ಆಸ್ಪದ ಇರುವುದಿಲ್ಲ ಎಂದು ಮಾಹಿತಿ ನೀಡಿದರು.



ಭೂ ಮಾಪಕರಿಗೆ ಆಧುನಿಕ ತಂತ್ರಜ್ಞಾನ ಆಧಾರಿತ ರೋವರ್‌ಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಶಾಸಕ ರಿಜ್ವಾನ್ ಅರ್ಷದ್ ಹಾಗೂ ಕಂದಾಯ ಸಚಿವ ಕೃಷ್ಣ ಬೈರೇಗೌಡ ಭಾಗಿಯಾಗಿದ್ದರು

ಆಧುನಿಕ ಕಂಪ್ಯೂಟರ್ ಜಗತ್ತಿನಲ್ಲೂ ಸಹ ಸರ್ವೆ ಕೆಲಸವನ್ನು ತಂತ್ರಜ್ಞಾನಕ್ಕೆ ಒಳಪಡಿಸದೆ ಜನರ ಮೇಲೆ ಹೊರೆ ಹಾಕುವುದು ಅಮಾನವೀಯ ಮತ್ತು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದ ನಡವಳಿಕೆ. ಹೀಗಾಗಿ ಇಲಾಖೆಯಲ್ಲಿ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಪ್ರತಿ ಭೂ ಮಾಪಕರಿಗೆ ಒಂದರಂತೆ ರೋವರ್ ನೀಡಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ 1830 ರಿಂದ 1870ರ ವರೆಗೆ ಮಾತ್ರ ಸರ್ವೆ ಆಗಿತ್ತು, 1967ರಲ್ಲಿ ಸ್ವಲ್ಪ ಪ್ರಮಾಣದಲ್ಲಿ ಪುನರ್ ಸರ್ವೆ ಮಾಡಲಾಗಿತ್ತು. ಆನಂತರ ಸರ್ವೆ ನಡೆದಿಲ್ಲ. ಪ್ರಸ್ತುತ ರೈತರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸರ್ವೆ ಹಾಗೂ ಪುನರ್ ಸರ್ವೆ ಕೆಲಸಗಳಿಗೆ ವೇಗ ತುಂಬುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಕಳೆದ 200 ವರ್ಷಗಳಲ್ಲಿ ಪ್ರಪಂಚ ಭಾರಿ ಬದಲಾವಣೆಯನ್ನು ಕಂಡಿದೆ. ಆದರೆ ಕಂದಾಯ ಇಲಾಖೆಯ ಸರ್ವೆ ವಿಭಾಗದಲ್ಲಿ 200 ವರ್ಷಗಳ ಹಿಂದಿನ ಪದ್ಧತಿಯೇ ಇರುವುದು ಶೋಚನೀಯ ಎಂದು ಬೇಸರ ವ್ಯಕ್ತಪಡಿಸಿದರು.

ಶಾಸಕ ರಿಜ್ವಾನ್ ಅರ್ಷದ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಕಂದಾಯ ಆಯುಕ್ತ ಸುನಿಲ್ ಕುಮಾರ್ ಹಾಗೂ ಭೂ ಮಾಪನ ಇಲಾಖೆ ಆಯುಕ್ತ ಮಂಜುನಾಥ್ ಉಪಸ್ಥಿತರಿದ್ದರು.

10 ನಿಮಿಷದಲ್ಲಿ ಸರ್ವೆ

ಸರಪಳಿ ಹಿಡಿದು ಅಳೆಯುವ ಹಳೆ ಪದ್ಧತಿಯೇ ಇಲ್ಲಿಯವರೆಗೆ ಮುಂದುವರಿದಿದೆ. ಸರ್ವೆ ಮಾಡುವಾಗ ಬಿಸಿಲಿನಲ್ಲಿ ಸರ್ವೇಯರ್ ಜೊತೆಗೆ ಇಬ್ಬರು ಸಹಾಯಕರೂ ಕೆಲಸ ಮಾಡಬೇಕಿತ್ತು. ಸರ್ವೆಗೆ ಕನಿಷ್ಠ 70 ನಿಮಿಷ ಬೇಕಿತ್ತು, ಅದನ್ನು ನಕ್ಷೆ ಮಾಡಲು 3 ಗಂಟೆ ಸಮಯ ಹಿಡಿಯುತ್ತಿತ್ತು. ಈ ಕೆಲಸವನ್ನು ರೋವರ್ ಕೇವಲ 10 ನಿಮಿಷದಲ್ಲಿ ಮುಗಿಸಲಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಮಾಹಿತಿ ನೀಡಿದರು.

'ಪಿಂಚಣಿ ಪಾವತಿಗೆ ಹಣ ಇಲ್ಲ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಿವೃತ್ತ ನೌಕರರ ವೇತನ ಪಾವತಿಗೆ ಹಣಕಾಸಿನ ಕೊರತೆ ಎದುರಾಗಿದೆ. ಆಂತರಿಕ ಸಂಪನ್ಮೂಲ ಹೊಂದಿಸಿ, ಈವರೆಗೆ ಪಿಂಚಣಿ ಪಾವತಿಸಲಾಗಿದೆ. ಮುಂದಿನ ತಿಂಗಳು ವೇತನ ನೀಡಲು ಹಣ ಇಲ್ಲ' ಎಂದು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಪ್ರೊ. ಸಿ.ಕೃಷ್ಣಮೂರ್ತಿ ತಿಳಿಸಿದರು.

'ವಿಶ್ವವಿದ್ಯಾಲಯದ ಎಲ್ಲ ಆಂತರಿಕ ಸಂಪನ್ಮೂಲವನ್ನು ಪಿಂಚಣಿಗೆ ಬಳಸಲಾಗುತ್ತಿದೆ. ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದು ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ಸಿ.ಕೃಷ್ಣಮೂರ್ತಿ

'1,800 ನಿವೃತ್ತ ನೌಕರರ ಪಿಂಚಣಿಗೆ ತಿಂಗಳಿಗೆ ₹9 ಕೋಟಿ, ವರ್ಷಕ್ಕೆ ₹126 ಕೋಟಿ ಅನುದಾನ ಬೇಕು. ಸರ್ಕಾರ ಒಮ್ಮೆ ₹50 ಕೋಟಿ, ಮತ್ತೊಮ್ಮೆ ₹20 ಕೋಟಿ ನೀಡಿದೆ. ಪಿಂಚಣಿ ಬಾಬ್ತಿಗೆ ಇನ್ನೂ ₹50 ಕೋಟಿ ಅನುದಾನ ಬೇಕು' ಎಂದರು.

'ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಡಿ (ಎಚ್‌ಆರ್‌ಎಂಎಸ್) ವಿಶ್ವವಿದ್ಯಾಲಯದ ನೌಕರರಿಗೆ ಸರ್ಕಾರ ವೇತನ ಪಾವತಿಸುತ್ತಿದೆ. ಪಿಂಚಣಿ ನೀಡುವ ನಿಟ್ಟಿನಲ್ಲಿ ಅನುದಾನ ಒದಗಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಆದರೆ, ಸ್ಪಂದನೆ ಸಿಗುತ್ತಿಲ್ಲ. ಇನ್ನೊಂದು ವಾರದಲ್ಲಿ ಬೆಂಗಳೂರಿಗೆ ತೆರಳಿ, ಸರ್ಕಾರಕ್ಕೆ ಮನವಿ ಸಲ್ಲಿಸಲು ಸಿಂಡಿಕೇಟ್ ಸಭೆಯಲ್ಲಿ ನಿರ್ಧರಿಸಲಾಗಿದೆ' ಎಂದರು.

ಪ್ರಭಾರ ಕುಲಪತಿ ಪ್ರೊ. ಎಸ್. ಜಯಶ್ರೀ ಮಾತನಾಡಿ, 'ನಿವೃತ್ತ ನೌಕರರ ಪಿಂಚಣಿ ಪಾವತಿಸಲು ಸರ್ಕಾರ ಕ್ರಮ ವಹಿಸಿದರೆ ಅನುಕೂಲವಾಗುತ್ತದೆ. ಪ್ರಧಾನಮಂತ್ರಿ ಉಚ್ಚತರ ಶಿಕ್ಷಣ ಅಭಿಯಾನದಡಿ ವಿಶ್ವವಿದ್ಯಾಲಯಕ್ಕೆ ₹20 ಕೋಟಿ ಅನುದಾನ ಮಂಜೂರಾಗಿದೆ. ಸದ್ಯವರ ಅಭಿವೃದ್ಧಿಗೆ ಅನುದಾನದ ಸ್ವಲ್ಪ ಭಾಗ ಬಳಸುವ ಉದ್ದೇಶವಿದೆ' ಎಂದರು.

ಕಾಶ್ಮೀರಿ ವೈದ್ಯ ವಿದ್ಯಾರ್ಥಿಗೆ ರ‍್ಯಾಗಿಂಗ್: ಐವರ ಬಂಧನ

ಪ್ರಜಾವಾಣಿ ವಾರ್ತೆ

ವಿಜಯಪುರ: ನಗರದ ಅಲ್ ಅಮೀನ್ ವೈದ್ಯಕೀಯ ಮಹಾವಿದ್ಯಾಲಯದ ದ್ವಿತೀಯ ವರ್ಷದಲ್ಲಿ ಓದುತ್ತಿರುವ ಕಾಶ್ಮೀರದ ವಿದ್ಯಾರ್ಥಿ ಹಮೀಮ್ ಗುಲಾಂ ಅಹ್ಮದ್ ಭಟ್ ಅವರಿಗೆ ರ‍್ಯಾಗಿಂಗ್ ಮತ್ತು ದೈಹಿಕ ಹಿಂಸೆ ನೀಡಿದ ಆರೋಪದ ಮೇಲೆ ಐವರು ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಕಾಲೇಜಿನ ವಿದ್ಯಾರ್ಥಿಗಳಾದ ವಿಜಯಪುರದ ಮಹಮ್ಮದ್ ಝೈನುಲ್(23), ಬಳ್ಳಾರಿ ಜಿಲ್ಲೆಯ ಸಂಡೂರಿನ ಸಮೀರ್ ತಾಡಪತ್ರಿ (24), ರಾಯಚೂರು ಜಿಲ್ಲೆ ಮುದಗಲ್‌ನ ಶೇಖ್ ಸಾಜಿದ್ (23), ಬಳ್ಳಾರಿ ಜಿಲ್ಲೆ ಶಿರಗುಪ್ಪದ ಮನ್ಸೂರ್ ಬಾಷಾ (24) ಮತ್ತು ಇಂಡಿ ತಾಲ್ಲೂಕಿನ ಹಿಂಗಣಿಯ ಮುಜಾಹಿದ್ ಜಮಾದಾರ(23) ಎಂಬುವರನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.



ಪ್ರಧಾನಿ, ಮುಖ್ಯಮಂತ್ರಿಗೆ ಟ್ಯಾಗ್: 'ನಮ್ಮ ಮಗನಿಗೆ ಹಿರಿಯ ವಿದ್ಯಾರ್ಥಿಗಳು ರ‍್ಯಾಗಿಂಗ್ ಮಾಡಿದ್ದು, ಆತನಿಗೆ ರಕ್ಷಣೆ ನೀಡಿ' ಎಂದು ಕಾಶ್ಮೀರದಲ್ಲಿರುವ ವಿದ್ಯಾರ್ಥಿಯ ತಂದೆ ಗುಲಾಂ ಅಹ್ಮದ್ ಭಟ್ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಬರೆದು ಪ್ರಧಾನಿ, ಕೇಂದ್ರ ಗೃಹ ಸಚಿವ, ಕಾಶ್ಮೀರ ಮತ್ತು ಕರ್ನಾಟಕ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಖಾತೆಗಳಿಗೆ ಟ್ಯಾಗ್ ಮಾಡಿದ್ದಾರೆ.

'ಕ್ರಿಕೆಟ್ ಆಡುವಾಗ ಗಲಾಟೆಯಾದ ಬಳಿಕ ಹಾಸ್ಟೆಲ್‌ಗೆ ಬಂದ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಹಲ್ಲೆ ಮಾಡಿದರು. ಒತ್ತಾಯಪೂರ್ವಕವಾಗಿ ನನಗೆ ಅಲ್ ಅಮಿನ್ ಸೆಲ್ಯೂಟ್ ಮಾಡಲು, ಹಾಡು ಹೇಳಲು, ನೃತ್ಯ ಮಾಡಲು ಹೇಳಿದರು. ಬೆದರಿಕೆಯೊಡ್ಡಿದರು' ಎಂದು ಹಮೀಮ್ ಭಟ್ ಸುದ್ದಿಗಾರರಿಗೆ ತಿಳಿಸಿದರು.

ರ‍್ಯಾಗಿಂಗ್ ಅಲ್ಲ: 'ಕಾಲೇಜಿನ ಮೈದಾನದಲ್ಲಿ ಹಮೀಮ್ ಭಟ್ ನಾಯಕತ್ವದ ತಂಡ ಮತ್ತು ಸ್ಥಳೀಯ ವಿದ್ಯಾರ್ಥಿಗಳ ತಂಡದ ನಡುವೆ ಕ್ರಿಕೆಟ್ ಪಂದ್ಯ ನಡೆದಿತ್ತು. ಆಗ ಪರಸ್ಪರ ವಾಗ್ವಾದ, ಜಗಳ ನಡೆದಿದೆಯೇ ಹೊರತು ರ‍್ಯಾಗಿಂಗ್ ಅಲ್ಲ. ಅಂಥ ಘಟನೆಗಳು ಈವರೆಗೆ ಕಾಲೇಜಿನಲ್ಲಿ ನಡೆದಿಲ್ಲ' ಎಂದು ಅಲ್ ಅಮಿನ್ ವೈದ್ಯಕೀಯ ಕಾಲೇಜಿನ ವೈದ್ಯಕೀಯ ಸುಪರಿಂಡೆಂಟ್ ಡಾ.ಜಿಲಾನಿ ಅವಟಿ ಪ್ರತಿಕ್ರಿಯಿಸಿದರು.

25ರಂದು ಕೇಂದ್ರ ಜಲಶಕ್ತಿ ಸಚಿವರ ಭೇಟಿ: ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರು ಇದೇ 25ರಂದು ಭೇಟಿಗೆ ಸಮಯ ನೀಡಿದ್ದು, ರಾಜ್ಯದ ನೀರಾವರಿ ಯೋಜನೆಗಳ ಪ್ರಸ್ತಾವ ಸಲ್ಲಿಸುತ್ತೇನೆ. ನಮ್ಮ ಯೋಜನೆಗಳಿಗೆ ಕೇಂದ್ರ ಒಪ್ಪಿಗೆ ನೀಡುವ ವಿಶ್ವಾಸವಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೇಂದ್ರ ಜಲಶಕ್ತಿ ಸಚಿವಾಲಯದ ಆಶ್ರಯದಲ್ಲಿ ಉದಯಪುರದಲ್ಲಿ ನಡೆಯುತ್ತಿರುವ ಜಲಸಂಪನ್ಮೂಲ ಸಚಿವರ ಸಮ್ಮೇಳನದಲ್ಲಿ ಶಿವಕುಮಾರ್ ಸುದ್ದಿಗಾರರೊಂದಿಗೆ ಮಾತನಾಡಿದರು.

'ಕೇಂದ್ರ ಸಚಿವರನ್ನು ಭೇಟಿ ಮಾಡಿ, ಈ ಹಿಂದೆ ಘೋಷಿಸಲಾಗಿರುವ ಅನುದಾನ ಹಾಗೂ ಮಹದಾಯಿ, ಮೇಕೆದಾಟು ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗಳ ಬಗ್ಗೆ ಚರ್ಚಿಸಲಾಗುವುದು' ಎಂದರು.

'ಈ ಸಮ್ಮೇಳನದಲ್ಲಿ ಆಂಧ್ರಪ್ರದೇಶ ಹಾಗೂ ತೆಲಂಗಾಣದ ಸಚಿವರ ಜತೆ ಚರ್ಚಿಸಲಾಗಿದೆ. ತುಂಗಭದ್ರಾ ನದಿಯ 30 ಟಿಎಂಸಿ ಅಡಿ ನೀರನ್ನು ಸದ್ಬಳಕೆ ಮಾಡಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ವಿಜಯವಾಡಕ್ಕೆ ಹೋಗಿ ಮತ್ತೊಮ್ಮೆ ಚರ್ಚೆ ಮಾಡುತ್ತೇನೆ. ಇದಕ್ಕಾಗಿ ಮೂರು ರಾಜ್ಯಗಳು ಸೇರಿ ಕಾರ್ಯತಂತ್ರ ರೂಪಿಸಬೇಕಿದೆ' ಎಂದರು.

ಅಕ್ರಮ: ಉಪನಿರ್ದೇಶಕಿ, ಯೋಜನಾಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಅಂಗನವಾಡಿ ಮಕ್ಕಳಿಗೆ, ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಪೂರೈಸಬೇಕಾದ ಆಹಾರ ಪದಾರ್ಥಗಳನ್ನು ಅಕ್ರಮವಾಗಿ ಗೋದಾಮಿನಲ್ಲಿ ಸಂಗ್ರಹಿಸಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಧಾರವಾಡ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಹುಲಿಗೆವ್ವ ಕುಕನೂರು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮುತ್ತಣ್ಣ ಸಿ.ಎ. ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

'ಇಬ್ಬರೂ ಅಧಿಕಾರಿಗಳ ಕರ್ತವ್ಯ ನಿರ್ವಹಣೆಯಲ್ಲಿ ತೀವ್ರ ಲೋಪವಾಗಿದ್ದು, ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ. ಇಲಾಖೆ ವಿಚಾರಣೆ ಬಾಕಿಯಿರಿಸಿ, ಇಬ್ಬರನ್ನೂ ಅಮಾನತು ಮಾಡಲಾಗಿದೆ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿ ಸಿ. ಬಲರಾಮ ಬುಧವಾರ ಆದೇಶ ಹೊರಡಿಸಿದ್ದಾರೆ.

'ಸರ್ಕಾರ ವಿತರಿಸುವ ಪೌಷ್ಟಿಕ ಆಹಾರ ಪದಾರ್ಥಗಳನ್ನು ಧಾರವಾಡದ ಲಕಮನಹಳ್ಳಿ ಎಂಎಸ್‌ಪಿಸಿ ಗೋದಾಮಿನಿಂದ ಅಂಗನವಾಡಿ ಕೇಂದ್ರಗಳಿಗೆ ವಿತರಿಸದೆ, ಅಕ್ರಮವಾಗಿ ಹಳೇಗಬ್ಬೂರು ಸಮೀಪದ ಗೋದಾಮಿನಲ್ಲಿ ಸಂಗ್ರಹಿಸಿದ್ದಾರೆ. ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮ ಯೋಜನೆಯಡಿ ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ಪೌಷ್ಟಿಕ ಆಹಾರ ಒದಗಿಸಲು ವಿಫಲವಾಗಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಸಿಇಸಿ ನೇಮಕ: ವಿಚಾರಣೆ ಮುಂದಕ್ಕೆ

ನವದೆಹಲಿ (ಪ್ರಜಾವಾಣಿ ವಾರ್ತೆ/ಪಿಟಿಐ): 2023ರಲ್ಲಿ ರೂಪಿಸಿದ ಕಾಯ್ದೆಗೆ ಅನುಗುಣವಾಗಿ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಹಾಗೂ ಚುನಾವಣಾ ಆಯುಕ್ತರನ್ನು (ಇ.ಸಿ) ನೇಮಕ ಮಾಡುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮುಂದೂಡಿದೆ.

ಅರ್ಜಿಗಳನ್ನು ಹೋಳಿ ಹಬ್ಬದ ನಂತರ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುವುದು ಎಂಬ ಸೂಚನೆಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು ನೀಡಿದೆ.

ಅರ್ಜಿಯ ಬಗ್ಗೆ ತುರ್ತಾಗಿ ಗಮನ ಹರಿಸಬೇಕಾಗಿದೆ ಎಂದು ಅರ್ಜಿದಾರ 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' ಪರವಾಗಿ ಹಾಜರಿದ್ದ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಪೀಠಕ್ಕೆ ಮನವಿ ಮಾಡಿದರು.

ಸಿಇಸಿ ಮತ್ತು ಇ.ಸಿ ನೇಮಕವು 2023ರಲ್ಲಿ ಸಂವಿಧಾನ ಪೀಠ ನೀಡಿದ್ದ ತೀರ್ಪಿಗೆ ಅನುಗುಣವಾಗಿ ಪ್ರಧಾನಿ, ವಿರೋಧ ಪಕ್ಷದ ನಾಯಕ ಮತ್ತು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಇರುವ ಸಮಿತಿಯ ಮೂಲಕ ಆಗಬೇಕೇ ಅಥವಾ ಸಿಜೆಐ ಅವರನ್ನು ಹೊರಗಿರಿಸಿರುವ 2023ರ ಕಾಯ್ದೆಯ ಪ್ರಕಾರ ಆಗಬೇಕೇ ಎಂಬ ಪ್ರಶ್ನೆಯು ಅರ್ಜಿಯಲ್ಲಿದೆ ಎಂದು ಭೂಷಣ್ ವಿವರಿಸಿದರು.


ಅರ್ಜಿದಾರರ ಪೈಕಿ ಒಬ್ಬರಾದ ಜಯಾ ಠಾಕೂರ್ ಪರವಾಗಿ ಹಾಜರಿದ್ದ ವಕೀಲ ವರುಣ್ ಠಾಕೂರ್ ಅವರು, ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಎತ್ತಿಕೊಳ್ಳಬೇಕು ಎಂದು ಮನವಿ ಮಾಡಿದರು. ಆದರೆ, ಎಲ್ಲ ವಿಷಯಗಳೂ ನ್ಯಾಯಾಲಯಕ್ಕೆ ಮುಖ್ಯವೇ ಆಗಿರುತ್ತದೆ, ಯಾವುದೇ ಒಂದು ಪ್ರಕರಣವು ಇತರೆಲ್ಲ ಪ್ರಕರಣಗಳಿಗಿಂತ ಹೆಚ್ಚಿನದಾಗಿರುವುದಿಲ್ಲ ಎಂದು ಪೀಠವು ಹೇಳಿತು.

2023ರ ಕಾಯ್ದೆಯ ಅಡಿಯಲ್ಲಿ ಸಿಇಸಿ, ಇ.ಸಿ ನೇಮಕ ಮಾಡುವುದನ್ನು ಪ್ರಶ್ನಿಸಿರುವ ಅರ್ಜಿಗಳನ್ನು 'ಆದ್ಯತೆಯ ಮೇರೆಗೆ' ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ಪೀಠವು ಫೆಬ್ರುವರಿ 18ರಂದು ಹೇಳಿತ್ತು. ಅರ್ಜಿಗಳನ್ನು ಫೆಬ್ರುವರಿ 19ರಂದು ವಿಚಾರಣೆಗೆ ಎತ್ತಿಕೊಳ್ಳುವುದಾಗಿ ಪೀಠವು ಫೆಬ್ರುವರಿ 12ರಂದು ಹೇಳಿತ್ತು. ಈ ನಡುವಿನ ಅವಧಿಯಲ್ಲಿ ಏನಾದರೂ ಆದಲ್ಲಿ, ಅದಕ್ಕೆ ಪರಿಣಾಮಗಳು ಇರುತ್ತವೆ ಎಂದು ಕೂಡ ಹೇಳಿತ್ತು.

ಮಾರ್ಚ್ 19ಕ್ಕೆ ವಿಚಾರಣೆ?

ಅರ್ಜಿಗಳನ್ನು ತಾನು ಮಾರ್ಚ್ 19ರಂದು ವಿಚಾರಣೆಗೆ ಕೈಗೆತ್ತಿಕೊಳ್ಳಬಹುದು ಎಂದು ಪೀಠವು ಹೇಳಿದೆ.

ಅರ್ಜಿಗಳನ್ನು ಬೇಗ ವಿಚಾರಣೆಗೆ ಎತ್ತಿಕೊಳ್ಳಬೇಕು ಎಂದು ವಕೀಲ ಪ್ರಶಾಂತ್ ಭೂಷಣ್ ಅವರು ಮನವಿ ಮಾಡಿದಾಗ, ನ್ಯಾಯಪೀಠವು ಈ ದಿನಾಂಕದಂದು ತಾನು ವಿಚಾರಣೆ ನಡೆಸಬಹುದು ಎಂದು ಹೇಳಿತು.



‘ಭೂಕಂಪ’ ಏನು..ಎತ್ತ?

ಚನ್ನಬಸಪ್ಪ ರೊಟ್ಟಿ

ಈಚೆಗೆ ಟಿಬೆಟ್, ನೇಪಾಳ, ಚೀನಾ, ದೆಹಲಿ ಹಾಗೂ ಬಿಹಾರದ ಕೆಲ ಜಿಲ್ಲೆಗಳಲ್ಲಿ ಭೂಕಂಪ ಸಂಭವಿಸಿದ್ದು, ಭಾರತದ ಉತ್ತರ ಭಾಗ ಅದರಲ್ಲೂ ವಿಶೇಷವಾಗಿ ಹಿಮಾಲಯ ಪರ್ವತ ಶ್ರೇಣಿ ವ್ಯಾಪ್ತಿ ಮತ್ತು ಅದರ ಆಸುಪಾಸಿನ ಪ್ರದೇಶಗಳು ‘ಭೂಕಂಪ ವಲಯ’ ಪ್ರದೇಶಗಳೆಂದು ಮತ್ತೊಮ್ಮೆ ಸಾಬೀತಾಗಿದೆ. ಭವಿಷ್ಯದಲ್ಲಿ ಹಿಂದೂ ಕುಶ್‌ನಿಂದ ಅರುಣಾಚಲ ಪ್ರದೇಶದವರೆಗೆ ವ್ಯಾಪಿಸಿರುವ ಈ ಪ್ರದೇಶದಲ್ಲಿ 8 ಅಥವಾ ಅದಕ್ಕಿಂತ ಹೆಚ್ಚಿನ ರಿಕ್ಟರ್ ಪ್ರಮಾಣದ ಭೂಕಂಪಗಳು ಉಂಟಾಗಲಿವೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ಹಿಮಾಲಯ ಪ್ರದೇಶದಲ್ಲಿ ಭೂಕಂಪ

ಹಿಮಾಲಯ ಪ್ರದೇಶ ಇಂಡೋ ಮತ್ತು ಯುರೇಷಿಯನ್ ‘ಟೆಕ್ಟೋನಿಕ್ ಪ್ಲೇಟ್’ಗಳ ಘರ್ಷಣೆಯಿಂದುಂಟಾಗುವ ಭೂಕಂಪನ ಚಟುವಟಿಕೆಗಳಿಗೆ ಹೆಸರುವಾಸಿಯಾಗಿದೆ. ಅದರಲ್ಲೂ ಭಾರತೀಯ ಭೂತಟ್ಟೆ (ಇಂಡೋ ಟೆಕ್ಟೋನಿಕ್ ಪ್ಲೇಟ್) ಉತ್ತರ ದಿಕ್ಕಿನತ್ತ ಪ್ರತಿವರ್ಷ ಸರಿಸುಮಾರು 60 ಮಿ.ಮೀ. ತಳ್ಳುವಿಕೆಯನ್ನು ಮುಂದುವರಿಸಿದ್ದು, ಉತ್ತರ ಭಾರತದಲ್ಲಿ ಆಗಾಗ ಭೂಕಂಪಗಳು ಸಂಭವಿಸುತ್ತವೆ. ಪಶ್ಚಿಮ ಹಿಮಾಲಯದಲ್ಲಿರುವ ಚೀನಾದ ಭೂಭಾಗ ‘ಲಾಸಾ ಟೆರೇನ್’ ಹಿಮಾಲಯನ್ ಭೂಕಂಪನಗಳ ಕೇಂದ್ರಸ್ಥಳವಾಗಿದೆ. ಈ ಪ್ರದೇಶದಲ್ಲಿ 1950 ರಿಂದ ಇಲ್ಲಿಯವರೆಗೆ, 6 ಅಥವಾ ಅದಕ್ಕಿಂತ ಹೆಚ್ಚು ರಿಕ್ಟರ್ ಪ್ರಮಾಣದ 21 ಭೂಕಂಪಗಳನ್ನು ದಾಖಲಿಸಲಾಗಿದೆ.

‘ಟೆಕ್ಟೋನಿಕ್ ಪ್ಲೇಟ್’ ಚಲನೆಗಳ ಬಗ್ಗೆ

‘ಭೂ ತಟ್ಟೆಗಳು’ ಅಥವಾ ‘ಟೆಕ್ಟೋನಿಕ್ ಪ್ಲೇಟ್‌ಗಳು’ ಭೂಮಿಯ ಹೊರಪದರದಲ್ಲಿ (ಭೂ ಮೇಲ್ಮೈಯಿಂದ 12 ಕಿ.ಮೀ. ದೂರದವರೆಗೆ ವ್ಯಾಪಿಸಿದೆ) ಇರುವ ಭೂತಳ ಅಥವಾ ಫಲಕಗಳಾಗಿವೆ. ಇವುಗಳ ಮೇಲೆಯೇ ಭೂಭಾಗಗಳು, ಸಾಗರಗಳು ನೆಲೆಗೊಂಡಿವೆ. ಭೂಮಿಯ ಹೊರಪದರ 15 ಪ್ರಮುಖವಾದ ಮತ್ತು ಸಾವಿರಾರು ಸಣ್ಣ ‘ಟೆಕ್ಟೋನಿಕ್ ಪ್ಲೇಟ್’ಗಳನ್ನು ಒಳಗೊಂಡಿದೆ. ಇವು ಚಲಿಸುತ್ತಿರುತ್ತವೆ.

ಇವುಗಳ ನಡುವೆ ಘರ್ಷಣೆ ಉಂಟಾದಾಗ ಬಿಡುಗಡೆಯಾಗುವ ಅಪಾರ ಶಕ್ತಿಯೇ ಭೂಕಂಪನ ಉಂಟುಮಾಡುತ್ತದೆ. ಭೂಫಲಕಗಳ ನಿರಂತರ ಚಲನೆಗೆ ಅಂತರ್ಜಲದ ಸಂವಹನ ಪ್ರವಾಹಗಳು ಕಾರಣವಾಗಿರುತ್ತವೆ.

ಭಾರತದಲ್ಲಿನ ಭೂಕಂಪ ವಲಯಗಳು

ಜಮ್ಮು-ಕಾಶ್ಮೀರ, ಉತ್ತರಾಖಂಡ, ಹಿಮಾಚಲ ಪ್ರದೇಶ, ಅಸ್ಸಾಂ, ಗುಜರಾತ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶ ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ಭೂಕಂಪದ ಸಾಧ್ಯತೆಗಳು ಹೆಚ್ಚಾಗಿವೆ. ದೆಹಲಿ, ಪಾಟ್ನಾ, ಶ್ರೀನಗರ, ಕೊಹಿಮಾ, ಪುದುಚೇರಿ, ಗುವಾಹತಿ, ಗ್ಯಾಂಗ್ಟಕ್, ಶಿಮ್ಲಾ, ಡೆಹ್ರಾಡೂನ್, ಇಂಫಾಲ, ಚಂಡೀಘಡ, ಭುಜ್, ಅಂಬಾಲಾ, ಅಮೃತಸರ್, ಲೂಧಿಯಾನಾ, ರೂರ್ಕಿ ಸೇರಿದಂತೆ ಭಾರತದ 29 ಪ್ರಮುಖ ನಗರಗಳಿಗೆ ಭೂಕಂಪನವನ್ನು ತಡೆದುಕೊಳ್ಳುವ ಸಾಮರ್ಥ್ಯವಿಲ್ಲ. ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳನ್ನು ‘ಭೂಕಂಪನ ಸುರಕ್ಷಿತ ಪ್ರದೇಶ’ ಎಂದು ‘ರಾಷ್ಟ್ರೀಯ ಭೂಕಂಪನ ಮಾಪನ ಕೇಂದ್ರ’ ಹೇಳಿದೆ.

ಗೌರಿಬಿದನೂರು (ಕರ್ನಾಟಕ), ಕೊಡೈಕೆನಾಲ್ (ತಮಿಳುನಾಡು), ಕೊಲಾಬಾ (ಮಹಾರಾಷ್ಟ್ರ), ಹೈದರಾಬಾದ್ (ತೆಲಂಗಾಣ), ಡೆಹ್ರಾಡೂನ್ (ಉತ್ತರಾಖಂಡ) ಭಾರತದ ಪ್ರಮುಖ ಭೂಕಂಪ ಮಾಪನ ಕೇಂದ್ರಗಳಾಗಿವೆ.

‘ಭೂಕಂಪ’ ಎಂದರೇನು?

ಭೂಕಂಪವೆಂದರೆ, ಭೂಮಿಯ ಹೊರಪದರದಲ್ಲಿ ಉಂಟಾಗುವ ತೀವ್ರತರ ನಡುಕವಾಗಿದೆ. ಇದು ಭೂಮಿಯ ಶಕ್ತಿ ತರಂಗ ಚಲನೆಯ ರೂಪವಾಗಿದೆ. ಭೂಕಂಪದ ಮೂಲ ಸ್ಥಳವನ್ನು ‘ಹೈಪೋಸೆಂಟರ್’ (ಭೂಕಂಪ ನಾಭಿ / ಕೇಂದ್ರ ಪ್ರದೇಶ) ಎನ್ನಲಾಗುತ್ತದೆ. ಭೂಕಂಪನ ಅಲೆಗಳನ್ನು ಸ್ವೀಕರಿಸುವ ಭೂಮಿಯ ಮೇಲ್ಮೈಯ ಬಿಂದುವನ್ನು ‘ಎಪಿಸೆಂಟರ್’ ಎನ್ನಲಾಗುತ್ತದೆ. ಭೂಕಂಪಗಳ ವೈಜ್ಞಾನಿಕ ಅಧ್ಯಯನವನ್ನು ‘ಭೂಕಂಪಶಾಸ್ತ್ರ’ ಎಂದು ಕರೆಯಲಾಗುತ್ತದೆ. ಭೂಕಂಪದ ಸ್ಥಳ, ಸಮಯ, ವೇಗ ಮತ್ತು ದಿಕ್ಕನ್ನು ‘ಸಿಸ್ಮೋಗ್ರಾಫ್’ ಎಂದು ಕರೆಯುವ ಉಪಕರಣದಿಂದ ‘ರಿಕ್ಟರ್’ ಎಂಬ ಮಾಪನದ ಮೂಲಕ ದಾಖಲಿಸಲಾಗುತ್ತದೆ. ಭೂಕಂಪವನ್ನು ‘ಮರ್ಸೆಲ್ಲಿ ಮಾಪಕ’ದಿಂದ ಅಳೆಯಬಹುದಾದರೂ ನಿಖರತೆಯ ಕಾರಣದಿಂದ ಅದರ ಬಳಕೆ ಈಚೆಗೆ ಕಡಿಮೆಯಾಗಿದೆ.



ಭೂಕಂಪದ ಪ್ರಕಾರಗಳು

ಭೂರಚನಾ ಭೂಕಂಪಗಳು: ಭೂಮಿಯ ಹೊರಪದರದಲ್ಲಿನ ಶಿಲೆಗಳ ಮಡಿಸುವಿಕೆ, ಮತ್ತು ಶಿಲಾಸ್ತರಗಳ ಸ್ಥಳಾಂತರದ ಕಾರಣದಿಂದ ಇವು ಉಂಟಾಗುತ್ತವೆ. ಇವು ಹೆಚ್ಚು ತೀವ್ರ ಮತ್ತು ವಿನಾಶಕಾರಿ ಭೂಕಂಪಗಳಾಗಿವೆ.

ಜ್ವಾಲಾಮುಖಿ ಭೂಕಂಪ: ಇವುಗಳು ಜ್ವಾಲಾಮುಖಿ ಚಟುವಟಿಕೆಗಳಿಗೆ ಸಂಬಂಧಿಸಿದ್ದು, ಸಾಮಾನ್ಯವಾಗಿ ಹೆಚ್ಚಿನ ಆಳದಲ್ಲಿ ಉಂಟಾಗುತ್ತವೆ. ಇವು ಕಡಿಮೆ ತೀವ್ರತೆ ಹೊಂದಿರುತ್ತವೆ.

ಮಾನವ ನಿರ್ಮಿತ ಭೂಕಂಪ: ಬೃಹತ್ ಅಣೆಕಟ್ಟುಗಳು, ಆಳವಾದ ಗಣಿಗಾರಿಕೆ, ಭೂಗತ ಪರಮಾಣು ಸ್ಫೋಟ ಹಾಗೂ ಪ್ರಾಕೃತಿಕ ಚಟುವಟಿಕೆಗಳಲ್ಲಿ ಅತಿಯಾದ ಹಸ್ತಕ್ಷೇಪದಿಂದ ಸಂಭವಿಸುವ ಭೂಕಂಪಗಳು ಇವಾಗಿವೆ.

ಸುನಾಮಿ: ಸಾಗರದ ತಳಭಾಗದಲ್ಲಿ ಸಂಭವಿಸುವ ಭೂಕಂಪದಿಂದ ಉಂಟಾಗುವ ಸಮುದ್ರದ ಬೃಹತ್ ಅಲೆಗಳನ್ನು ‘ಸುನಾಮಿ’ ಎನ್ನಲಾಗುತ್ತದೆ. ಈ ಅಲೆಗಳು ಪೆಸಿಫಿಕ್, ಹಿಂದೂ ಮಹಾಸಾಗರಗಳಲ್ಲಿ ಸಾಮಾನ್ಯವಾಗಿದ್ದು, ದೊಡ್ಡ ಪ್ರಮಾಣದ ಹಾನಿ ಉಂಟುಮಾಡುತ್ತವೆ.

ಭೂಕಂಪದ ಅಲೆಗಳು

ಪ್ರಾಥಮಿಕ ಅಲೆಗಳು: ಭೂಕಂಪನಾಭಿಯಿಂದ ಹೊರಟ ವೇಗದ ಅಲೆಗಳಾಗಿದ್ದು, ಭೂಮಿ, ಅನಿಲ ಮತ್ತು ಜಲಮೂಲಗಳಲ್ಲಿ ಅಡ್ಡಲಾಗಿ ಚಲಿಸುತ್ತವೆ ಮತ್ತು ವಸ್ತುಗಳನ್ನು ಮುಂದಕ್ಕೆ ಮತ್ತು ಹಿಂದಕ್ಕೆ ಚಲಿಸುವಂತೆ ಮಾಡುತ್ತವೆ. ಇವುಗಳನ್ನು ‘ಸಂಕೋಚನ’ ಅಲೆಗಳು ಎಂದೂ ಕರೆಯುತ್ತಾರೆ. ಈ ಅಲೆಗಳ ವೇಗ ಸೆಕೆಂಡಿಗೆ ಸುಮಾರು 4 ರಿಂದ 13 ಕಿ.ಮೀ. ಆಗಿರುತ್ತದೆ.

ದ್ವಿತೀಯ ಅಲೆಗಳು: ಈ ಅಲೆಗಳನ್ನು ಅಡ್ಡಲೆಗಳು ಅಥವಾ ಕುಲುಕು ಅಲೆಗಳು ಎಂದೂ ಕರೆಯುತ್ತಾರೆ. ಈ ಅಲೆಗಳು ಕಣಗಳನ್ನು ಲಂಬಕೋನದಲ್ಲಿ ಚಲಿಸುವಂತೆ ಮಾಡುತ್ತವೆ. ಆದರೆ, ಇವು ದ್ರವ ಪದಾರ್ಥಗಳ ಮೂಲಕ ಹಾದುಹೋಗಲಾರವು. ಈ ಅಲೆಗಳ ವೇಗ ಸೆಕೆಂಡಿಗೆ ಸುಮಾರು 4 ರಿಂದ 6 ಕಿ.ಮೀ. ಇರುತ್ತದೆ.

ಮೇಲ್ಮೈ ಅಲೆಗಳು: ಇವು ನಿಧಾನವಾದ ಅಲೆಗಳಾಗಿದ್ದು, ಇವುಗಳನ್ನು ‘ದೀರ್ಘಾವಧಿ ಅಲೆಗಳು’ ಎಂದೂ ಕರೆಯುತ್ತಾರೆ. ಈ ಅಲೆಗಳ ವೇಗ ಸೆಕೆಂಡಿಗೆ ಸುಮಾರು 3 ರಿಂದ 4 ಕಿ.ಮೀ. ಇರುತ್ತದೆ. ಇವು ಭೂಮೇಲ್ಮೈಗೆ ಸೀಮಿತವಾಗಿರುತ್ತದೆ. ಈ ಅಲೆಗಳು ಭೂಮಿಯ ಹೊರಪದರಲ್ಲಿ ಭಾರೀ ವಿನಾಶಕ್ಕೆ ಕಾರಣವಾಗುತ್ತವೆ.

ಪ್ರಮುಖ ಭೂಕಂಪನ ವಲಯಗಳು

ಪೆಸಿಫಿಕ್ ಸಾಗರ ವಲಯ: ಈ ವಲಯ ಪೆಸಿಫಿಕ್ ಸಾಗರದ ಕರಾವಳಿ ಪ್ರದೇಶಗಳಾದ, ರಾಕೀಸ್, ಆಂಡಿಸ್, ಫಿಲಿಪ್ಪೀನ್ಸ್, ಜಪಾನ್, ಅಲಾಸ್ಕಾ, ಮೆಕ್ಸಿಕೋ ಮತ್ತು ಇಂಡೋನೇಷ್ಯಾಗಳನ್ನು ಒಳಗೊಂಡಿದೆ. ಈ ಪ್ರದೇಶವನ್ನು ‘ರಿಂಗ್ ಆಫ್ ಫೈರ್’ ಎಂದು ಕರೆಯಲಾಗುತ್ತದೆ.

ಪೆಸಿಫಿಕ್ ಸಾಗರದ ಜಲಾನಯನ ಪ್ರದೇಶ: ನ್ಯೂಜಿಲೆಂಡ್ ಹಾಗೂ ಪೂರ್ವ ಆಸ್ಟ್ರೇಲಿಯಾ ನಡುವೆ ಇರುವ ಈ ಪ್ರದೇಶ ಕೂಡ ಭೂಕಂಪನಾತ್ಮಕವಾಗಿ ಹೆಚ್ಚು ಸಕ್ರಿಯವಾಗಿದೆ.

ಆಲ್ಪ್ಸ್ ಹಾಗೂ ಹಿಮಾಲಯ ಪರ್ವತ ಪ್ರದೇಶಗಳು: ಈ ವಲಯ ದಕ್ಷಿಣ ಯುರೋಪ್, ಉತ್ತರ ಆಫ್ರಿಕಾ, ಮಧ್ಯ ಏಷ್ಯಾ ಹಾಗೂ ಉತ್ತರ ಭಾರತವನ್ನು ಒಳಗೊಂಡಿದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಇತ್ತೀಚೆಗೆ ಭಾರತದ ಪ್ರಧಾನಿ ಕೆಳಗಿನ ಯಾವ ವೇದಿಕೆಯಲ್ಲಿ 12 ಅಂಶಗಳ ಪ್ರಸ್ತಾಪವನ್ನು ಸಲ್ಲಿಸಿದ್ದಾರೆ?

ಎ. ಭಾರತ-ಅಸಿಯಾನ್ ಸಮಾವೇಶ.
ಬಿ. ಬ್ರಿಕ್ಸ್ ಸಮಾವೇಶ.
ಸಿ. ವಿಶ್ವಸಂಸ್ಥೆಯ ಸಮಾವೇಶ.
ಡಿ. ಜಿ–20 ಸಮಾವೇಶ.

ಉತ್ತರ : ಎ

2. ಇತ್ತೀಚೆಗೆ ಕೇಂದ್ರ ಗೃಹ ಸಚಿವಾಲಯ ಕೆಳಗಿನ ಯಾವ ಕೇಂದ್ರಾಡಳಿತ ಪ್ರದೇಶದ ಸರ್ಕಾರಿ ಶಾಲೆಯ ಮಕ್ಕಳಿಗೆ ವೈದ್ಯಕೀಯ ಶಿಕ್ಷಣದಲ್ಲಿ ಮೀಸಲಾತಿಯನ್ನು ಕಲ್ಪಿಸಿದೆ?

ಎ. ದೆಹಲಿ
ಬಿ. ಲಕ್ಷದ್ವೀಪ
ಸಿ. ಅಂಡಮಾನ್ ಮತ್ತು ನಿಕೋಬಾರ್
ಡಿ. ಪುದುಚೇರಿ

ಉತ್ತರ : ಡಿ

3. ಇತ್ತೀಚೆಗೆ ಕೆಳಗಿನ ಯಾವ ಐತಿಹಾಸಿಕ ಸ್ಥಳವನ್ನು ಪ್ಲಾಸ್ಟಿಕ್ ಮುಕ್ತ ಪ್ರದೇಶವನ್ನಾಗಿಸಲು ಮೈಸೂರು ಮಹಾನಗರ ಪಾಲಿಕೆ ನಿರ್ಧರಿಸಿದೆ?

ಎ. ಚಾಮುಂಡೇಶ್ವರಿ ದೇವಸ್ಥಾನ
ಬಿ. ಸೆಂಟ್ ಫಿಲೋಮಿನಾ ಚರ್ಚ್
ಸಿ. ಮೈಸೂರು ಅರಮನೆ
ಡಿ. ಮೈಸೂರು ರೈಲ್ವೆ ನಿಲ್ದಾಣ

ಉತ್ತರ : ಸಿ

4. ಇತ್ತೀಚೆಗೆ ಕೆಳಗಿನ ಯಾವ ಸರ್ಕಾರ ತೃತೀಯ ಲಿಂಗಗಳನ್ನು ಸಾರ್ವತ್ರಿಕ ಪಿಂಚಣಿ ಯೋಜನೆ ಅಡಿಯಲ್ಲಿ ತಂದಿದೆ?

ಎ. ಜಾರ್ಖಂಡ್ ಸರ್ಕಾರ
ಬಿ. ತಮಿಳುನಾಡು ಸರ್ಕಾರ
ಸಿ. ಉತ್ತರ ಪ್ರದೇಶ ಸರ್ಕಾರ
ಡಿ. ಮಧ್ಯಪ್ರದೇಶ ಸರ್ಕಾರ

ಉತ್ತರ : ಎ

5. ಅಡೋಬ್ ಇಂಕ್ ಸಂಸ್ಥೆಯು ಕೆಳಗಿನ ಯಾವ ಆವಿಷ್ಕಾರದ ಮೂಲಕ ಪ್ರಖ್ಯಾತಿಯನ್ನು ಹೊಂದಿತ್ತು?

1. ಆನ್‌ಲೈನ್ ದಾಖಲೆಗಳನ್ನು ಪಿಡಿಎಫ್ ಸ್ವರೂಪಕ್ಕೆ ಬದಲಾಯಿಸುವ ವಿಚಾರದಲ್ಲಿ ಖ್ಯಾತಿಯನ್ನು ಹೊಂದಿತ್ತು.
2. ಮೊಟ್ಟಮೊದಲ ವಿಡಿಯೊ ಕಾಲ್ ಆವಿಷ್ಕರಿಸಿದ ವಿಚಾರದಲ್ಲಿ ಪ್ರಖ್ಯಾತಿಯನ್ನು ಹೊಂದಿತ್ತು.
3. ಮೊಟ್ಟಮೊದಲ ಆನ್‌ಲೈನ್ ಸಂದೇಶ ಆವಿಷ್ಕರಿಸಿದ ವಿಚಾರದಲ್ಲಿ ಪ್ರಖ್ಯಾತಿಯನ್ನು ಹೊಂದಿತ್ತು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 3 ಮಾತ್ರ ಡಿ. 1 ಮತ್ತು 3

ಉತ್ತರ : ಎ

6. ಇತ್ತೀಚೆಗೆ ಕೆಳಗಿನ ಯಾವ ವ್ಯಕ್ತಿಯನ್ನು ಮತದಾರರ ಜಾಗೃತಿ ಮೂಡಿಸುವ ರಾಯಭಾರಿಯಾಗಿ ಕೇಂದ್ರ ಚುನಾವಣಾ ಆಯೋಗ ನೇಮಿಸಿದೆ?

ಎ. ಖುಷ್ಬೂ ಸುಂದರ್.
ಬಿ. ರಮ್ಯಕೃಷ್ಣ.
ಸಿ. ರಜನಿಕಾಂತ್.
ಡಿ. ಸಚಿನ್ ತೆಂಡೂಲ್ಕರ್.

ಉತ್ತರ : ಡಿ

7. ಭಾರತ-ಬಾಂಗ್ಲಾದೇಶ ದ್ವಿಪಕ್ಷೀಯ ಸಂಬಂಧಗಳಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಭಾರತ ಮತ್ತು ಬಾಂಗ್ಲಾದೇಶದ ನಡುವೆ ಕಾರ್ಯದರ್ಶಿ ಮಟ್ಟದ ಶಾಶ್ವತ ವೇದಿಕೆಯನ್ನು ಕಲ್ಪಿಸಲಾಗಿದೆ.
2. ಪ್ರಸ್ತುತ ವರ್ಷ ಐದನೇ ವಾರ್ಷಿಕ ಮಾತುಕತೆಯನ್ನು ಆಯೋಜಿಸಲಾಗಿತ್ತು.
3. ಪ್ರಸ್ತುತ ವರ್ಷದ ಮಾತುಕತೆಯನ್ನು ದೆಹಲಿಯಲ್ಲಿ ಆಯೋಜಿಸಲಾಗಿತ್ತು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮತ್ತು 2 ಬಿ. 1 ಮತ್ತು 3
ಸಿ. 1, 2 ಮತ್ತು 3 ಡಿ. 2 ಮತ್ತು 3

ಉತ್ತರ : ಎ

8. ಭಾರತ ಸರ್ಕಾರ ಜಾರಿಗೆ ತಂದಿರುವ ಆಮದು ನಿರ್ವಹಣಾ ವ್ಯವಸ್ಥೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಮಾಹಿತಿ ತಂತ್ರಜ್ಞಾನದ ಹಾರ್ಡ್‌ವೇರ್ ಆಮದಿನ ವಿಚಾರದಲ್ಲಿ ನಿರ್ಬಂಧಗಳನ್ನು ಹೇರಲಾಗಿದೆ.
2. ಆಮದುದಾರರು ಸಂಪೂರ್ಣ ಮಾಹಿತಿಯನ್ನು ಸರ್ಕಾರಿ ಸಂಸ್ಥೆಗಳಿಗೆ ಕಲ್ಪಿಸುವುದು ಕಡ್ಡಾಯವಾಗಿರುತ್ತದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

9. ಇತ್ತೀಚೆಗೆ ಬಿಡುಗಡೆಯಾದ ಚಿಕಾಗೋ ವಿಶ್ವವಿದ್ಯಾಲಯದ ವರದಿಯ ಅನ್ವಯ ವಾಯುಮಾಲಿನ್ಯದಿಂದ ಯಾವ ರಾಷ್ಟ್ರಗಳ ಮೇಲೆ ದುಷ್ಪರಿಣಾಮ ಹೆಚ್ಚಾಗಲಿದೆ?

1. ಭಾರತ
2. ಪಾಕಿಸ್ತಾನ
3. ಇಂಡೋನೇಷ್ಯಾ
4. ಅಫ್ಘಾನಿಸ್ತಾನ್.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2 ಮತ್ತು 3 ಬಿ. 1, 2, 3 ಮತ್ತು 4
ಸಿ. 2, 3 ಮತ್ತು 4 ಡಿ. 2 ಮತ್ತು 4

ಉತ್ತರ : ಎ

10. ಭಾರತೀಯ ಕಾರಾಗೃಹಗಳಲ್ಲಿನ ಮಹಿಳಾ ಕೈದಿಗಳ ಸ್ಥಿತಿಗತಿಗಳಿಗೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಸುಪ್ರೀಂ ಕೋರ್ಟ್ ಭಾರತೀಯ ಕಾರಾಗೃಹಗಳಲ್ಲಿ ಮಹಿಳಾ ಕೈದಿಗಳ ಸ್ಥಿತಿಯನ್ನು ಅವಲೋಕಿಸಲು ಸಮಿತಿಯನ್ನು ರಚಿಸಿತ್ತು.
2. ಗೋವಾ, ದೆಹಲಿ ಮತ್ತು ಪುದುಚೇರಿಯಲ್ಲಿ ಮಾತ್ರ ಮಹಿಳಾ ಕೈದಿಗಳಿಗೆ ಉತ್ತಮ ಸವಲತ್ತುಗಳು ಇರುವುದು ಕಂಡುಬಂದಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

11. ಭಾರತದ ಆಹಾರ ಸಂಸ್ಕರಣ ವಲಯ ಕೆಳಗಿನ ಯಾವ ಸವಾಲುಗಳನ್ನು ಎದುರಿಸುತ್ತಿದೆ?

1. ಸೂಕ್ತ ದಾಸ್ತಾನು ವ್ಯವಸ್ಥೆ ಇಲ್ಲದೆ ಇರುವುದು.
2. ರೈಲು ಮತ್ತು ರಸ್ತೆ ಸಾರಿಗೆಯ ಅಲಭ್ಯತೆ.
3. ಸಂಶೋಧನಾ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಸಮರ್ಪಕ ಬೆಂಬಲ ಇಲ್ಲದಿರುವುದು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 2 ಮತ್ತು 3 ಡಿ. 1, 2 ಮತ್ತು 3

ಉತ್ತರ : ಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

X. Quote from memory :

61. The throned monarch ....
....
....
.... fear of kings.

OR

My day or night ....
....
....
.... always day.

Ans. :

Rem. The throned monarch better than his crown,
His sceptre shows the force of temporal power,
The attribute to awe and majesty,
Wherein doth sit the dread and fear of kings.

OR

My day or night myself I make,
When'ver I sleep or play ;
And could I ever keep awake
With me ‘twere always day.

Read the passage and answer the Question (62-65)

(A)

Charlie Chaplin (Charles spencer chaplin) was born on 16th April at Kennington in London. At an early age, Charlie performed on stage with his father and brother, Sydney . By the age of eighth, charlie chaplin was already a seasoned stage performer. His skill as a comedian developed under the guidance of Fred Karno.

62. Who is the paragraph about ?
63. Which sentence in the paragraph suggests that he was born in a family of actors. Write that sentence
64. Charlie Chaplin was a great comedian (true/false) tick the right one
65. Who was his tutor in the art of acting ?

Answer

62. Who is the paragraph about?
Ans: The paragraph describes about charley Chaplin (Charles spencerchaplin)

63. Which sentence in the paragraph suggests that he was born in a family of actors. Write that sentence.
Ans : At an early age, Charlie performed stage with his father and brother.'

64. Charlie Chaplin was a great comedian (true/false) tick the right one.
Ans : true.

65. Who was his tutor in the art of acting ?
Ans : Fred karno was the tutor of Charlie Chaplin in the art if acting.

(B) Read the following passage and answer the questions that follow :

Padmavathibai Burli wife of the renowned freedom fighter Bindacharya Burli, was a silent and pious woman, circumstances so conspired against the family that they had to struggle for two square meals a day. Bindacharya breathed patriotism and lived patriotism. The cause and call of Mother India was always above his domestic obligations. Padmavathibai not only stood by her husband but led a silent agitation herself by feeding the tired and hungry freedom fighters. She used to tell her own children to eat a little less so that the sons of the nation, committed to free mother India, could be fed. She used to take food to the freedom fighters who were in hiding. Once she was found serving food to freedom fighters who were on Satyagraha. She was arrested and sentenced to three month imprisonment.

66 (a) How did Bindacharya Burli serve the cause of freedom ?
(b) Why was Padmavathibhai arrested and sentenced to three month imprisonment ?

Ans : (a) Bindacharya breathed patriotism and lived patriotism. The cause and call of Mother India was always above his domestic obligations.
(b) Padmavathibai led a silent agitation herself by feeding the tired and hungry freedom fighters who were in hiding. Once she was found serving food to freedom fighters who were on Satyagraha and was arrested and sentenced to three months imprisonment

A dialogue is given below. Read it and answer the questions that follow (Questions 67 & 68)

Father : Father, I suggest we sell the Land
Grand Father : (keeps silent for a moment) No, we should not
Father : But, why ?
Grand Father : It is inherited it's my prized possession

67. The silence of the grand father Suggests his ________ (willingness/unwillingness) to sell the land (tick the right underlined word)
68. Which word in the conversation above means ‘property’?

Ans (67) unwillingness.
(68) prized possession

69. Given below is a profile, write a paragraph using the clues given below:

Name: Sudhakar
Age: 40 years
Date of Birth: 25th October
Qualification: MBA
Place of Birth: Bellary
Name of the spouse: Smt. Radhika-homemaker
Daughter: Latha - studying in 7th Standard
Work experience: Working as Manager at Ranbaxy India Ltd, Chennai.

Ans: Mr. Sudhakar is a middle aged man about fourty years old living in Chennai. He was born on 25th of October in Bellary District. He has completed his Masters in Business Administation i.e., MBA . His spouse is Radhika, who is a home-maker. He has a daughter Latha who is studying in 7th grade. He is working as Manager at Ranbaxy India Ltd, Chennai. *(Contd)*

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC -CHEMISTRY

REVISION : MODEL QUESTIONS

40. Explain the magnetic properties or paramagnetic property of transition elements.

Ans: Most of the transition metals and their compounds are paramagnetic (slightly attracted by the magnet).

The paramagnetism is due to the number of unpaired electrons in the d-orbitals.

The main causes of paramagnetism are orbital angular momentum and spin momentum of electron. The magnetic moment is calculated by using **spin – only formula** i.e., $\mu=\sqrt{n(n+2)}$ BM'

where μ - Magnetic moment,


B.M. – Boohr magneton, the unit of magnetic moment,

n = number of unpaired electrons.

The magnetic moment increases as the number of unpaired electrons increases.

41. a) i) Name the water insoluble component of starch.
ii) Mention one water soluble vitamin.
iii) Is Lysine an essential or non-essential amino acid?
b) Write the structure of Maltose

Ans:- a) i) The water insoluble component of starch is amylopectin.
ii) Vitamin C (or) Vitamin K.
iii) Essential amino acid.
b) Structure of Maltose



42. A carboxylic acid is treated with alcohol in presence of conc. H_2SO_4. Name the reaction. Give its general equation.

Ans:- A carboxylic acid is treated with alcohol in presence of conc. H_2SO_4.

The reaction is Esterification .

Give its general equation is –

$$R\text{-}COOH + R^1OH \rightarrow RCOOR^1 + H_2O$$

43. a) The rate of a reaction increases by 4 times when the temperature of the reaction is raised from 340 K to 360K. Calculate the energy of activation of the reaction. Given R = 8.314 J/K/mol.

b) Draw a graph of potential energy versus reaction coordinate to show the effect of catalyst on activation energy.

Ans:- a) Given that – (1) the rate of a reaction increases by 4 times when the temperature of the reaction is raised from 340 K to 360 K.

(2) R = 8.314 J/K/mol.

To Calculate - the energy of activation of the reaction


$$\log\frac{k_2}{k_1}=\frac{Ea}{2.303\,R}\left[\frac{T_2-T_1}{T_1T_2}\right]$$

$$\Rightarrow \log 4=\frac{Ea}{2.303\times 8.314}\left[\frac{360-340}{360\times 340}\right]$$

$$\Rightarrow Ea = 70554\ J\ (or)$$

$$Ea = 70.554\ kJ$$

b) A graph of potential energy versus reaction coordinate to show the effect of catalyst on activation energy -



Reaction coordinate

44.How many series of d-block elements are known?

Ans: 4 series (namely, 3d, 4d, 5d and 6d series).

3d series or first transition series; $_{12}Sc$ to $_{30}Zn(3d^{1-10}4s^{1-2})$

4d series or second transition series; $_{39}Y$ to $_{48}Cd(4d^{1-10}5s^{1-2})$

5d series or third transition series; $_{57}La$ to $_{72}Hf-_{80}Hg(5d^{1-10}6s^{1-2})$


6d series or fourth transition series; $_{89}Ac$ to $_{104}Rb-_{111}Rg(6d^{1-10}7s^{1-2})$

45. Why does iodoform have appreciable antiseptic properties?

Ans: The antiseptic qualities of iodoform (CHI_3) are attributable to iodine, which is produced when the substance comes into contact with the skin. When Iodoform comes into touch with skin, it releases I_2. Iodine's antiseptic properties are attributable to the liberation of I_2, not iodoform itself.

46. Oxidation of ketones involves carbon-carbon bond cleavage. Name the products formed on oxidation of 2, 5-dimethyl hexane-3-one.

Ans: Being unsymmetrical, ketone oxidation occurs on either side of the C = O group giving a mixture of 2-methyl propanoic acid, 3-methyl butanoic acid and propan-2-one.



47. What does the negative sign in the expression $E^0_{Zn^{2+}/Zn} = -0.76$ V means? (Electrochemestry)

Ans: It implies that Zn is more reactive than hydrogen or it is a stronger reducing agent. In a cell containing zinc electrode and standard hydrogen electrode present in two half cells, zinc will be oxidised to Zn^{2+} ions while H^+ ions will get reduced to hydrogen.

ಪ್ರಯಾಗರಾಜ್: ಬಿಒಡಿ ಮಟ್ಟ ಅಧಿಕ ● ಸಿಪಿಸಿಬಿ ವರದಿಯಲ್ಲಿ ಉಲ್ಲೇಖ

‘ಸ್ನಾನಕ್ಕೆ ಗಂಗೆ ನೀರು ಸುರಕ್ಷಿತವಲ್ಲ’

ನವದೆಹಲಿ (ಪಿಟಿಐ): ಮಹಾ ಕುಂಭದ ಅಂಗವಾಗಿ ಭಕ್ತರು ಪುಣ್ಯಸ್ನಾನ ಮಾಡುತ್ತಿರುವ ಪ್ರಯಾಗರಾಜ್‌ದ ತ್ರಿವೇಣಿ ಸಂಗಮದಲ್ಲಿನ ನೀರಿನಲ್ಲಿ ‘ಕರಗಿದ ಆಮ್ಲಜನಕ’ (ಬಿಒಡಿ) ಪ್ರಮಾಣ ಅಧಿಕವಿದೆ. ಹೀಗಾಗಿ, ಈ ಸ್ಥಳದಲ್ಲಿನ ನೀರು ಪ್ರಸ್ತುತ ಸ್ನಾನಕ್ಕೆ ಸುರಕ್ಷಿತವಲ್ಲ ಎಂದು ಕೇಂದ್ರ ಸರ್ಕಾರದ ದತ್ತಾಂಶ ಹೇಳುತ್ತವೆ.

ಬಿಒಡಿ ಪ್ರಮಾಣವು ಪ್ರತಿ ಲೀಟರ್‌ಗೆ 3 ಮಿ.ಗ್ರಾಂಗಿಂತ ಕಡಿಮೆ ಇದ್ದರೆ, ಆ ನದಿ ನೀರು ಸ್ನಾನಕ್ಕೆ ಯೋಗ್ಯ ಎಂಬುದಾಗಿ ಪರಿಗಣಿಸಲಾಗುತ್ತದೆ.

ಜಲಕಾಯಗಳಲ್ಲಿರುವ ಸಾವಯವ ಪದಾರ್ಥಗಳನ್ನು ವಿಭಜಿಸಲು ಸೂಕ್ಷ್ಮಾಣು ಜೀವಿಗಳಿಗೆ ಅಗತ್ಯವಿರುವ ಆಮ್ಲಜನಕ ಪ್ರಮಾಣ ಕುರಿತು ಬಿಒಡಿ ತಿಳಿಸುತ್ತದೆ. ಬಿಒಡಿ ಮಟ್ಟ ಹೆಚ್ಚು ಇದ್ದರೆ, ನೀರಿನಲ್ಲಿ ಸಾವಯವ ಪ್ರಮಾಣ ಅಧಿಕ ಇದೆ ಎಂದರ್ಥ. ಬಿಒಡಿ ಮಟ್ಟ ಅಧಿಕವಿದ್ದಲ್ಲಿ, ನೀರು ಸ್ನಾನಕ್ಕೆ ಯೋಗ್ಯವಲ್ಲ.

‘ಜ.12 ಹಾಗೂ 13ರಂದು ಪ್ರಯಾಗರಾಜ್‌ದ ವಿವಿಧ ಸ್ಥಳಗಳಲ್ಲಿ ನೀರಿನ ಗುಣಮಟ್ಟವನ್ನು ಪರಿಶೀಲಿಸಲಾಗಿತ್ತು. ಈ ಸ್ಥಳಗಳಲ್ಲಿನ ನೀರು ಸ್ನಾನಕ್ಕೆ ಅಗತ್ಯವಿರುವ ಗುಣಮಟ್ಟ ಹೊಂದಿರಲಿಲ್ಲ’ ಎಂದು ಸಿಪಿಸಿಬಿ, ಫೆ.2ರಂದು ರಾಷ್ಟ್ರೀಯ ಹಸಿರುಪೀಠಕ್ಕೆ (ಎನ್‌ಜಿಟಿ) ಸಲ್ಲಿಸಿರುವ ವರದಿಯಲ್ಲಿ ವಿವರಿಸಿದೆ.

‘ಜ.13ರ ನಂತರ, ನದಿಗೆ ಭಾರಿ ಪ್ರಮಾಣದಲ್ಲಿ ಸಿಹಿನೀರು ಬಿಡಲಾಯಿತು. ಇದರಿಂದ, ಜ.19ರಂದು ಲಾರ್ಡ್ ಕರ್ಜನ್ ಸೇತುವೆ ಹೊರತುಪಡಿಸಿದಂತೆ ಉಳಿದ ಸ್ಥಳಗಳಲ್ಲಿನ ನೀರು ಸ್ನಾನಕ್ಕೆ ಯೋಗ್ಯ ಗುಣಮಟ್ಟ ಹೊಂದಿರುವುದು ಕಂಡುಬಂತು’ ಎಂದು ಮಂಡಳಿ ತನ್ನ ವರದಿಯಲ್ಲಿ ಹೇಳಿದೆ.



ತ್ರಿವೇಣಿ ಸಂಗಮದಲ್ಲಿ ತೇಲುತ್ತಿರುವ ತ್ಯಾಜ್ಯಗಳ ನಡುವೆಯೇ ಭಕ್ತರು ಪುಣ್ಯಸ್ನಾನ ಮಾಡಿದರು — ಪಿಟಿಐ ಚಿತ್ರ

ಬಿಒಡಿ ಮಟ್ಟದಲ್ಲಿ ಏರಿಳಿತ

ಮಹಾ ಕುಂಭ ಆರಂಭಗೊಂಡ ದಿನವಾದ ಜ.13ರಂದು, ತ್ರಿವೇಣಿ ಸಂಗಮದಲ್ಲಿ ಬಿಒಡಿ ಮಟ್ಟವು ಪ್ರತಿ ಲೀಟರ್‌ಗೆ 3.94 ಮಿ.ಗ್ರಾಂ ಇತ್ತು ಎಂದು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ದತ್ತಾಂಶದಿಂದ ತಿಳಿದುಬರುತ್ತದೆ.

ಪ್ರಸ್ತುತ, ತ್ರಿವೇಣಿ ಸಂಗಮದಲ್ಲಿನ ನೀರಿನಲ್ಲಿ ಬಿಒಡಿ ಮಟ್ಟವು ಅಧಿಕ ಇದೆ. ಜ.16ರಂದು ಬೆಳಿಗ್ಗೆ 5ಕ್ಕೆ, ಪ್ರತಿ ಲೀಟರ್ ನೀರಿನಲ್ಲಿ ಬಿಒಡಿ ಮಟ್ಟ 5.09 ಮಿ.ಗ್ರಾಂ ಇತ್ತು. ಜ.18ರಂದು ಇದೇ ಸಮಯದಲ್ಲಿ ಇದರ ಪ್ರಮಾಣ 4.6 ಮಿ.ಗ್ರಾಂ/ಲೀಟರ್ ಹಾಗೂ ಜ.19ರಂದು ಬೆಳಿಗ್ಗೆ 8ರ ವೇಳೆಗೆ ಈ ಮಟ್ಟವು 5.29 ಮಿ.ಗ್ರಾಂ/ಲೀಟರ್ ಇತ್ತು ಎಂದು ಮಂಡಳಿ ದತ್ತಾಂಶ ಹೇಳುತ್ತವೆ.

ಮಕರ ಸಂಕ್ರಾಂತಿ (ಜ.14) ವೇಳೆಗೆ ಬಿಒಡಿ ಮಟ್ಟದಲ್ಲಿ ತುಸು ಸುಧಾರಣೆ ಕಂಡು ಬಂದಿತ್ತು. ಅಂದು, 2.29 ಮಿ.ಗ್ರಾಂ/ಲೀಟರ್ ದಾಖಲಾಗಿತ್ತು. ಜ.15ರಂದು ಈ ಪ್ರಮಾಣ 1 ಮಿ.ಗ್ರಾಂ/ಲೀಟರ್‌ಗೆ ಇಳಿದಿತ್ತು. ನಂತರದ ದಿನಗಳಲ್ಲಿ ಬಿಒಡಿ ಮಟ್ಟದಲ್ಲಿ ಕ್ರಮೇಣ ಏರಿಳಿತ ಕಂಡುಬಂದಿದೆ. ಜ.24ರಂದು 4.08 ಮಿ.ಗ್ರಾಂ/ಲೀಟರ್ ಇದ್ದ ಬಿಒಡಿ ಮಟ್ಟ, ಮೌನಿ ಅಮಾವಾಸ್ಯೆ ದಿನವಾದ ಜ.29ರಂದು 3.26 ಮಿ.ಗ್ರಾಂ/ಲೀಟರ್ ಆಗಿತ್ತು.

‘10 ಸಾವಿರ ಕ್ಯುಸೆಕ್ ನೀರು’

ಗಂಗಾ ನದಿ ನೀರು ಸ್ನಾನಕ್ಕೆ ಯೋಗ್ಯ ಗುಣಮಟ್ಟ ಹೊಂದಿರುವುದನ್ನು ಖಾತ್ರಿಪಡಿಸುವುದಕ್ಕಾಗಿ ನದಿಗೆ ಸಿಹಿನೀರು ಬಿಡುಗಡೆ ಮಾಡಲು ಕ್ರಮ ಕೈಗೊಂಡಿದ್ದಾಗಿ ಉತ್ತರ ಪ್ರದೇಶ ಸರ್ಕಾರ ಹೇಳಿದೆ.

‘ಮೇಳದ ಅಂಗವಾಗಿ ಗಂಗಾ ನದಿಗೆ 10 ಸಾವಿರದಿಂದ 11 ಸಾವಿರ ಕ್ಯುಸೆಕ್‌ನಷ್ಟು ನೀರು ಬಿಡಲಾಗಿದೆ’ ಎಂದು ಹೇಳಿದೆ.

‘2019ರಲ್ಲಿ ನಡೆದ ಅರ್ಧ ಕುಂಭದಿಂದ ಹಿಡಿದು ನದಿ ನೀರಿನ ಗುಣಮಟ್ಟ ಸುಧಾರಿಸಲು ಹಾಗೂ ನೈರ್ಮಲ್ಯ ಕಾಪಾಡುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಹೀಗಾಗಿ, ಈ ಬಾರಿ ಮಹಾ ಕುಂಭ ಮೇಳಕ್ಕೆ ಭಾರಿ ಸಂಖ್ಯೆಯಲ್ಲಿ ಜನರು ಭೇಟಿ ನೀಡುತ್ತಿದ್ದಾರೆ’ ಎಂದು ಉತ್ತರ ಪ್ರದೇಶ ಮುಖ್ಯ ಕಾರ್ಯದರ್ಶಿ ಮನೋಜ್ ಕುಮಾರ್ ಸಿಂಗ್ ಹೇಳಿದ್ದಾರೆ.

‘2019ಕ್ಕೂ ಮುನ್ನ, ಕುಂಭ ಮೇಳ ನಡೆಯುವ ಸ್ಥಳದಲ್ಲಿ ಶೌಚಾಲಯಗಳೇ ಇರುತ್ತಿರಲಿಲ್ಲ. ಈ ಬಾರಿ 1.14 ಲಕ್ಷ ಶೌಚಾಲಯಗಳನ್ನು ನಿರ್ಮಿಸಿದ್ದು, ಪ್ರತಿ 2–3 ದಿನಗಳಿಗೊಮ್ಮೆ ನೈರ್ಮಲ್ಯ ಕಾಪಾಡಲು ಹಲವು ಕ್ರಮ ಕೈಗೊಂಡಿದ್ದೇವೆ’ ಎಂದಿದ್ದಾರೆ.

‘ನೈರ್ಮಲ್ಯ ಕಾಪಾಡಲು ಕೈಗೊಂಡಿರುವ ಕ್ರಮಗಳೇ ಈ ಬಾರಿಯ ಕುಂಭಮೇಳಕ್ಕೆ ಮಾಡಿರುವ ವ್ಯವಸ್ಥೆಯ ಹೆಗ್ಗುರುತು’ ಎಂದಿದ್ದಾರೆ.

ಅಗೌರವ ಸಹಿಸಲ್ಲ: ಯೋಗಿ

‘ಸುಳ್ಳಿನ ಸಂಕಥನಗಳಿಂದ ಮಹಾ ಕುಂಭಕ್ಕೆ ಮತ್ತು ಸನಾತನ ಧರ್ಮಕ್ಕೆ ಅಗೌರವ ತೋರುವ ಪ್ರತಿಪಕ್ಷಗಳ ಯತ್ನಗಳನ್ನು ಸಹಿಸುವುದಿಲ್ಲ’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ವಿಧಾನಸಭೆ ಬುಧವಾರ ಹೇಳಿದ್ದಾರೆ.

ಪ್ರಯಾಗರಾಜ್‌ದಲ್ಲಿನ ನದಿ ನೀರು ಸ್ನಾನಕ್ಕೆ ಯೋಗ್ಯವಾಗಿಲ್ಲ ಎಂಬ ವರದಿಗಳನ್ನು ಯೋಗಿ ಆದಿತ್ಯನಾಥ ಅಲ್ಲಗಳೆದಿದ್ದಾರೆ. ಉತ್ತರ ಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಸಂಗಮದಲ್ಲಿನ ನೀರಿನ ಗುಣಮಟ್ಟವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದೆ ಎಂದರು.

ಉತ್ತರ ಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿಗೆ ತರಾಟೆ

ಮಹಾ ಕುಂಭ ನಡೆಯುತ್ತಿರುವ ಪ್ರಯಾಗರಾಜ್‌ನ ವಿವಿಧ ಸ್ಥಳಗಳಲ್ಲಿನ ನೀರಿನಲ್ಲಿ ಫೀಕಲ್ ಕೋಲಿಫಾರ್ಮ್ ಬ್ಯಾಕ್ಟೀರಿಯಾ ಪ್ರಮಾಣ ಅಧಿಕ ಇದೆ ಎಂಬ ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ವರದಿ ಕುರಿತು ಭಿನ್ನಾಭಿಪ್ರಾಯವೇಕೆ ಎಂದು ಉತ್ತರ ಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು (ಯುಪಿಪಿಸಿಬಿ) ರಾಷ್ಟ್ರೀಯ ಹಸಿರು ಪೀಠ ಬುಧವಾರ ತರಾಟೆಗೆ ತೆಗೆದುಕೊಂಡಿದೆ.

ಗಂಗಾ ಮತ್ತು ಯಮುನಾ ನದಿಗಳಿಗೆ ಪ್ರಯಾಗರಾಜ್‌ನಲ್ಲಿ ಒಳಚರಂಡಿ ತ್ಯಾಜ್ಯ ಸೇರುವುದನ್ನು ತಡೆಯುವ ಕುರಿತು ಸಲ್ಲಿಸಿರುವ ಅರ್ಜಿ ವಿಚಾರಣೆ ವೇಳೆ, ಎನ್‌ಜಿಟಿ ಈ ಪ್ರಶ್ನೆ ಮುಂದಿಟ್ಟಿದೆ.

ಎನ್‌ಜಿಟಿ ಮುಖ್ಯಸ್ಥ ನ್ಯಾಯಮೂರ್ತಿ ಪ್ರಕಾಶ ಶ್ರೀವಾಸ್ತವ, ನ್ಯಾಯಿಕ ಸದಸ್ಯ ನ್ಯಾಯಮೂರ್ತಿ ಸುಧೀರ್ ಅಗರವಾಲ್ ಹಾಗೂ ತಜ್ಞ ಸದಸ್ಯ ಎ.ಸೆಂಥಿಲ್ ವೇಲ್ ಅವರು ಇದ್ದ ಪೀಠವು, ಅರ್ಜಿ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ,‘ಯಾವ ಸ್ಥಳಗಳಲ್ಲಿ ಮಾದರಿಗಳನ್ನು ಸಂಗ್ರಹಿಸಲಾಗಿದೆ ಎಂಬ ಬಗ್ಗೆ ಸಿಪಿಸಿಬಿ ಮಾಹಿತಿ ನೀಡಿಲ್ಲ’ ಎಂದು ಹೆಚ್ಚುವರಿ ಅಡ್ವೊಕೇಟ್ ಜನರಲ್ ಗರಿಮಾ ಪ್ರಸಾದ್ ಅವರು ಪೀಠಕ್ಕೆ ತಿಳಿಸಿದರು.

‘ಹಾಗಾದರೆ ಸಿಪಿಸಿಬಿ ನೀಡಿರುವ ವರದಿಯನ್ನು ಯುಪಿಪಿಸಿಬಿ ಒಪ್ಪುವುದಿಲ್ಲವೇ? ಎಂದ ಪೀಠ, ‘ಮಾದರಿಗಳನ್ನು ಸಂಗ್ರಹಿಸುವ ಮುನ್ನ ಸಿಪಿಸಿಬಿ ನಿಮಗೆ ಮಾಹಿತಿ ನೀಡಬೇಕು ಎಂಬ ನಿಯಮವಿಲ್ಲ’ ಎಂದೂ ಹೇಳಿತು.

‘ರಾಜ್ಯ ಸರ್ಕಾರ ಕೈಗೊಂಡ ಪರಿಹಾರಗಳ ಕುರಿತು ರಾಜ್ಯ ಸರ್ಕಾರ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ವಾರದ ಒಳಗಾಗಿ ಹೊಸ ವರದಿಯನ್ನು ಸಲ್ಲಿಸಲಾಗುವುದು’ ಎಂದು ಗರಿಮಾ ಪ್ರಸಾದ್, ಪೀಠಕ್ಕೆ ತಿಳಿಸಿದರು.

ಹಿಂದಿ ಹೇರಿಕೆ: ರಂಗೋಲಿ ಪ್ರತಿಭಟನೆ

ಚೆನ್ನೈ: ಹಿಂದಿ ಭಾಷೆ ಹೇರುವ ಕೇಂದ್ರ ಸರ್ಕಾರದ ನಡೆ ಖಂಡಿಸಿ ಚೆನ್ನೈನಲ್ಲಿ ಬುಧವಾರ ‘ಪೆರಿಯಗಿಳಿ’ ನಾಗರಿಕರು ಭಾಷಾ ಹೇರಿಕೆ ವಿರೋಧಿ ಘೋಷಣೆಗಳೊಂದಿಗೆ ಮನೆಗಳ ಎದುರು ರಂಗೋಲಿ ಬಿಡಿಸಿ ಪ್ರತಿಭಟಿಸಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ರಾಜ್ಯದ ಆಡಳಿತಾರೂಢ ಡಿಎಂಕೆ ನಡುವೆ ಭಾಷಾ ಹೇರಿಕೆ ಕುರಿತಾಗಿ ವಾಕ್ಸಮರ ನಡೆಯುತ್ತಿರುವಂತೆಯೇ, ಜನರೂ ಹಿಂದಿ ವಿರುದ್ಧ ಭಿನ್ನವಾಗಿ ಆಕ್ರೋಶ ಹೊರಹಾಕಿದರು.

ಸಮಗ್ರ ಶಿಕ್ಷಣ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ 2020 ಅನ್ವಯ ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಜಟಾಪಟಿ ನಡೆದಿದೆ.

ಚೆನ್ನೈ ಹೊರವಲಯದ ಉಯಪಕ್ಕಂ ಮತ್ತು ಅನುಪಾಸಿನಲ್ಲಿ 200ಕ್ಕೂ ಹೆಚ್ಚು ಕುಟುಂಬಗಳವರು ರಸ್ತೆಯಲ್ಲಿ ರಂಗೋಲಿ ಬಿಡಿ ಹಿಂದಿ ಹೇರಿಕೆ ನಡೆಯನ್ನು ಖಂಡಿಸಿದರು. ಸ್ಥಳೀಯ ಸ್ವಯಂ ಸೇವಾ ಸಂಘ ಭಿನ್ನ ಪ್ರತಿಭಟನೆ ಏರ್ಪಡಿಸಿತ್ತು.

ದೆಹಲಿಗೆ ಮತ್ತೆ ಮಹಿಳಾ ಸಾರಥ್ಯ

ಒಂದನೇ ಪುಟದಿಂದ...


ದೇಶದಲ್ಲಿ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಮಹಿಳಾ ಮುಖ್ಯಮಂತ್ರಿಗಳಿಲ್ಲ. ಈ ಕೊರತೆಯನ್ನು ನೀಗಿಸಲು ಅಚ್ಚರಿ ಆಯ್ಕೆ ರೂಪದಲ್ಲಿ ರೇಖಾ ಅವರನ್ನು ಬಿಜೆಪಿ ಆಯ್ಕೆ ಮಾಡಿದೆ.

ರಾಜಸ್ಥಾನದಲ್ಲಿ 2018ರಲ್ಲಿ ಅಧಿಕಾರ ತ್ಯಜಿಸಿದ ವಸುಂಧರಾ ರಾಜೇ ಸಿಂಧಿಯಾ ನಂತರ ಗುಪ್ತಾ ಅವರು ಪಕ್ಷದ ಮೊದಲ ಮಹಿಳಾ ಮುಖ್ಯಮಂತ್ರಿಯಾಗಲಿದ್ದಾರೆ. ಪಕ್ಷವು ಪ್ರಸ್ತುತ 19 ರಾಜ್ಯಗಳಲ್ಲಿ ಎನ್‌ಡಿಎ ಮಿತ್ರಪಕ್ಷಗಳೊಂದಿಗೆ ಅಧಿಕಾರದಲ್ಲಿದೆ. 13 ರಾಜ್ಯಗಳಲ್ಲಿ ಬಿಜೆಪಿಯ ಮುಖ್ಯಮಂತ್ರಿಗಳಿದ್ದಾರೆ.

ಆದಾಗ್ಯೂ, ಕಳೆದ ವರ್ಷ ಒಡಿಶಾ ಮತ್ತು ರಾಜಸ್ಥಾನದಲ್ಲಿ ಪಕ್ಷವು ಪಾರ್ವತಿ ಪರಿದಾ ಹಾಗೂ ದಿಯಾ ಕುಮಾರಿ ಅವರನ್ನು ಉಪಮುಖ್ಯಮಂತ್ರಿಗಳಾಗಿ ನೇಮಿಸುವ ಮೂಲಕ ಈ ಅಸಮತೋಲನವನ್ನು ಸರಿಪಡಿಸಲು ಪ್ರಯತ್ನಿಸಿತ್ತು.

ಪಕ್ಷದ ಕೇಂದ್ರ ವೀಕ್ಷಕರಾದ ರವಿಶಂಕರ್ ಪ್ರಸಾದ್ ಹಾಗೂ ಓ.ಪಿ. ಧನಕರ್ ಸಮ್ಮುಖದಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ನೂತನ ಮುಖ್ಯಮಂತ್ರಿಯ ಹೆಸರನ್ನು ಘೋಷಿಸಲಾಯಿತು. ಸಭೆಯಲ್ಲಿ ಪಕ್ಷದ 48 ಶಾಸಕರು ಭಾಗವಹಿಸಿದ್ದರು.

ಬಿಜೆಪಿ ಆಡಳಿತವಿರುವ ನೆರೆಯ ಹರಿಯಾಣದಲ್ಲಿ ಒಬಿಸಿ (ನಾಯಬ್ ಸಿಂಗ್ ಸೈನಿ), ಉತ್ತರ ಪ್ರದೇಶದಲ್ಲಿ ಠಾಕೂರ್ (ಯೋಗಿ ಆದಿತ್ಯನಾಥ) ಮತ್ತು ರಾಜಸ್ಥಾನದಲ್ಲಿ ಬ್ರಾಹ್ಮಣ (ಭಜನ್‌ಲಾಲ್ ಶರ್ಮಾ) ಸಮುದಾಯದವರಿಗೆ ಮುಖ್ಯಮಂತ್ರಿ ಸ್ಥಾನ ನೀಡಲಾಗಿದ್ದರೆ, ದೆಹಲಿಯಲ್ಲಿ ವ್ಯಾಪಾರಿ ಸಮುದಾಯದ ಮಹಿಳೆಗೆ ಪ್ರಾತಿನಿಧ್ಯ ನೀಡಿದೆ. ಮಹಿಳಾ ಸಬಲೀಕರಣ ಹಲವು ಯೋಜನೆಗಳನ್ನು ಪಕ್ಷವು ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ಗುರುವಾರ ನಡೆಯುವ ಮೊದಲ ಸಂಪುಟ ಸಭೆಯಲ್ಲಿ ಕಲ್ಯಾಣ ಯೋಜನೆಗಳನ್ನು ಘೋಷಿಸುವ ಹಾಗೂ ಎಎಪಿ ಯೋಜನೆಗಳ ಮರು ನಾಮಕರಣ ಮಾಡುವ ಸಂಭವ ಇದೆ.



ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಂಪುಟದ ಸಚಿವರು, ಬಿಜೆಪಿಯ ಮುಖ್ಯಮಂತ್ರಿಗಳು, ಎನ್‌ಡಿಎ ಮೈತ್ರಿಕೂಟದ ನಾಯಕರು ಪ್ರಮಾಣವಚನ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ.

ಸುಮಾರು 50 ಸಾವಿರ ಜನರು ಸಮಾರಂಭದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಪಕ್ಷವು ಆಟೊ ಚಾಲಕರು, ಕೊಳೆಗೇರಿ ನಿವಾಸಿಗಳು ಮತ್ತು ಕೇಂದ್ರ ಯೋಜನೆಗಳ ಫಲಾನುಭವಿಗಳಿಗೆ ವಿಶೇಷ ಆಹ್ವಾನ ನೀಡಿದೆ.

ನವದೆಹಲಿಯಲ್ಲಿ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರನ್ನು ಮಣಿಸಿದ್ದ ಪರ್ವೇಶ್ ವರ್ಮಾ, ನಾಯಕರಾದ ವಿಜೇಂದರ್ ಗುಪ್ತ, ಆಶೀಷ್ ಸೂದ್, ಸತೀಶ್ ಉಪಾಧ್ಯಾಯ ಹಾಗೂ ಶಿಖಾ ರಾಯ್ ಅವರು ಮುಖ್ಯಮಂತ್ರಿ ಹುದ್ದೆಯ ಪ್ರಬಲ ಆಕಾಂಕ್ಷಿಗಳಾಗಿದ್ದರು.

ದೆಹಲಿಯಲ್ಲೂ ಪ್ರಯೋಗ

ವಿಧಾನಸಭೆಗೆ ಮೊದಲ ಬಾರಿಗೆ ಪ್ರವೇಶ ಪಡೆದಿರುವ ರೇಖಾ ಗುಪ್ತಾ ಅವರಿಗೆ ಮುಖ್ಯಮಂತ್ರಿ ಗಾದಿಯ ಅದೃಷ್ಟ ಒಲಿದಿದೆ. ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ, ಒಡಿಶಾದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಬಿಜೆಪಿಯು ಅಚ್ಚರಿಯ ಆಯ್ಕೆ ಮಾಡಿತ್ತು. ದೆಹಲಿಯಲ್ಲೂ ಅದೇ ಪ್ರಯೋಗ ಮುಂದುವರಿಸಿದೆ.

ಪ್ರಸ್ತುತ ದೆಹಲಿ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿರುವ 50ರ ಹರೆಯದ ರೇಖಾ ಅವರು ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಶಾಲಿಮಾರ್ ಬಾಗ್ ಕ್ಷೇತ್ರದಲ್ಲಿ 29,595 ಮತಗಳಿಂದ ಜಯ ಗಳಿಸಿದ್ದರು. 2015 ಹಾಗೂ 2020ರ ಚುನಾವಣೆಗಳಲ್ಲಿ ಎಎಪಿ ಅಭ್ಯರ್ಥಿ ಈ ಕ್ಷೇತ್ರದಲ್ಲಿ ವಿಜಯಶಾಲಿ ಆಗಿದ್ದರು.

1992ರಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತೆಯಾಗಿ ರಾಜಕೀಯ ಜೀವನ ಆರಂಭಿಸಿದ್ದ ಗುಪ್ತ ಅವರು 1996–97ರಲ್ಲಿ ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದರು. ವೃತ್ತಿಯಲ್ಲಿ ವಕೀಲೆಯಾಗಿರುವ ಅವರು 2007ರ ಪಾಲಿಕೆ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರು. 2012ರ ಚುನಾವಣೆಯಲ್ಲಿ ಮರು ಆಯ್ಕೆಯಾಗಿದ್ದರು. ದಕ್ಷಿಣ ದೆಹಲಿ ಪಾಲಿಕೆಯ ಮೇಯರ್ ಆಗಿ ಸೇವೆ ಸಲ್ಲಿಸಿದ್ದರು. ದೆಹಲಿ ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.

ಪೂರ್ವಭಾವಿ ಪರೀಕ್ಷೆ: ಅರ್ಜಿ ಸಲ್ಲಿಕೆಗೆ 21 ಕೊನೆ ದಿನ

ನವದೆಹಲಿ(ಪಿಟಿಐ): ಈ ವರ್ಷದ ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಇದೇ 21ರವರೆಗೆ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ವಿಸ್ತರಿಸಿದೆ. ಪೂರ್ವಭಾವಿ ಪರೀಕ್ಷೆಯು ಮೇ 25ರಂದು ನಡೆಯಲಿದೆ.

ಭಾರತೀಯ ಆಡಳಿತ ಸೇವೆ (ಐಎಎಸ್), ಭಾರತೀಯ ವಿದೇಶಾಂಗ ಸೇವೆ (ಐಎಫ್‌ಎಸ್) ಮತ್ತು ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಸೇರಿ ಮೂರು ಹಂತಗಳಲ್ಲಿ ಯುಪಿಎಸ್‌ಸಿ ವಾರ್ಷಿಕವಾಗಿ ನಡೆಸುವ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಎರಡನೇ ಬಾರಿ ವಿಸ್ತರಿಸಿದಂತಾಗಿದೆ.

ನಾಗರಿಕ ಸೇವೆಗಳು (ಪೂರ್ವಭಾವಿ)- 2025 ಮತ್ತು ಭಾರತೀಯ ಅರಣ್ಯ ಸೇವೆ (ಪೂರ್ವಭಾವಿ)- 2025ಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಇದೇ 21ರ ಸಂಜೆ 6ರವರೆಗೆ ವಿಸ್ತರಿಸಲಾಗಿದೆ ಎಂದು ಆಯೋಗವು ತನ್ನ ವೆಬ್‌ಸೈಟ್‌ನಲ್ಲಿ ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಈಗಾಗಲೇ ಅರ್ಜಿ ಸಲ್ಲಿಸಿರುವವರಿಗೆ ತಿದ್ದುಪಡಿಗಳಿದ್ದರೆ, ಅವರಿಗಾಗಿ ತಿದ್ದುಪಡಿ ವಿಂಡೊ ತೆರೆದಿರುತ್ತದೆ ಎಂದು ತಿಳಿಸಲಾಗಿದೆ.

ಅರ್ಜಿ ಸಲ್ಲಿಕೆ: http://upsconline.gov.in ವೆಬ್‌ಸೈಟ್‌ಗೆ ಭೇಟಿ ನೀಡಿ.

ನೀಟ್ ನಿಯಮ ಮಾನ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿದೇಶದ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ಪದವಿ ಪಡೆಯಬೇಕು ಎಂದಾದರೆ ನೀಟ್ ಉತ್ತೀರ್ಣ ಆಗಬೇಕು ಎಂದು ಭಾರತೀಯ ವೈದ್ಯಕೀಯ ಪರಿಷತ್ತು ರೂಪಿಸಿರುವ ನಿಯಮವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ.

ನಿಯಮಗಳು ಸಂವಿಧಾನದ ವ್ಯಾಪ್ತಿಯನ್ನು ಮೀರಿಲ್ಲ, ಭಾರತೀಯ ವೈದ್ಯಕೀಯ ಪರಿಷತ್ತು ಕಾಯ್ದೆ – 1956ರ ಯಾವುದೇ ಅಂಶಗಳಿಗೆ ವಿರುದ್ಧವಾಗಿಲ್ಲ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ. ವಿನೋದ್ ಚಂದ್ರನ್ ಅವರು ಇರುವ ಪೀಠವು ಹೇಳಿದೆ.

ವಿದೇಶಗಳಲ್ಲಿ ಎಂಬಿಬಿಎಸ್ ಓದಿದ ವಿದ್ಯಾರ್ಥಿಗಳು ಭಾರತದಲ್ಲಿ ವೈದ್ಯರಾಗಲು ಬಯಸುವುದಾದರೆ ಅವರು ನೀಟ್ ಉತ್ತೀರ್ಣರಾಗುವುದು ಕಡ್ಡಾಯ ಎಂಬ ನಿಯಮವು ಜಾರಿಯಲ್ಲಿದೆ.

ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣ ಆಗುವುದು ಕಡ್ಡಾಯ ಎಂಬ ನಿಯಮವನ್ನು 2018ರಲ್ಲಿ ಶಾಸನಕ್ಕೆ ತಿದ್ದುಪಡಿ ತರದೆಯೇ ಜಾರಿಗೊಳಿಸಲಾಯಿತು ಎಂದು ಅರ್ಜಿದಾರರಾದ ಅರುಣಾದಿತ್ಯ ದುಬೆ ಅವರು ದೂರಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಸ್ವರ್ಗವು ಬೇರೆಲ್ಲೋ ಇಲ್ಲ. ಯಾವಾಗಲೂ ಸಂತೋಷವಾಗಿ ಇರುವವರ ಮನಸ್ಸಿನಲ್ಲೇ ಸ್ವರ್ಗ ಇರುತ್ತದೆ.
–ರಾಮಕೃಷ್ಣ ಪರಮಹಂಸ

ಅನುದಾನ ಸ್ಥಗಿತದ ಬೆದರಿಕೆ ರಾಜಕಾರಣಕ್ಕೆ ಭಾಷೆಯ ಬಳಕೆ ಬೇಡ

ತ್ರಿಭಾಷಾ ಸೂತ್ರವನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹಾಗೂ ತಮಿಳುನಾಡು ಸರ್ಕಾರದ ನಡುವೆ ಉಂಟಾಗಿರುವ ಸಂಘರ್ಷವು ಭಾಷಾ ರಾಜಕೀಯ, ಒಕ್ಕೂಟ ವ್ಯವಸ್ಥೆಯಲ್ಲಿ ಹಾಳಾಗಿರುವ ಸಂಬಂಧ, ನೀತಿಯ ಅನುಷ್ಠಾನವು ಲೋಪಗಳಿಂದ ಕೂಡಿರುವುದು ಹಾಗೂ ಅಧಿಕಾರವನ್ನು ಅನುಮಾನಾಸ್ಪದವಾಗಿ ಬಳಕೆ ಮಾಡುತ್ತಿರುವುದರ ಎಲ್ಲ ಲಕ್ಷಣಗಳನ್ನೂ ಹೊಂದಿದೆ. ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಹಾಗೂ ತ್ರಿಭಾಷಾ ಸೂತ್ರವನ್ನು ತಮಿಳುನಾಡು ಸರ್ಕಾರವು ಅನುಷ್ಠಾನಕ್ಕೆ ತರದೇ ಇದ್ದರೆ ಸಮಗ್ರ ಶಿಕ್ಷಣ ಅಭಿಯಾನದ (ಎಸ್‌ಎಸ್‌ಎ) ಅಡಿಯಲ್ಲಿ ಕೊಡಲಾಗುವ ಅನುದಾನವನ್ನು ನಿರಾಕರಿಸಲಾಗುತ್ತದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಹೇಳಿರುವುದು ಅಧಿಕಾರವನ್ನು ಮನಸ್ಸಿಗೆ ಬಂದಂತೆ ಬಳಸುವುದಕ್ಕೆ ಹಾಗೂ ಸೊಕ್ಕಿನಿಂದ ವರ್ತಿಸುವುದಕ್ಕೆ ನಿದರ್ಶನ. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಪ್ರಧಾನ್ ಅವರ ಮಾತನ್ನು 'ಬ್ಲ್ಯಾಕ್‌ಮೇಲ್‌ನ ಒರಟು ರೂಪ' ಎಂದು ಕರೆದಿದ್ದಾರೆ. ತಮಿಳು ರಾಜಕೀಯ ಪಕ್ಷಗಳು, ಅಲ್ಲಿನ ವಿವಿಧ ಸಂಘಟನೆಗಳು ಹಾಗೂ ಶಿಕ್ಷಕರ ಒಕ್ಕೂಟಗಳು ಸ್ಟಾಲಿನ್ ಅವರನ್ನು ಬೆಂಬಲಿಸಿವೆ. ಇಲ್ಲಿ ಹೇಳಿರುವ ಅನುದಾನದ ಮೊತ್ತವು ₹2,150 ಕೋಟಿಯಷ್ಟಿದೆ. ಇದೇ ಆಧಾರದಲ್ಲಿ ಅನುದಾನದ ನಿರಾಕರಣೆ ಆಗುವ ಅಪಾಯವು ತಮಿಳುನಾಡು ಮಾತ್ರವೇ ಅಲ್ಲದೆ ಕೇರಳ ಸರ್ಕಾರ ಮತ್ತು ಪಶ್ಚಿಮ ಬಂಗಾಳ ಸರ್ಕಾರವನ್ನೂ ಕಾಡಿದೆ. ಎನ್‌ಇಪಿಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಬೇಕು, ತ್ರಿಭಾಷಾ ಸೂತ್ರವನ್ನೂ ಜಾರಿಗೆ ತರಬೇಕು ಎಂದು ಕೇಂದ್ರ ಸಚಿವರು ಒತ್ತಾಯಿಸಿದ್ದಾರೆ.



ಸಹಕಾರಿ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳು ಪರಸ್ಪರ ಗೌರವಿಸಬೇಕು, ಒಂದಿಷ್ಟು ಹೊಂದಾಣಿಕೆಗಳಿಗೆ ಸಿದ್ಧವಿರಬೇಕು

ತ್ರಿಭಾಷಾ ಸೂತ್ರವನ್ನು ತಮಿಳುನಾಡು ವಿರೋಧಿಸುತ್ತಾ ಬಂದಿದೆ, ಅದನ್ನು ಆ ರಾಜ್ಯವು ಅನುಷ್ಠಾನಕ್ಕೆ ತಂದಿಲ್ಲ. ಈ ಸೂತ್ರವು ದಕ್ಷಿಣದ ರಾಜ್ಯಗಳ ಮೇಲೆ ಹಿಂದಿಯನ್ನು ಹೇರುವ ಅಸ್ತ್ರ ಎಂಬಂತೆ ಕಾಣಲಾಗಿದೆ. ಅದರಲ್ಲೂ ಮುಖ್ಯವಾಗಿ, ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಆಡಳಿತ ಇರುವಾಗ ಈ ಸೂತ್ರವನ್ನು ಈ ಬಗೆಯ ಅಸ್ತ್ರವಾಗಿ ಬಳಸಲಾಗುತ್ತದೆ ಎಂಬಂತೆ ಕಾಣಲಾಗಿದೆ. ಡಿಎಂಕೆ ನೇತೃತ್ವದ ತಮಿಳುನಾಡು ಸರ್ಕಾರವು ರಾಜಕೀಯ ಮಾಡುತ್ತಿದೆ ಎಂದು ಪ್ರಧಾನ್ ಹೇಳಿದ್ದಾರೆ. ಆದರೆ ಹಿಂದಿಗೆ ಉತ್ತೇಜನ ನೀಡುವುದು ಬಿಜೆಪಿಯ ರಾಜಕಾರಣದ ಭಾಗವೂ ಹೌದು. ಈ ಬಗೆಯ ಹಿಂದಿ ಉತ್ತೇಜನವು ಬಹುತೇಕ ಸಂದರ್ಭಗಳಲ್ಲಿ ಭಾಷೆಯ ಒತ್ತಾಯದ ಹೇರಿಕೆ ಆಗುತ್ತದೆ. ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿ ಇರುವ ಕಾರಣಕ್ಕೆ, ಅದಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ತೀರ್ಮಾನ ಕೈಗೊಳ್ಳುವ ನ್ಯಾಯಸಮ್ಮತವಾದ ಹಕ್ಕು ರಾಜ್ಯ ಸರ್ಕಾರಗಳಿಗೂ ಇರುತ್ತದೆ. ಶಿಕ್ಷಣದಲ್ಲಿ ಏನಿರಬೇಕು, ಏನನ್ನು ಕಲಿಸಬೇಕು ಎಂಬುದನ್ನು ಕೇಂದ್ರ ಸರ್ಕಾರವೇ ತೀರ್ಮಾನಿಸುವುದಾದರೆ ರಾಜ್ಯ ಸರ್ಕಾರಗಳಿಗೆ ಅವುಗಳ ಹಕ್ಕುಗಳನ್ನು ನಿರಾಕರಿಸಿದಂತಾಗುತ್ತದೆ. ಭಾಷೆಯು ಬಹಳ ಸೂಕ್ಷ್ಮವಾದ ವಿಚಾರ, ಅದನ್ನು ಸೂಕ್ಷ್ಮವಾಗಿಯೇ ನಿಭಾಯಿಸಬೇಕು.

ಎನ್‌ಇಪಿಯು ಹಿಂದಿಯನ್ನು ತ್ರಿಭಾಷಾ ಸೂತ್ರದ ಭಾಗವಾಗಿ ಸೂಚಿಸುವುದಿಲ್ಲ. ಆದರೆ ಈ ಸೂತ್ರವನ್ನು ವಾಸ್ತವದಲ್ಲಿ ಕ್ರಿಯಾರೂಪಕ್ಕೆ ತರುವಾಗ ಅದು ಬಹುತೇಕ ಶಾಲೆಗಳಲ್ಲಿ ಹಿಂದಿಯನ್ನು ತೃತೀಯ ಭಾಷೆಯನ್ನಾಗಿ ಕಲಿಸುವುದಕ್ಕೆ ದಾರಿ ಮಾಡಿಕೊಡಬಹುದು. ತಮಿಳುನಾಡಿನಲ್ಲಿ ಹಿಂದಿನಿಂದಲೂ ದ್ವಿಭಾಷಾ ಸೂತ್ರ ಜಾರಿಯಲ್ಲಿದೆ. ಅಲ್ಲಿ ಬಲವಂತದ ಕ್ರಮಗಳ ಮೂಲಕ ಕೇಂದ್ರ ಸರ್ಕಾರದ ನೀತಿಯನ್ನು ಜಾರಿಗೆ ತರುವುದು ತಪ್ಪಾಗುತ್ತದೆ. ರಾಜ್ಯ ಸರ್ಕಾರವೊಂದು ಭಾಷಾ ಸೂತ್ರವನ್ನು ಅನುಷ್ಠಾನಕ್ಕೆ ತಂದಿಲ್ಲ ಎಂಬ ಕಾರಣ ನೀಡಿ ಅನುದಾನ ತಡೆಹಿಡಿಯುವ ಅಧಿಕಾರವು ಕೇಂದ್ರದ ಸಚಿವರಿಗೆ ಇಲ್ಲ. ತ್ರಿಭಾಷಾ ಸೂತ್ರವು ಸಂವಿಧಾನದಲ್ಲಿ ಇಲ್ಲ. ಈ ಸೂತ್ರವನ್ನು ಯಾವುದೇ ಶಾಸನದಲ್ಲಿಯೂ ಅಡಕವಾಗಿಸಿಲ್ಲ, ಯಾವುದೇ ಶಾಸನವು ಈ ಸೂತ್ರವನ್ನು ಕಡ್ಡಾಯ ಮಾಡಿಲ್ಲ. ಇದು ಕೇಂದ್ರ ಸರ್ಕಾರ ರೂಪಿಸಿದ ಒಂದು ಸೂತ್ರ. ಈ ಸೂತ್ರಕ್ಕೆ ವಿರೋಧ ವ್ಯಕ್ತಪಡಿಸಿದ ಮಾತ್ರಕ್ಕೆ ಕಾನೂನನ್ನು ಉಲ್ಲಂಘಿಸಿದಂತೆ ಆಗುವುದಿಲ್ಲ. ಹಾಗಾಗಿ, ಅದಕ್ಕೆ ದಂಡ ತೆರಬೇಕಾದ ಅಗತ್ಯವೂ ಇರುವುದಿಲ್ಲ. ಸಹಕಾರಿ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳು ಪರಸ್ಪರ ಗೌರವಿಸಬೇಕು, ಎರಡೂ ಸರ್ಕಾರಗಳು ಒಂದಿಷ್ಟು ಹೊಂದಾಣಿಕೆಗಳಿಗೆ ಸಿದ್ಧವಿರಬೇಕು. ಒಂದು ಇನ್ನೊಂದರ ನಿಲುವನ್ನು ಗೌರವಿಸಬೇಕು. ಕೇಂದ್ರ ಸರ್ಕಾರವನ್ನು ಮುನ್ನಡೆಸುತ್ತಿರುವ ರಾಜಕೀಯ ಪಕ್ಷದ ರಾಜಕಾರಣವನ್ನು ಮುಂದಕ್ಕೆ ಒಯ್ಯುವ ಅಸ್ತ್ರವನ್ನಾಗಿ ಕೇಂದ್ರ ಸರ್ಕಾರದ ಯೋಜನೆಗಳನ್ನು ಬಳಕೆ ಮಾಡಬಾರದು. ಎಸ್‌ಎಸ್‌ಎಯನ್ನು ರೂಪಿಸಿದ್ದು ಶಿಕ್ಷಣದ ಲಭ್ಯತೆ ಹಾಗೂ ಕಲಿಕಾ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದ. ಈ ಕಾರ್ಯಕ್ರಮಕ್ಕೂ ಹಿಂದಿ ಭಾಷೆಗೂ ಸಂಬಂಧ ಇಲ್ಲ. ಅದನ್ನು ಯಾವುದೇ ಭಾಷೆಯ ಜೊತೆ ಬೆಸೆಯುವ ಕೆಲಸ ಮಾಡಬಾರದು.


ದಿನದ ಟ್ವೀಟ್

ಟೆಕ್ ಪಾರ್ಕ್ ನಿರ್ಮಾಣಕ್ಕೆ ಮುನ್ನ...

ಸರ್ಕಾರವು ತೆರಿಗೆಯನ್ನು ಮುಂಗಡವಾಗಿ ಪಡೆಯುತ್ತದೆ ಮತ್ತು ಅದನ್ನು ಪಾವತಿಸದೇ ಇದ್ದರೆ ದಂಡ ವಿಧಿಸುತ್ತದೆ. ಹಾಗಿದ್ದಮೇಲೆ ಟೆಕ್ ಪಾರ್ಕ್‌ಗಳ ನಿರ್ಮಾಣಕ್ಕೆ ಅನುಮತಿ ನೀಡುವ ಮುನ್ನವೇ ಮೆಟ್ರೊ ರೈಲು ಮಾರ್ಗ, ಉತ್ತಮ ರಸ್ತೆಗಳ ನಿರ್ಮಾಣ, ನೀರು ಮತ್ತು ಒಳಚರಂಡಿ ಪೈಪುಗಳ ಅಳವಡಿಕೆ ಕಾರ್ಯವನ್ನು ಮಾಡುವುದಿಲ್ಲವೇಕೆ?

ಪಂಕಜ್ ಮಾಳವೀಯ

ಕಿಡಿನುಡಿ



'ಗ್ಯಾರಂಟಿ'ಗಳಿಗೆ ನೀಡಲು ಕಾಂಗ್ರೆಸ್ ನೇತೃತ್ವದ ಸರ್ಕಾರದ ಬಳಿ ಹಣವೇ ಇಲ್ಲ, ಇನ್ನು ಅಭಿವೃದ್ಧಿಗೆ ಎಲ್ಲಿಂದ ಹಣ ಬರುತ್ತದೆ? ಈ ಬಗ್ಗೆ ಕಾಂಗ್ರೆಸ್ ಶಾಸಕರು ಪ್ರಶ್ನೆ ಮಾಡಿದರೆ, ಅವರನ್ನು ಯಾವುದಾದರೂ ನಿಗಮ, ಮಂಡಳಿಗೆ ಅಧ್ಯಕ್ಷರನ್ನಾಗಿ ಮಾಡಿ ಸುಮ್ಮನಾಗಿಸಲಾಗುತ್ತಿದೆ. ಇದೇ ಸಿದ್ದರಾಮಯ್ಯನವರ ಬಳಿ ಇರುವ ಅಸ್ತ್ರ.

ಆರ್.ಅಶೋಕ, ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 20-2-2000

• ಕಾರವಾರ ಶಾಸಕ ಅಸ್ನೋಟಿಕರ್ ಗುಂಡೇಟಿಗೆ ಬಲಿ

ಕಾರವಾರ, ಫೆ. 19– ಇಲ್ಲಿಯ ಶಾಸಕ (ಕಾಂಗ್ರೆಸ್) ವಸಂತ ಅಸ್ನೋಟಿಕರ್ (47) ಅವರು ಇಂದು ರಾತ್ರಿ ದುಷ್ಕರ್ಮಿಗಳ ಗುಂಡೇಟಿಗೆ ಬಲಿಯಾದರು. ಅವರ ಪತ್ನಿ, ಪುತ್ರಿ ಹಾಗೂ ಪುತ್ರನನ್ನು ಆಗಲಿದ್ದಾರೆ.

ಮೊನ್ನೆಯಷ್ಟೆ ಅವರ ಮಗಳ ಮದುವೆ ಮುಂಬೈನಲ್ಲಿ ನಡೆದಿದ್ದು, ನಾಳೆ (ಫೆ.20ರಂದು) ಕಾರವಾರದ ದೈವಜ್ಞ ಕಲ್ಯಾಣ ಮಂಟಪದಲ್ಲಿ ಮದುವೆಯ ಔತಣ ಕೂಟವಿತ್ತು. ಈ ಸಂಬಂಧ ಅವರು, ಧೋಬಿ ಘಾಟ್ ರಸ್ತೆಯಲ್ಲಿರುವ ಕಲ್ಯಾಣ ಮಂಟಪದ ಎದುರು ನಿಂತಿದ್ದಾಗ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ರಾತ್ರಿ 8.30ರ ಸುಮಾರಿಗೆ ಗುಂಡು ಹಾರಿಸಿ ಪರಾರಿಯಾದರು.

'ಇವರೊಂದಿಗೆ ಇದ್ದ ಇವರ ಬೆಂಬಲಿಗ, ನಗರಸಭೆ ಸದಸ್ಯ ಗಣಪತಿ ಉಳ್ವೇಕರ ಎಂಬುವವರಿಗೂ ಗುಂಡೇಟಿನಿಂದ ಗಾಯವಾಗಿದೆ.

• ಪಂಜಾಬ್ ಮೇಲ್‌ನಲ್ಲಿ ಬೆಂಕಿ: 18 ಸಾವು

ಮುಂಬೈ, ಫೆ. 19 (ಪಿಟಿಐ, ಯುಎನ್‌ಐ)– ಜಲಗಾಂವ್ ಜಿಲ್ಲೆಯ ದುಷ್ಕಲ್ ಮತ್ತು ಸಾವದ ರೈಲು ನಿಲ್ದಾಣಗಳ ನಡುವೆ ಇಂದು ಮುಂಜಾನೆ ಚಲಿಸುತ್ತಿದ್ದ ಪಂಜಾಬ್ ಮೇಲ್ ರೈಲಿನಲ್ಲಿ ಸಂಭವಿಸಿದ ಭೀಕರ ಅಗ್ನಿ ಅನಾಹುತದಲ್ಲಿ 18 ಮಂದಿ ಸತ್ತು 20 ಮಂದಿ ಗಾಯಗೊಂಡಿದ್ದಾರೆ.

ಮೂರು ಅಂತಸ್ತಿನ ಬರ್ತ್‌ಗಳಿರುವ 8ನೇ ಬೋಗಿಯಲ್ಲಿ ಮುಂಜಾನೆ 3.30ರ ವೇಳೆಗೆ ಮೊದಲು ಬೆಂಕಿ ಕಾಣಿಸಿಕೊಂಡು, ಕ್ಷಣಮಾತ್ರದಲ್ಲಿ ಇತರ ಐದು ಬೋಗಿಗಳಿಗೆ ವ್ಯಾಪಿಸಿತು. ಇದರಿಂದ ಈ ಸಾವು–ನೋವು ಸಂಭವಿಸಿತು.

ಬೆಂಕಿ ಮೊದಲು ಕಾಣಿಸಿಕೊಂಡ ಬೋಗಿಯಲ್ಲಿ ಕೆಲವು ಪ್ರಯಾಣಿಕರು ಮದ್ಯಪಾನವನ್ನೂ ಧೂಮಪಾನವನ್ನೂ ಮಾಡುತ್ತಿದ್ದರು. ಅವರು ಸೇದಿ ಎಸೆದ ಸಿಗರೇಟಿನ ತುಂಡುಗಳಿಂದಲೇ ಬೆಂಕಿ ಹತ್ತಿ ಕೊಂಡಿರಬೇಕು ಎಂದು ಪ್ರತ್ಯಕ್ಷದರ್ಶಿಗಳನ್ನು ಉಲ್ಲೇಖಿಸಿ ಮೂಲಗಳು ತಿಳಿಸಿವೆ.

ಬೆಂಕಿ ಅಕಸ್ಮಿಕವೇ ಅಥವಾ ದುಷ್ಕರ್ಮಿಗಳ ಕೃತ್ಯ ಅಡಗಿದೆ ಎಂಬುದು ತನಿಖೆಯಿಂದಷ್ಟೇ ಗೊತ್ತಾಗಲಿದೆಯೆಂದು ಅಧಿಕಾರಿಗಳು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 20-2-1975

• ಅರಸು ಶುಕ್ರವಾರ ವಾಪಸ್ ವಿಶ್ವಾಸದ ಬಗ್ಗೆ ಊಹಾಪೋಹ

ಬೆಂಗಳೂರು, ಫೆ. 19– ದೆಹಲಿಯಿಂದ ಮುಖ್ಯಮಂತ್ರಿ ಅರಸರವರು ಹಿಂತಿರುಗುವುದು ಕಳೆದ ಮೂರು ದಿನಗಳಿಂದ 'ಇಂದು, ನಾಳೆ' ಆಗುತ್ತಾ, ಈಗ 'ನಾಡಿದ್ದು' ಆಗಿದೆ.


ಕಾವೇರಿ ಬಗ್ಗೆ ಮಾತುಕತೆಗಾಗಿ ಕಳೆದ ಶುಕ್ರವಾರ ದೆಹಲಿಗೆ ಹೋದ ಅರಸು ಅವರು ಮೊದಲಿನ ಕಾರ್ಯಕ್ರಮದಂತೆ ಸೋಮವಾರ ಹಿಂತಿರುಗಬೇಕಾಗಿತ್ತು.

ಇಂದು ಅಧಿಕಾರಿಗಳಿಂದ ತಿಳಿದು ಬಂದಿರುವಂತೆ, 'ಕೊಂಚ ಅಸ್ವಸ್ಥರಾಗಿದ್ದ' ಫೆ. 21ರಂದು ಹಿಂತಿರುಗುವರು.

ತಮ್ಮ ದೆಹಲಿ ಭೇಟಿಯ ಅವಧಿಯನ್ನು ಅರಸು ಅವರು ವಿಸ್ತರಿಸುತ್ತಿರುವುದು ಇಲ್ಲಿನ ರಾಜಕೀಯ ವಲಯದಲ್ಲಿ ನಾನಾ ರೀತಿಯ ಊಹಾಪೋಹಗಳಿಗೆ ಎಡೆ ಮಾಡಿಕೊಟ್ಟಿದೆ. ಮಂತ್ರಿಮಂಡಲದಲ್ಲಿ ಪ್ರಮುಖ ಬದಲಾವಣೆಗಳು ಆಗುವುದರಲ್ಲಿದ್ದು, ಆ ಸಂಬಂಧ ಪ್ರಧಾನಿಯೊಡನೆ ಸಮಾಲೋಚನೆಗಾಗಿ ದೆಹಲಿಯಲ್ಲಿದ್ದಾರೆ ಎಂಬುದೂ ಹಬ್ಬಿರುವ ವದಂತಿಗಳಲ್ಲಿ ಒಂದು.

ಘೋಷಣೆಗಳಿಂದ ಜನರನ್ನು ಆಕರ್ಷಿಸುವ ಆಧುನಿಕ ರಾಜಕೀಯ ಕಿಂದರಿ ಜೋಗಿ!

ಸಮ್ಮೋಹಗೊಳಿಸುವ 'ಕಿಂದರಿ' ರಾಗ



ವಿಶ್ಲೇಷಣೆ

ಪ್ರಿಯಾಂಕ್ ಖರ್ಗೆ

ರಾಬರ್ಟ್ ಬ್ರೌನಿಂಗ್ ಅವರ 'ದಿ ಪೈಡ್ ಪೈಪರ್ ಆಫ್ ಹ್ಯಾಮ್ಲಿನ್' ಎಂಬ ಕವಿತೆಯನ್ನು ಕವಿ ಕುವೆಂಪು 'ಬೊಮ್ಮನಹಳ್ಳಿ ಕಿಂದರಿ ಜೋಗಿ' ಎಂಬ ಹೆಸರಿನಲ್ಲಿ ಭಾವಾನುವಾದ ಮಾಡಿದ್ದಾರೆ. ಈ ಕಿಂದರಿ ಜೋಗಿಯು ಸುಮಧುರ ರಾಗದಲ್ಲಿ ಕಿಂದರಿಯನ್ನು ಬಾರಿಸುತ್ತಾ ಇಲಿಗಳು ತನ್ನನ್ನು ಹಿಂಬಾಲಿಸುವಂತೆ ಮಾಡುತ್ತಾನೆ. ಹಾಗೇ ಅವುಗಳನ್ನು ಹೊಳೆಯತ್ತ ಕರೆದೊಯ್ದು ಅವು ಅಲ್ಲಿ ಮುಳುಗುವಂತೆ ಮಾಡುತ್ತಾನೆ. ಪ್ರಸ್ತುತ, ಇಡೀ ದೇಶವೇ ಬೊಮ್ಮನಹಳ್ಳಿಯಂತೆ ಆಗಿದ್ದು, ಜನರೆಲ್ಲರೂ ಕಿಂದರಿ ರಾಗದ ಅಮಲಿನಲ್ಲಿ ಪ್ರಪಾತದೆಡೆಗೆ ಹೆಜ್ಜೆ ಹಾಕುತ್ತಿದ್ದಾರೆ.

ನರೇಂದ್ರ ಮೋದಿ ಅವರು 2014ರಲ್ಲಿ ಪ್ರಧಾನಿಯಾಗಿ ಅಧಿಕಾರಕ್ಕೆ ಬಂದ ಕ್ಷಣದಿಂದ, ಸಾರ್ವಜನಿಕರನ್ನು ಸಮ್ಮೋಹಗೊಳಿಸುವ ಬಗೆಬಗೆಯ ಘೋಷಣೆಗಳ ಮೂಲಕ ಇಂಪಾದ ಕಿಂದರಿ ನಾದ ನುಡಿಸುತ್ತಿದ್ದಾರೆ. ಆಧುನಿಕ ರಾಜಕೀಯ ಕಿಂದರಿ ಜೋಗಿಯಂತೆ ಲಕ್ಷಾಂತರ ಜನರನ್ನು ತಮ್ಮ ಹಿಂದೆ ಕರೆದೊಯ್ಯುತ್ತಿದ್ದಾರೆ. ಯಾವುದೇ ಚುನಾವಣೆ, ಆರ್ಥಿಕ ಬಿಕ್ಕಟ್ಟು ಅಥವಾ ಆಡಳಿತ ವೈಫಲ್ಯವನ್ನು ಹೊಣೆಗಾರಿಕೆಯಿಂದ ಎದುರಿಸದೆ, ಬರೀ ಹೊಸ ಹೊಸ ಘೋಷಣೆಗಳಿಂದ ಜನರ ದಿಕ್ಕು ತಪ್ಪಿಸಿದ್ದಾರೆ.

ವಾಸ್ತವ ಸ್ಥಿತಿ ಹದಗೆಟ್ಟಿರುವಾಗ ಅಮೂರ್ತ ಭವಿಷ್ಯದ ಬಗ್ಗೆ ಭರವಸೆ ನೀಡುವ 'ಅಚ್ಛೇ ದಿನ್', 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್', 'ಆತ್ಮನಿರ್ಭರ ಭಾರತ', 'ಅಮೃತಕಾಲ', 'ವಿಕಸಿತ ಭಾರತ' ಸೇರಿದಂತೆ ನವರಾಗಗಳನ್ನು ಅವರು ನುಡಿಸಿದ್ದಾರೆ. ಆದರೆ, ಆ ಮಹಾನ್ ಪದಗಳು ನೀತಿ ಮಾರ್ಗಸೂಚಿಯಾಗದೆ, ಜನರ ಅತೃಪ್ತಿಯನ್ನು ಮರೆಮಾಚಿ, ಅವರನ್ನು ಹೋರಾಟದ ಮನೋಭಾವದಿಂದ ದೂರವಿರಿಸಲು ವಿನ್ಯಾಸಗೊಳಿಸಲಾದ ಸಮ್ಮೋಹನ ತಂತ್ರಗಳಂತೆ ಕಾರ್ಯನಿರ್ವಹಿಸಿವೆ.

ದೇಶವು 2020- 21ರಲ್ಲಿ ಕೋವಿಡ್ ಸಾಂಕ್ರಾಮಿಕದ ಪರಿಣಾಮಗಳನ್ನು ಎದುರಿಸುತ್ತಿದ್ದಾಗ, ಮೋದಿಯವರ ಕಿಂದರಿಯು ಬೇರೆ ರಾಗದತ್ತ ಹೊರಳಿತು. ಭಾರತವು ಸ್ವಾತಂತ್ರ್ಯದ ಶತಮಾನೋತ್ಸವದತ್ತ ಸಾಗುವ ಮುಂದಿನ 25 ವರ್ಷಗಳ 'ಅಮೃತಕಾಲ'ದ ಬಗ್ಗೆ ಅವರು ಮಾತನಾಡಿದರು. ಅದೊಂದು ಜಾಣತನದ ತಂತ್ರವಾಗಿತ್ತು. ವೈಫಲ್ಯಗಳ ದುಷ್ಪರಿಣಾಮಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವಲ್ಲಿ ಅವರು ಯಶಸ್ವಿಯಾದರು. ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಕೇಂದ್ರ ಸರ್ಕಾರದ ವಶೀಕರಣ ತಂತ್ರವಾದ 'ಥಾಲಿನಾಮಿಕ್ಸ್'ನಿಂದಾಗಿ ಥಾಲಿಗೆ (ಒಂದು ತಟ್ಟೆ ಊಟ) ಆಗುವ ಸರಾಸರಿ ವೆಚ್ಚವು ಈ ಒಂದು ದಶಕದಲ್ಲಿ ಶೇ 50ರಷ್ಟು ಹೆಚ್ಚಾಗಿದೆ. ವಸತಿ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸೇವಾ ಸಂಬಂಧಿತ ಹಣದುಬ್ಬರ ಏರುತ್ತಲೇ ಇದೆ. ವಸತಿ ಕ್ಷೇತ್ರದಲ್ಲಿ ಬಾಡಿಗೆ ದರವು ಶೇ 12ರಷ್ಟು ಏರಿಕೆಯಾಗಿದೆ. ಆರೋಗ್ಯ ವೆಚ್ಚ ಶೇ 6.5ರಷ್ಟು ಹೆಚ್ಚಾಗಿದೆ. ಸೇವಾ ವಲಯದ ಬೆಳವಣಿಗೆಯು ಇದೇ ಜನವರಿಯಲ್ಲಿ ಎರಡು ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ. ಭಾರತದ ಸೇವಾ ವಲಯದ ಖರೀದಿ ಸಾಮರ್ಥ್ಯದ ಸೂಚ್ಯಂಕ (ಪಿಎಂಐ) ಇಳಿದಿದೆ. ಮೋದಿಯವರ ಭ್ರಮಾತ್ಮಕ ಅಮೃತಕಾಲದತ್ತ ಸಾಗುತ್ತಿರುವ ಭಾರತದ ಈ ಸಂದರ್ಭವು ಅಹಿತಕರ ಹಾಗೂ ಕಳವಳಕಾರಿಯಾಗಿದೆ.

2047ರ ವೇಳೆಗೆ 30 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧಿಸುತ್ತೇವೆ ಎಂಬ ಹಗಲುಗನಸಿನ ವ್ಯಾಪಾರ ಶುರುವಾಗಿದೆ. ಆದರೆ ಇದಕ್ಕೆ ಸ್ಪಷ್ಟ ಮಾರ್ಗಸೂಚಿ ಇಲ್ಲ. ಜಿಡಿಪಿ ಬೆಳವಣಿಗೆಯ ನೈಜ ದರ 2023- 24ರಲ್ಲಿ ಶೇ 8.2ರಿಂದ ಶೇ 6.4ಕ್ಕೆ ಇಳಿದಿದೆ. ಇತ್ತೀಚೆಗೆ ಮಂಡಿಸಲಾದ ಬಜೆಟ್‌ನಲ್ಲಿ, ವಿತ್ತೀಯ ಕೊರತೆಯು ಶೇಕಡ 4.9ರಿಂದ 4.8ಕ್ಕೆ ಸುಧಾರಿಸಿದೆ ಎಂದು ಹೇಳಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಜನರ ದಿಕ್ಕು ತಪ್ಪಿಸಿದ್ದಾರೆ. ವಾಸ್ತವದಲ್ಲಿ ಬಂಡವಾಳ ವೆಚ್ಚವನ್ನು ಕಡಿತಗೊಳಿಸುವ ಮೂಲಕ ಇದನ್ನು ಸಾಧಿಸುವ ತಂತ್ರ ಅವರದ್ದಾಗಿದೆ.

ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ, ಕೃಷಿ, ಗ್ರಾಮೀಣ ಮತ್ತು ನಗರಾಭಿವೃದ್ಧಿಯ ಅನುದಾನಗಳಲ್ಲಿ ಒಟ್ಟಾರೆ ₹1,83,569 ಕೋಟಿ ಮೊತ್ತದ ಗಮನಾರ್ಹ ಕಡಿತ ಮಾಡಲಾಗಿದೆ. ಶೂನ್ಯ ಬಡತನ, ಗುಣಮಟ್ಟದ ಶಿಕ್ಷಣ, ಸಮಗ್ರ ಆರೋಗ್ಯ ರಕ್ಷಣೆ, ಅರ್ಥಪೂರ್ಣ ಉದ್ಯೋಗ, ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಸೇರ್ಪಡೆ ಮತ್ತು ರೈತರ ಯೋಗಕ್ಷೇಮ ಈ ಆರು ತತ್ವಗಳನ್ನು ನಿರ್ಮಲಾ ಅವರು 'ವಿಕಸಿತ ಭಾರತ'ದ ಪರಿಕಲ್ಪನೆಯಡಿ ಪ್ರಸ್ತಾಪಿಸಿದ್ದರು. ಆದರೆ ಬಜೆಟ್‌ನಲ್ಲಿ ಮಾಡಿರುವ ಅನುದಾನದ ಹಂಚಿಕೆ ಮಾತ್ರ ಅವರ ಘೋಷಣೆಗಳ ವಿರುದ್ಧ ದಿಕ್ಕಿನಲ್ಲಿದೆ.

ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಗೆ ₹3,905 ಕೋಟಿ ಹಾಗೂ ಫಸಲ್ ಬಿಮಾ ಯೋಜನೆಯಡಿ ₹3,621 ಕೋಟಿ ಕಡಿತಗೊಳಿಸಲಾಗಿದೆ. ಲಕ್ಷಾಂತರ ಜನರ ಜೀವನಾಡಿಯಾಗಿ ಕಾರ್ಯನಿರ್ವಹಿಸುವ 'ನರೇಗಾ'ದ ಅನುದಾನವು ಹಿಂದಿನ ವರ್ಷಕ್ಕಿಂತ ಹೆಚ್ಚಾಗದೆ ₹86,000 ಕೋಟಿಯಷ್ಟೇ ಇದೆ. ಇದರಲ್ಲಿ ಶೇ 20ರಷ್ಟು ಹಿಂದಿನ ವರ್ಷಗಳ ಬಾಕಿಗಳಿಗೇ ಮೀಸಲಾಗಿದೆ. ಶಿಕ್ಷಣ, ಆರೋಗ್ಯ ಮತ್ತು ಸಮಾಜ ಕಲ್ಯಾಣಕ್ಕೆ ಸಂಬಂಧಿಸಿದ ಅನುದಾನದ ಪ್ರಮಾಣ ಕಡಿಮೆಯಾಗಿದೆ. ಕೈಗಾರಿಕಾ ಪುನರುಜ್ಜೀವನದ ಉದ್ದೇಶದಿಂದ ರೂಪಿಸಿದ ಬೃಹತ್ ಯೋಜನೆಗಳಾದ ಮೇಕ್ ಇನ್ ಇಂಡಿಯಾ, ಸ್ಟಾರ್ಟ್‌ಅಪ್ ಇಂಡಿಯಾ, ಸ್ಕಿಲ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ಬಹುತೇಕ ಘೋಷಣೆಗಳಾಗಿಯೇ ಉಳಿದಿವೆ. ಜಿಡಿಪಿಯ ಶೇ 25ರಷ್ಟು ಪಾಲನ್ನು ಹೊಂದಿರಬೇಕಾದ ತಯಾರಿಕಾ ವಲಯದ ಪ್ರಗತಿಯು 2014ರಲ್ಲಿದ್ದ ಶೇ 15.3ರಿಂದ ಶೇ 12.6ಕ್ಕೆ ಇಳಿದಿದೆ. ಇದು 60 ವರ್ಷಗಳಲ್ಲಿ ಅತ್ಯಂತ ಕನಿಷ್ಠ ಪ್ರಮಾಣ. 10 ಕೋಟಿ ಉದ್ಯೋಗ ಸೃಷ್ಟಿಸುವುದು ಸರ್ಕಾರದ ಭರವಸೆ ಆಗಿತ್ತು. ಆದರೆ 2017- 21ರ ನಡುವೆ 2.4 ಕೋಟಿ ಉದ್ಯೋಗ ನಷ್ಟ ಉಂಟಾಗಿದೆ. ಏತನ್ಮಧ್ಯೆ, ಭಾರತದ ಆರ್ಥಿಕತೆಯ ಬೆನ್ನೆಲುಬಾಗಿರುವ ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ವಲಯದಲ್ಲಿ 2020ರಿಂದ 61,000ಕ್ಕೂ ಹೆಚ್ಚು ಕಂಪನಿಗಳು ಬಾಗಿಲು ಮುಚ್ಚಿವೆ.



ಸ್ಟಾರ್ಟ್‌ಅಪ್ ಇಂಡಿಯಾ ಸೀಡ್ ಫಂಡ್ ಯೋಜನೆಯಡಿ ₹20,000 ಕೋಟಿ ನೆರವಿನ ಭರವಸೆಯ ಹೊರತಾಗಿಯೂ ಬರೀ ₹454 ಕೋಟಿ ವಿತರಿಸಲಾಗಿದೆ. ಮಾನ್ಯತೆ ಪಡೆದ ಶೇ 1.58ರಷ್ಟು ನವೋದ್ಯಮಗಳು ಮಾತ್ರ ಸೀಡ್ ಫಂಡ್ ಪ್ರಯೋಜನ ಪಡೆದಿವೆ. ಸ್ಕಿಲ್ ಇಂಡಿಯಾ ಯೋಜನೆಯಡಿ 2015ರಿಂದ ತರಬೇತಿ ಪಡೆದ 1 ಕೋಟಿ ಜನರ ಪೈಕಿ ಶೇ 20ರಷ್ಟು ಮಂದಿ ಮಾತ್ರ ಉದ್ಯೋಗ ಕಂಡುಕೊಂಡಿದ್ದಾರೆ. ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಲೇ ಇದೆ. ಭಾರತದಲ್ಲಿ ವಿದೇಶಿ ಹೂಡಿಕೆಯು 12 ವರ್ಷಗಳ ಕನಿಷ್ಠ ಮಟ್ಟವನ್ನು ಮುಟ್ಟಿದೆ.

ಈ ಒಂದು ದಶಕದ ಅವಧಿಯಲ್ಲಿ ಸುಮಾರು 20 ಲಕ್ಷ ಭಾರತೀಯರು ಸ್ವಯಂಪ್ರೇರಣೆಯಿಂದ ತಮ್ಮ ಪೌರತ್ವವನ್ನು ತ್ಯಜಿಸಿದ್ದಾರೆ. ಹಿಂದಿನ ಐದು ವರ್ಷಗಳಲ್ಲಿ 50,000ಕ್ಕೂ ಹೆಚ್ಚು ಉದ್ಯಮಿಗಳು ಬೇಸತ್ತು ದೇಶವನ್ನು ತೊರೆದಿದ್ದಾರೆ. 2023– 24ರ ಅವಧಿಯಲ್ಲಿ, ಉದ್ಯೋಗ ಅರಸುವ ಪ್ರಯತ್ನದಲ್ಲಿ ಅಮೆರಿಕದ ಗಡಿಯನ್ನು ದಾಟಲು ಪ್ರಯತ್ನಿಸುತ್ತಿದ್ದಾಗ, ಗಂಟೆಗೆ ಸುಮಾರು 10 ಭಾರತೀಯರನ್ನು ಬಂಧಿಸಲಾಗಿದೆ. ದೇಶ ತೊರೆಯುವ ಯುವ ಸಮುದಾಯದ ಈ ಪ್ರಯತ್ನವು ಭಾರತದಲ್ಲಿ ಆವರಿಸಿರುವ ಹತಾಶ ಸ್ಥಿತಿಯನ್ನು ಸೂಚಿಸುತ್ತದೆ.


ಭಾರತದ ಅತಿದೊಡ್ಡ ಭ್ರಷ್ಟಾಚಾರ ಹಗರಣವೆಂದರೆ ಅಪಾರದರ್ಶಕ ಚುನಾವಣಾ ಬಾಂಡ್. ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ತನಿಖೆಯನ್ನು ಎದುರಿಸುತ್ತಿದ್ದ, ವಿರೋಧ ಪಕ್ಷಗಳಿಗೆ ಸೇರಿದ 23 ಮಂದಿ ನಾಯಕರು ಬಿಜೆಪಿ ಸೇರಿದ ನಂತರ ತನಿಖೆಯಿಂದ ವಿನಾಯಿತಿ ಪಡೆದಿದ್ದಾರೆ. 2024ರ ಜಾಗತಿಕ ಭ್ರಷ್ಟಾಚಾರ ಗ್ರಹಿಕೆಯ ಸೂಚ್ಯಂಕದಲ್ಲಿ (ಸಿಪಿಐ) ಭಾರತವು 180 ದೇಶಗಳ ಪೈಕಿ 96ನೇ ಸ್ಥಾನದಲ್ಲಿದೆ. ಇದು ಪಾರದರ್ಶಕತೆ ಮತ್ತು ಹೊಣೆಗಾರಿಕೆಯಲ್ಲಿನ ಲೋಪವನ್ನು ಸೂಚಿಸುತ್ತದೆ.

ಇದಲ್ಲದೆ ಕೇಂದ್ರ ಸರ್ಕಾರವು ರಾಜ್ಯಗಳ ಹಕ್ಕುಗಳನ್ನು ಮೊಟಕುಗೊಳಿಸುತ್ತಿದೆ. ಕರ್ನಾಟಕವು ಕೇಂದ್ರಕ್ಕೆ ಅತಿ ಹೆಚ್ಚು ತೆರಿಗೆ ಕೊಡುವ ರಾಜ್ಯವಾಗಿದ್ದರೂ ತೆರಿಗೆ ಹಂಚಿಕೆಯಲ್ಲಿ ಅದಕ್ಕೆ ಸಮರ್ಪಕವಾದ ಪಾಲು ಸಿಗುತ್ತಿಲ್ಲ. ಅದನ್ನು ಕರ್ನಾಟಕ ವಿರೋಧಿಸಿದಾಗ 'ಸಣ್ಣತನ' ಎಂದು ತಳ್ಳಿಹಾಕಲಾಯಿತು. ಪ್ರಜಾಪ್ರಭುತ್ವದ ಆಧಾರ ಸ್ತಂಭ ಆಗಿದ್ದ ಒಕ್ಕೂಟ ವ್ಯವಸ್ಥೆಯು ಕೇಂದ್ರೀಕೃತ ನಿಯಂತ್ರಣ ವ್ಯವಸ್ಥೆಯಿಂದಾಗಿ ದುರ್ಬಲವಾಗುತ್ತಿದೆ. ಅಪ್ರಸ್ತುತವಾದ ಬೃಹತ್ ಘೋಷಣೆಗಳಿಂದ ಜನರನ್ನು ಆಕರ್ಷಿಸುವ ಮೂಲಕ ಕಿಂದರಿ ಜೋಗಿಯ ಪಾತ್ರವನ್ನು ಮೋದಿ ಅತ್ಯುತ್ತಮವಾಗಿ ನಿರ್ವಹಿಸಿದ್ದಾರೆ. ಇಂತಹ ಘೋಷಣೆ ಗಳಿಂದ ನಾವು ಎಷ್ಟು ಕಾಲ ಮಂತ್ರಮುಗ್ಧರಾಗಿರುತ್ತೇವೆಯೋ ಅಷ್ಟರಮಟ್ಟಿಗೆ ನಾವು ಪ್ರಪಾತದ ಅಂಚಿನತ್ತ ಸಾಗುತ್ತೇವೆ.

ಕಿಂದರಿ ರಾಗ ಆಕರ್ಷಕವಾಗಿದೆ. ಆದರೆ ಅದು ಸಮೂಹ ಸಮ್ಮೋಹನಕ್ಕಷ್ಟೇ ಸೀಮಿತವಾಗಿದೆ. ತಡ ಆಗುವ ಮುನ್ನ ಭಾರತೀಯರು ಈ ಭ್ರಮೆಯಿಂದ ಮುಕ್ತರಾಗಬೇಕಿರುವುದು ಇಂದಿನ ತುರ್ತು ಅಗತ್ಯ.

ಲೇಖಕ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ

ಚುರುಮುರಿ



ಮರೆಯುವ ಮತದಾರ!

• **ಗುರು ಪಿ.ಎಸ್.**

'ಏನ್ ಸರ್, ಅಮೆರಿಕದಿಂದ ಯಾವಾಗ ಬಂದ್ರಿ?' ಬಹಳ ದಿನಗಳ ನಂತರ ವಿಜಿಯನ್ನು ಕಂಡ ಖುಷಿಯಲ್ಲಿ ಕೇಳಿದ ಮುದ್ದಣ್ಣ.

'ನಾನು ಬರಲಿಲ್ಲ, ಅವರೇ ಕಳಿಸಿದರು' ಬೇಸರದಲ್ಲಿ ಹೇಳಿದ ವಿಜಿ.

'ಹೋಗಲಿ ಬಿಡಿ ಸರ್, ನಮ್ ದೇಶವೇ ಚೆನ್ನ. ಇನ್ಮೇಲೆ ಇಲ್ಲೇ ಇದ್ದುಬಿಡಿ' ಎಂದ ಮುದ್ದಣ್ಣ ಮುಂದುವರಿದು, 'ಅದ್ ಸರಿ, ನಮ್ ಬೆಂಗಳೂರಿಗೆ ಬಂದಿಳಿದ ತಕ್ಷಣ ಏನನ್ನಿಸ್ತು?' ಎಂದು ಕೇಳಿದ.

'ಒಂದೆರಡು ದಿನ ನಮ್ಮ ಮೆಟ್ರೊ ರೈಲಿನಲ್ಲಿ ಓಡಾಡಿದೆ. ಟಿಕೆಟ್ ರೇಟ್ ನೋಡಿದ ನಂತರ, ಒಂದ್ ತಿಂಗಳು ಮೆಟ್ರೊ ರೈಲಿನಲ್ಲಿ ಓಡಾಡುವ ಖರ್ಚು ಉಳಿಸಿದರೆ, ಮತ್ತೊಮ್ಮೆ ಫ್ಲೈಟ್‌ನಲ್ಲಿ ಅಮೆರಿಕಕ್ಕೇ ಹೋಗಬಹುದು ಅನ್ನಿಸ್ತು' ಸಿಟ್ಟಿನಲ್ಲಿ ಹೇಳಿದ.

'ನಮ್ಮ ಮೆಟ್ರೊ ಅಂದ ತಕ್ಷಣ ನೀವು, ನಿಮ್ಮ ಮೆಟ್ರೊ ಅಂದ್ಕೊಂಡ್ರಿ ಅನಿಸುತ್ತೆ, ನಮ್ಮ ಮೆಟ್ರೊ ಅಂದ್ರೆ, ಅದು ರಾಜಕಾರಣಿಗಳ ಮೆಟ್ರೊ ಅಂತ ಅರ್ಥ' ನಕ್ಕ ಮುದ್ದಣ್ಣ.

'ಈ ಟಿಕೆಟ್ ರೇಟ್ ಇಷ್ಟೊಂದ್ ಜಾಸ್ತಿ ಮಾಡಿದವರಾದರೂ ಯಾರು?'

'ಅವರು ಅಂತ ಇವರು ಹೇಳ್ತಾರೆ, ಇವರು ಅಂತ ಅವರು ಹೇಳ್ತಾರೆ, ಎಲ್ಲರೂ ಸೇರಿ ನಮ್ಮನ್ನ ಮಂಗ ಮಾಡ್ತಿದ್ದಾರೆ' ಸಿಟ್ಟಿನಲ್ಲಿ ಹೇಳಿದ ಮುದ್ದಣ್ಣ.

'ಇವರಿಗೆಲ್ಲ ಎಲೆಕ್ಷನ್ ಬಂದಾಗ ಪಾಠ ಕಲಿಸಬೇಕು'.

'ಹೇಗ್ ಪಾಠ ಕಲಿಸ್ತೀರಿ ಸರ್?'

'ವೋಟ್ ಕೇಳಾಕೆ ಬಂದಾಗ ನಿಮಗೇ ಹಾಕ್ತೀವಿ ಅಂತ ಎರಡು ಪಾರ್ಟಿಯವರಿಗೂ ಹೇಳೋದು, ಮೂರನೆಯವರಿಗೆ ಮತ ಹಾಕೋದು' ಸೇಡು ತೀರಿಸಿಕೊಳ್ಳುವಂತೆ ಹೇಳಿದ ವಿಜಿ.

ಜೋರಾಗಿ ನಕ್ಕ ಮುದ್ದಣ್ಣ, 'ಪಬ್ಲಿಕ್ ಮೆಮೊರಿ ವೆರಿ ಪೂರ್ ಸರ್' ಎಂದವನೇ, 'ಚೀಫ್ ಎಲೆಕ್ಷನ್ ಕಮಿಷನರ್ ಅವರನ್ನೇ ಮಧ್ಯರಾತ್ರಿಯಲ್ಲಿ ಆಯ್ಕೆ ಮಾಡ್ತಾರಂತೆ, ಇನ್ನು ಎಲೆಕ್ಷನ್...'

'ಏಯ್ ಚುಪ್!' ಎಂದು ಮುದ್ದಣ್ಣನ ಬಾಯಿ ಮುಚ್ಚಿದ ವಿಜಿ.

ಸಂಗತ

ವೆಬ್‌ಕಾಸ್ಟಿಂಗ್: ಅಪನಂಬಿಕೆಗೆ ಕೈಗನ್ನಡಿ

ಪರೀಕ್ಷೆಯಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಅಳವಡಿಸುವುದು ಹೆಗ್ಗಳಿಕೆ ಅಲ್ಲ, ಅದು ನಮ್ಮ ಸೋಲು

• **ಸದಾಶಿವ್ ಸೊರಟೂರು**

ಇದು, ಮೂರು ವರ್ಷದ ಹಿಂದಿನ ಪ್ರಕರಣ. ವಿದ್ಯಾರ್ಥಿನಿಯೊಬ್ಬಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಿದ್ದಳು. ಆ ಕೊಠಡಿಗೆ ಬಂದ ವ್ಯಕ್ತಿಯೊಬ್ಬರು ಅವಳಿಗೆ ಉತ್ತರ ಹೇಳಿಕೊಡಲು ಮುಂದಾದರು. ಆಗ ಆ ಮಗು ಆಡಿದ ಮಾತು, ಕೇಳಿದವರು ಬೆಕ್ಕಸ ಬೆರಗಾಗುವಂತೆ ಇತ್ತು. 'ನನಗೆ ನಿಮ್ಮ ಉತ್ತರದ ಅವಶ್ಯಕತೆ ಇಲ್ಲ. ನಾನು ಯಾರಿಂದಲೂ ಹೇಳಿಸಿಕೊಳ್ಳುವುದಿಲ್ಲ ಮತ್ತು ಯಾರಿಗೂ ಹೇಳಿಕೊಡುವುದಿಲ್ಲ'. ಆ ಮಾತನ್ನು ಇಡೀ ತರಗತಿ ಕೇಳಿಸಿಕೊಂಡಿತ್ತು.

ಎಚ್.ನರಸಿಂಹಯ್ಯ ಅವರು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಪರೀಕ್ಷೆಗೆ ಸಂಬಂಧಿಸಿದಂತೆ ಪ್ರಯೋಗವೊಂದನ್ನುಮಾಡಿದ್ದರು.ಮೇಲ್ವಿಚಾರಕರನ್ನು ನಿಯೋಜಿಸದೆ ಪದವಿ ಪರೀಕ್ಷೆಗಳನ್ನು ಆಯೋಜಿಸಿದ್ದರು. ಇಷ್ಟು ದಿನ ವಿದ್ಯಾರ್ಥಿಗಳು ಸತ್ಯ, ನ್ಯಾಯ, ಪ್ರಾಮಾಣಿಕತೆಯಂತಹ ಮೌಲ್ಯಗಳನ್ನು ತರಗತಿಗಳಲ್ಲಿ ಕಲಿತಿರುತ್ತಾರೆ, ಆದ್ದರಿಂದ ಅವರು ಕಾಪಿ ಮಾಡದೆ ಬರೆಯಬಹುದು ಎಂದು ಯೋಚಿಸಿದ್ದರು. ಆದರೆ ಕೆಲವು ವಿದ್ಯಾರ್ಥಿಗಳು ಕಾಪಿ ಮಾಡಿ ಬರೆದಿದ್ದರು. ಕಲಿತಿದ್ದ ಮೌಲ್ಯಗಳು ಕುಸಿದುಬಿದ್ದಿದ್ದವು.

ನಾವು ಮೊದಲಿನಿಂದಲೂ ಪಬ್ಲಿಕ್ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳನ್ನು ಕಾಯಲು ಮೇಲ್ವಿಚಾರಕರನ್ನಷ್ಟೇ ನೇಮಿಸುತ್ತಿದ್ದೆವು. ಹೋದ ವರ್ಷ ಪರೀಕ್ಷಾ ಕೇಂದ್ರಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆಯ ಮೂಲಕ ಪರೀಕ್ಷೆ ನಡೆಸಲಾಯಿತು. ಈ ವರ್ಷ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಕೃತಕ ಬುದ್ಧಿಮತ್ತೆಯುಳ್ಳ ಕ್ಯಾಮೆರಾಗಳನ್ನು ಅಳವಡಿಸಿ ಪರೀಕ್ಷೆ ನಡೆಸಲು ಯೋಚಿಸಲಾಗಿದೆ. ಎಲ್ಲ ಮಕ್ಕಳೂ ಕಾಪಿ ಮಾಡದೆ ಪರೀಕ್ಷೆಯನ್ನು ಎದುರಿಸಬೇಕು, ಅದೇ ಸರಿಯಾದ ಮೌಲ್ಯಮಾಪನ ಕ್ರಮ, ಮಕ್ಕಳ ನಿಖರವಾದ ಕಲಿಕೆಯನ್ನು ಇದರಿಂದ ಅಳೆಯಲು ಸಾಧ್ಯವಾಗಬಹುದು ಎಂದು ಶಿಕ್ಷಣ ಇಲಾಖೆ ಅಂದಾಜಿಸಿದೆ.

ನಮ್ಮ ವಿದ್ಯಾರ್ಥಿಗಳು ಕಲಿಯುತ್ತಿರುವ ಪಠ್ಯದಲ್ಲಿ ಮೌಲ್ಯಗಳ ಮಹಾಪೂರವೇ ಹರಿಯುತ್ತಿರುತ್ತದೆ. ಮೊದಲಿಗಿಂತ ಈಗ ಬಹಳಷ್ಟು ಮಹಾತ್ಮರ ಜಯಂತಿಗಳನ್ನು ಆಚರಿಸುತ್ತಿದ್ದೇವೆ. ಅವರ ಬದುಕಿನ ಪರಿಚಯವೂ ಆಗುತ್ತಿದೆ. ಇಷ್ಟಾದರೂ ವಿದ್ಯಾರ್ಥಿಗಳು ಉತ್ತೀರ್ಣರಾಗಲು ಯಾಕೆ ಅಡ್ಡಮಾರ್ಗದ ಕಡೆ ಉತ್ಸುಕರಾಗಿರುತ್ತಾರೆ? ಕೆಲವು ಶಿಕ್ಷಕರೂ ಯಾಕೆ ಆ ದಿಸೆಯಲ್ಲೇ ಯೋಚಿಸುತ್ತಾರೆ?

ಮಕ್ಕಳು ಒತ್ತಡದಲ್ಲಿದ್ದಾರೆ. ಆ ಒತ್ತಡವು ಶಿಕ್ಷಕರೂ ಸೇರಿದಂತೆ ಸಮಾಜಕ್ಕೆ ಉತ್ತರ ಕೊಡಬೇಕಾದ ಜವಾಬ್ದಾರಿಯುತ ಸ್ಥಾನದಲ್ಲಿರುವ ಎಲ್ಲರಲ್ಲೂ ಇದೆ. ಹೆಚ್ಚು ಅಂಕ ಬಂದ ವಿದ್ಯಾರ್ಥಿ ಮಾತ್ರವೇ ಬುದ್ಧಿವಂತ, ಇಂತಹದ್ದೊಂದು ಸಾಧನೆಗೆ ಕಾರಣರಾದ ಶಿಕ್ಷಕರು ಮಾತ್ರವೇ ಉತ್ತಮ ಶಿಕ್ಷಕರು ಎಂದು ವ್ಯಾಖ್ಯಾನಿಸಲ್ಪಡುವುದರಿಂದ ಬಹುಶಃ ಈ ಒತ್ತಡ ಸೃಷ್ಟಿಯಾಗಿದೆ, ಪರಸ್ಪರ ಪೈಪೋಟಿ ಉಂಟಾಗಿದೆ.

'ಕದಿಯುವುದು ತಪ್ಪು' ಎನ್ನುವ ಉತ್ತರವನ್ನು ವಿದ್ಯಾರ್ಥಿ ತನ್ನ ಪಕ್ಕದವರಿಂದ ಅಥವಾ ತಾನು ಬರೆದುಕೊಂಡು ಬಂದ ಚೀಟಿಯಿಂದ ಕದ್ದು ನೋಡಿ ಬರೆಯುವುದು ಕಲಿಕೆ ಹೇಗಾಗುತ್ತದೆ? 'ಕದಿಯುವುದು ತಪ್ಪು' ಎನ್ನುವ ಉತ್ತರವನ್ನು ಬರೆಯಲು ಬಾರದೆ, ಪಕ್ಕದಲ್ಲಿ ಅದರ ಉತ್ತರ ಸಿಕ್ಕರೂ ಕದಿಯುವುದು ತಪ್ಪು ಎಂಬುದನ್ನು ಅರಿತುಕೊಂಡು ಸುಮ್ಮನೆ ಕೂತರೆ, ಅದು ತಾನೇ ನಿಜವಾದ ಕಲಿಕೆ?

ನಾವು ಎಂಟನೇ ತರಗತಿಯಲ್ಲಿ ಇದ್ದಾಗ ಶಿಕ್ಷಕರು ನಮಗೊಂದು ಕಿರು ಪರೀಕ್ಷೆ ನೀಡಿದ್ದರು. 'ಇಲ್ಲಿ ಪಾಸು, ಫೇಲ್ ಇರುವುದಿಲ್ಲ. ಅಂಕಗಳೂ ಇರುವುದಿಲ್ಲ. ಸರಿಯಾಗಿ ಬರೆಯದೇ ಇರುವ ಮಕ್ಕಳ ಹೆಸರನ್ನು ತರಗತಿಯಲ್ಲಿ ಹೇಳಿ ಅವಮಾನ ಮಾಡುವುದಿಲ್ಲ. ಎಷ್ಟು ಕಲಿತಿದ್ದೀರೊ ಅಷ್ಟು ಬರೆಯಿರಿ. ಉತ್ತರ ಗೊತ್ತಾಗದೇ ಹೋಗುವುದು ಅವಮಾನ ಎಂದು ಭಾವಿಸಬೇಡಿ. ತಪ್ಪಾದದ್ದನ್ನು ನಾನು ನಿಮಗೆ ಹೇಳಿಕೊಡುವೆ. ನಿಮ್ಮಷ್ಟಕ್ಕೆ ನೀವು ಪ್ರಾಮಾಣಿಕವಾಗಿ ಬರೆಯಿರಿ' ಎಂದು ಹೇಳಿ ಪ್ರಶ್ನೆಪತ್ರಿಕೆ ಕೊಟ್ಟು ಹೋಗಿದ್ದರು. ನಾವು ಯಾರೂ ಕದ್ದು ಬರೆಯಲಿಲ್ಲ. ನಮಗೆ ಗೊತ್ತಿದ್ದುದನ್ನು ಬರೆದಿದ್ದೆವು. ಶಿಕ್ಷಕರಿಗೆ ಖುಷಿಯಾಗಿತ್ತು. ನಂತರ ನಾವು ಹೈಸ್ಕೂಲ್ ಮುಗಿಸುವವರೆಗೂ ಅವರು ಅದೇ ವ್ಯವಸ್ಥೆಯನ್ನು ಮುಂದುವರಿಸಿದ್ದರು.



ವೆಬ್‌ಕಾಸ್ಟಿಂಗ್ ಅಳವಡಿಸುವುದು ಹೆಗ್ಗಳಿಕೆ ಅಲ್ಲ, ಅದು ನಮ್ಮ ಸೋಲು, ನಮ್ಮ ನಡುವೆ ಒಡೆದುಹೋಗಿರುವ ನಂಬಿಕೆ. ಮಕ್ಕಳಿಗೆ ತಮ್ಮ ಬಗ್ಗೆ ತಮಗೇ ನಂಬಿಕೆಯಿಲ್ಲ. ಶಿಕ್ಷಕರು ಮಕ್ಕಳನ್ನು ನಂಬುತ್ತಿಲ್ಲ. ಶಿಕ್ಷಕರನ್ನು ಅಧಿಕಾರಿಗಳು ನಂಬುತ್ತಿಲ್ಲ. ಅಧಿಕಾರಿಗಳನ್ನು ಸಮಾಜ ನಂಬುತ್ತಿಲ್ಲ. ಇದು ನಾವೇ ಹುಟ್ಟುಹಾಕಿರುವ ಅಪನಂಬಿಕೆಯ ವ್ಯವಸ್ಥೆ. ಯಾರು ಇರಲಿ ಇಲ್ಲದೇ ಇರಲಿ ನನ್ನ ಉತ್ತರವನ್ನು ನಾನು ಬರೆಯುವೆ ಅನ್ನುವುದು ನಿಜವಾದ ಕಲಿಕೆ.

ಈಗ ನಾವು ತರಗತಿ ಕೋಣೆಗೆ ಕ್ಯಾಮೆರಾ ಹಾಕಿ ಉತ್ತರ ಬರೆಸಿಕೊಂಡು, ಕೈಯಲ್ಲೊಂದು ಪ್ರಮಾಣ ಪತ್ರವನ್ನು ಕೊಟ್ಟು, ಆಚೆ ಸಮಾಜಕ್ಕೆ ವಿದ್ಯಾರ್ಥಿಯನ್ನು ನೂಕಿಬಿಡಬಹುದು. ಅವನಲ್ಲಿ ಒಳ್ಳೆಯತನವನ್ನು ಕಾಪಿಡಲು ಮತ್ತು ದುರ್ವರ್ತನೆಗಳನ್ನು ನಿಯಂತ್ರಿಸಲು ಸಮಾಜದ ನಡುವೆ ಸದಾ ಒಂದು ಕ್ಯಾಮೆರಾದ ಕಣ್ಗಾವಲಿನಲ್ಲಿ ಅವನನ್ನು ಬಂಧಿಸಿಡಲು ಸಾಧ್ಯವೇ? ಕಲಿಕೆ ಅನ್ನುವುದು ಬದುಕಿನುದ್ದಕ್ಕೂ ಮಗುವಿನ ಕೈ ಹಿಡಿಯಬೇಕಲ್ಲವೇ?

ಕ್ಯಾಮೆರಾ ಇರಲಿ ಇಲ್ಲದೇ ಇರಲಿ, ಕಾಯಲು ಶಿಕ್ಷಕರು ಇರಲಿ ಇಲ್ಲದೇ ಇರಲಿ ತಾನು ಕಲಿತದ್ದನ್ನು ವಿದ್ಯಾರ್ಥಿ ಪ್ರಾಮಾಣಿಕವಾಗಿ ಬರೆಯುವುದು ನಿಜಕ್ಕೂ ಕಲಿಕೆಯ ಮೊದಲ ಗೆಲುವು. ಯಾವ ಅಧಿಕಾರಿ ಕೇಳಲಿ ಬಿಡಲಿ ಪ್ರಾಮಾಣಿಕವಾಗಿ ಕಲಿಸುವುದು ಶಿಕ್ಷಕರ ಮೊದಲ ಬದ್ಧತೆಯಾಗಬೇಕು. ಎಲ್ಲರೂ ಅವರವರ ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡುತ್ತಾ ಹೋದರೆ ಬದಲಾವಣೆ ಎಷ್ಟು ಹೊತ್ತಿನ ಮಾತು?

ವಾಚಕರ ವಾಣಿ

ನೀರಸ ಸ್ಪಂದನ: ನಾನಾ ಕಾರಣ

ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ನಡೆದ ಎರಡು ದಿನಗಳ ರಾಷ್ಟ್ರೀಯ ಸಾಹಿತ್ಯೋತ್ಸವಕ್ಕೆ ವಿದ್ಯಾರ್ಥಿಗಳ ಸ್ಪಂದನ ನೀರಸವಾಗಿತ್ತು ಎಂದು ಆಯೋಜಕರು ಹೇಳಿರುವುದಾಗಿ ವರದಿಯಾಗಿದೆ. ಪುಸ್ತಕ ಬಿಡುಗಡೆ, ವಿಚಾರ ಸಂಕಿರಣದಂತಹ ಕಾರ್ಯಕ್ರಮಗಳು ಎಲ್ಲಿಯೇ ನಡೆಯಲಿ ವಿದ್ಯಾರ್ಥಿಗಳು, ಯುವಪೀಳಿಗೆಯ ಭಾಗವಹಿಸುವಿಕೆ ತೀರಾ ಕಡಿಮೆ ಆಗಿದೆ. ಅಷ್ಟೇ ಏಕೆ, ಶಿಕ್ಷಕರು, ಉಪನ್ಯಾಸಕರು ಕೂಡ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಿಲ್ಲ. ಹೊಸ ವಿಚಾರ, ಚಿಂತನೆಗಳಿಗೆ ತೆರೆದುಕೊಳ್ಳುವುದಿಲ್ಲ.

ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಹೊಸ ವಿಚಾರ, ಚಿಂತನೆಗಳನ್ನು ಪ್ರೇರೇಪಿಸುವಂತಹ ಶೈಕ್ಷಣಿಕ ವಾತಾವರಣ ಇಲ್ಲವಾಗಿರುವುದೂ ಇದಕ್ಕೆ ಒಂದು ಕಾರಣವಾಗಿರಬಹುದು. ವಿದ್ಯಾರ್ಥಿಗಳ ಮೊಬೈಲ್ ಫೋನ್ ಗೀಳು ಗಂಭೀರ ಅಧ್ಯಯನ ಹಾಗೂ ಆಳವಾದ ಚಿಂತನೆಗೆ ಮಿತಿಯಾಗಿ ಪರಿಣಮಿಸಿದೆ. ಬೋಧಕವರ್ಗ ಕೂಡ ಇಂಥ ಕಾರ್ಯಕ್ರಮಗಳಿಂದ ದೂರ ಉಳಿಯುವುದು ಇನ್ನೂ ಶೋಚನೀಯ. ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಕಲಿಕೆಯೇ ಹಿಂದೆ ಸರಿಯುತ್ತಿರುವಾಗ, ಮುಂಬರುವ ದಿನಗಳು ಆಶಾದಾಯಕವಾಗಿ ಇರಬಲ್ಲವೇ ಎಂಬ ಬಗ್ಗೆಯೇ ಅನುಮಾನ ಮೂಡುತ್ತದೆ.

ವೆಂಕಟೇಶ ಮಾಚಕನೂರ, ಧಾರವಾಡ

ಉದ್ಯೋಗ ಮೇಳ: ಅನುಕರಣೀಯ ನಡೆ

'ಹಳ್ಳಿಯಲ್ಲಿ ಯಶಸ್ವಿ ಉದ್ಯೋಗ ಮೇಳ' ಶೀರ್ಷಿಕೆಯ ವರದಿ (ಪ್ರ.ವಾ., ಫೆ. 19) ಓದಿ ಖುಷಿಯಾಯಿತು. ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಭಾನುವಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿಗಳೆಲ್ಲ ಕೈಜೋಡಿಸಿ ಆ ಭಾಗದ ಯುವಜನರಿಗೆ ಉದ್ಯೋಗ ಮೇಳ ಏರ್ಪಡಿಸಿದ್ದು ಅನುಕರಣೀಯ ಕಾರ್ಯ.

ಸರ್ಕಾರಿ ಶಾಲೆಗಳಲ್ಲಿ ಓದಿ ಉನ್ನತಿಗೆ ಬಂದ ಎಷ್ಟೋ ವಿದ್ಯಾರ್ಥಿಗಳು ತಾವು ಕಲಿತ ಶಾಲೆಗೆ ಏನಾದರೂ ಮಾಡಬೇಕೆಂಬ ಹಂಬಲದಿಂದ ಒಂದೆಡೆ ಸೇರಿ ಕಾರ್ಯಕ್ರಮ ಆಯೋಜಿಸುವ, ತಮಗೆ ವಿದ್ಯೆ ಕಲಿಸಿದ ಶಿಕ್ಷಕರನ್ನು ಗೌರವಿಸುವಂತಹ ಕಾರ್ಯಕ್ರಮಗಳ ಬಗ್ಗೆ ಓದಿ ತಿಳಿದಿದ್ದೇವೆ. ಆದರೆ, ಭಾನುವಳ್ಳಿಯ ಹಳೆಯ ವಿದ್ಯಾರ್ಥಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಉದ್ಯೋಗ ಮೇಳವನ್ನು ಆಯೋಜಿಸಿದ್ದು ಮೆಚ್ಚುವಂತಹ ಕಾರ್ಯ. ನಿರುದ್ಯೋಗಿಗಳಿಗೆ ನೆರವಾಗುವಂತಹ ಸಾರ್ಥಕ ಕೆಲಸ ಇದು.

ಕಡೂರು ಫಣಿಶಂಕರ್, ಬೆಂಗಳೂರು

ರಾಜಕೀಯ ಬೆಳವಣಿಗೆ: ಭರಪೂರ ಮನರಂಜನೆ

ರಾಜ್ಯದ ಆಡಳಿತ ಪಕ್ಷ ಮತ್ತು ಅಧಿಕೃತ ವಿರೋಧ ಪಕ್ಷದಲ್ಲಿ ಇತ್ತೀಚೆಗೆ ನಡೆಯುತ್ತಿರುವ ವಿದ್ಯಮಾನಗಳು ಕರ್ನಾಟಕದ ಜನರಿಗೆ ಭರಪೂರ ಮನರಂಜನೆ ಒದಗಿಸುತ್ತಿವೆ. ಅದರಲ್ಲೂ ಆಡಳಿತ ಪಕ್ಷದೊಳಗಿನ ಬೆಳವಣಿಗೆಯು ಪಕ್ಷದ ಹಿತದೃಷ್ಟಿಯಿಂದಲೂ ಆಡಳಿತದ ದೃಷ್ಟಿಯಿಂದಲೂ ಕಾರ್ಯಕರ್ತರ ದೃಷ್ಟಿಯಿಂದಲೂ ಅಷ್ಟೇನೂ ಒಳ್ಳೆಯದಲ್ಲ.

ಎರಡೂ ಪಕ್ಷಗಳ ಮಾತಿನ ಶೂರರು ಪಕ್ಷಕ್ಕಾಗಲೀ ಹೈಕಮಾಂಡ್‌ಗಾಗಲೀ ಬೆಲೆ ಕೊಟ್ಟಂತೆ ತೋರುತ್ತಿಲ್ಲ. ಅವರ ವರ್ತನೆಯ ಹಿಂದೆ ಯಾರೋ ಪ್ರಭಾವಿಗಳ ಕುಮ್ಮಕ್ಕಿದೆ ಎಂಬ ಅನುಮಾನ ಬಾರದೇ ಇರದು. ಡಿ.ಕೆ. ಶಿವಕುಮಾರ್ ಮತ್ತು ಕೆ.ಎನ್. ರಾಜಣ್ಣ ಅವರ ಹೇಳಿಕೆಗಳ ಬಗ್ಗೆ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ವಿವಾದದ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ' ಎಂದಿದ್ದಾರೆ (ಪ್ರ.ವಾ., ಫೆ. 19). ಖಡಕ್ ಮಾತಿಗೆ ಹೆಸರಾಗಿರುವ ಸಿದ್ದರಾಮಯ್ಯನವರ ಈ ಮಾತಿನ ಅರ್ಥವೇನು? ಅವರಿಗೆ ಇದೆಲ್ಲವನ್ನೂ ಹಿಡಿತದಲ್ಲಿಡುವ ಶಕ್ತಿಯಿಲ್ಲವೆಂದೋ ಹಾಗೆ ಮಾಡಲು ಇಚ್ಛೆ ಇಲ್ಲವೆಂದೋ ಅಥವಾ ನಡೆಯುತ್ತಿರುವುದೆಲ್ಲ ತಮ್ಮ ಮೂಗಿನ ನೇರಕ್ಕೇ ನಡೆಯುತ್ತಿದೆ ಎಂದೋ?

ಹೊಸಮನೆ ವೆಂಕಟೇಶ, ಟಿ. ನರಸೀಪುರ

ಒತ್ತಡದಿಂದ ಹೊರಬನ್ನಿ: ಹಣವೊಂದೇ ಬದುಕಲ್ಲ

ಹಣಕಾಸಿನ ವಿಚಾರದಲ್ಲಿ ಆದ ಸಮಸ್ಯೆಯಿಂದ, ಮೈಸೂರಿನಲ್ಲಿ ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ (ಪ್ರ.ವಾ., ಫೆ. 19) ಓದಿ ಆಶ್ಚರ್ಯ, ಆಘಾತ, ನೋವು ಒಟ್ಟಿಗೆ ಉಂಟಾಯಿತು. ಬದುಕು ಅಷ್ಟೊಂದು ಭಾರವೇ ಎಂಬ ಪ್ರಶ್ನೆ ಮೂಡಿತು. ಕ್ಯಾನ್ಸರ್‌ಪೀಡಿತ ನನ್ನ ಅಣ್ಣನಿಗೆ ಬದುಕುವ ಅದಮ್ಯ ಆಸೆ ಇತ್ತು. ಬಹಳ ದಿನಗಳ ಹೋರಾಟದ ನಂತರ ಇಹಲೋಕ ತ್ಯಜಿಸಿದ. ಅಪಾರ ಜೀವನಪ್ರೀತಿ, ಸ್ನೇಹಿತರ ಬಳಗ ಹೊಂದಿದ್ದ. ಪ್ರಾಧ್ಯಾಪಕನಾಗಿದ್ದ ಆತನೊಂದಿಗೆ ಆಸ್ಪತ್ರೆಯಲ್ಲಿಯೇ ಸಾಹಿತ್ಯದ ಓದು, ಹೊಸ ಪುಸ್ತಕಗಳ ಬಗ್ಗೆ ಚರ್ಚೆ ಮಾಡುತ್ತಿದ್ದೆವು.

ಗಂಭೀರ ರೋಗಬಾಧೆಗೆ ಒಳಗಾದವರೇ ಜೀವನಪ್ರೀತಿ ಬಿಟ್ಟುಕೊಡದೆ ರೋಗದ ವಿರುದ್ಧ ಹೋರಾಡುತ್ತಾರೆ. ಅಂತಹುದರಲ್ಲಿ ಆರೋಗ್ಯವಂತರು ಬದುಕಿನಲ್ಲಿ ಎದುರಾಗುವ ಎಡರು–ತೊಡರುಗಳನ್ನು ಎದುರಿಸಲಾಗದೆ ಸಾವಿಗೆ ಶರಣಾಗುತ್ತಿರುವುದು ವಿಷಾದಕರ. ಕೋವಿಡ್ ನಂತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿವೆ ಎಂಬ ಮಾತಿದೆ. ಇದು, ನಿಜವೇ ಆಗಿದ್ದರೆ ಏಕೆ ಹೀಗೆ ಆಗುತ್ತಿದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ತಜ್ಞರು ಉತ್ತರಿಸಬೇಕಾಗಿದೆ. ಮನಸ್ಸಿಗೆ ಉಲ್ಲಾಸ ನೀಡುವಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಒತ್ತಡಗಳಿಂದ ಹೊರಬರಬೇಕು. ಬದುಕಲು ಹಣ ಬೇಕು. ಆದರೆ ಹಣವೊಂದೇ ಜೀವನವಲ್ಲ. ಈ ಸತ್ಯವನ್ನು ಅರಿಯಬೇಕು.

ಗುರು ಜಗಳೂರು, ಹರಿಹರ

ಆಸ್ಪತ್ರೆಗಳ ಶೋಷಣೆ: ಹೇಳಿಕೆಯಷ್ಟೇ ಸಾಲದು

ಅನಗತ್ಯ ತಪಾಸಣೆ ಮತ್ತು ಹೆಚ್ಚು ಬಿಲ್ ಕಾರಣದಿಂದ ಖಾಸಗಿ ಆಸ್ಪತ್ರೆಗಳಿಗೆ ಹೋಗಲು ಭಯವಾಗುತ್ತದೆ, ವೈದ್ಯಕೀಯ ಸೇವೆ ವ್ಯಾಪಾರವಾಗಿದೆ ಎಂಬ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಹೇಳಿಕೆ (ಕಿಡಿನುಡಿ, ಫೆ. 19) ಸರಿಯಾಗಿದೆ. ಖಾಸಗಿ ಆಸ್ಪತ್ರೆಗಳ ಶೋಷಣೆ ಎಲ್ಲರಿಗೂ ಗೊತ್ತಿರುವ ನಗ್ನ ಸತ್ಯ. ಆದರೆ, ಬರೀ ಇಂತಹ ಹೇಳಿಕೆಗಳನ್ನು ನೀಡುವುದರಿಂದ ಸರ್ಕಾರದ ಜವಾಬ್ದಾರಿ ಮುಗಿಯುವುದಿಲ್ಲ. ಮಧ್ಯಮ ವರ್ಗ ಮತ್ತು ಬಡತನ ರೇಖೆಯಿಂದ ಕೆಳಗಿರುವ ನಾಗರಿಕರಿಗೆ ಉತ್ತಮ ಚಿಕಿತ್ಸೆಯನ್ನು ಕೈಗೆಟಕುವ ರೀತಿಯಲ್ಲಿ ಒದಗಿಸಬೇಕಾದದ್ದು ಯಾವುದೇ ಪಕ್ಷದ ನೇತೃತ್ವದ ಸರ್ಕಾರದ ಆದ್ಯ ಕರ್ತವ್ಯ. ಈ ದಿಸೆಯಲ್ಲಿ ಸರ್ಕಾರಿ ಹೈಟೆಕ್ ಆಸ್ಪತ್ರೆ ಆರಂಭಿಸಬೇಕು. ದಕ್ಷ ವೈದ್ಯರು ಮತ್ತು ಶುಶ್ರೂಷಕರನ್ನು ನೇಮಿಸಿ ಅವರಿಗೆ ಕೈತುಂಬಾ ಸಂಬಳ ಸವಲತ್ತನ್ನು ನೀಡಬೇಕು. ಅದು ಬಿಟ್ಟು ಬರೀ ಭಾಷಣ ಮಾಡಿದರೆ 'ಹುತ್ತವ ಬಡಿದರೆ ಹಾವು ಸಾಯದು' ಎಂಬಂತೆ ಆಗುತ್ತದೆ.

ಎಚ್.ಎಸ್.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶುದ್ಧ ಗಂಗೆ ಕನಸೇ?

ಸ್ನಾನಕ್ಕೂ ಯೋಗ್ಯವಿಲ್ಲ 'ಪವಿತ್ರ' ನದಿಯ ನೀರು

'ಗಂಗಾ ಮಾತೆಯ ಸೇವೆ ಮಾಡುವುದು ನನ್ನ ವಿಧಿ ಲಿಖಿತ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು 2014ರಲ್ಲಿ ಮೊದಲ ಬಾರಿಗೆ ವಾರಾಣಸಿಯಲ್ಲಿ ಗೆಲುವು ಸಾಧಿಸಿದ ಬಳಿಕ ಹೇಳಿದ್ದರು. ಗಂಗೆಯ ಶುದ್ಧೀಕರಣಕ್ಕಾಗಿ ಕೇಂದ್ರ ಸರ್ಕಾರ ನಮಾಮಿ ಗಂಗೆ ಯೋಜನೆ ಆರಂಭಿಸಿತ್ತು. ಇದಾಗಿ 11 ವರ್ಷಗಳು ಕಳೆದಿವೆ. ಗಂಗೆ ಇನ್ನೂ ಶುದ್ಧವಾಗಿಲ್ಲ. ಮಹಾಕುಂಭ ಮೇಳದ ಸಮಯದಲ್ಲಿ ನದಿಯ ನೀರಿನ ಗುಣಮಟ್ಟದ ಕುರಿತಾಗಿ ಬಹಿರಂಗಗೊಂಡಿರುವ ಅಂಕಿಅಂಶ ಆತಂಕ ಹುಟ್ಟಿಸುವಂತಿವೆ. ಅದರ ಪ್ರಕಾರ, ಸಂಗಮದ ನೀರು ಕುಡಿಯುವುದಕ್ಕೆ ಇರಲಿ, ಸ್ನಾನಕ್ಕೂ ಯೋಗ್ಯವಾಗಿಲ್ಲ

ಪ್ರಜಾವಾಣಿ ವಾರ್ತೆ

ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ಮಹಾಕುಂಭ ಮೇಳವು ಜ.13ರಂದು ಆರಂಭವಾಗಿದ್ದು, ಫೆ. 26ರಂದು ಮುಗಿಯಲಿದೆ. ಈವರೆಗೆ 50 ಕೋಟಿಯಷ್ಟು ಮಂದಿ ಪುಣ್ಯಸ್ನಾನ ಮಾಡಿದ್ದಾರೆ ಎಂದು ಉತ್ತರ ಪ್ರದೇಶ ಸರ್ಕಾರ ಹೇಳಿದೆ. ಈ ವೇಳೆ ಆಘಾತಕಾರಿ ಮಾಹಿತಿಯೊಂದು ಹೊರಬಿದ್ದಿದೆ. ಪ್ರಯಾಗರಾಜ್‌ನಲ್ಲಿ ಸಂಗಮದ ನೀರು ಸ್ನಾನ ಮಾಡಲು ಯೋಗ್ಯವಾಗಿಲ್ಲ ಎಂದು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಸಿಪಿಸಿಪಿ) ಹೇಳಿದೆ.

ಜ.12ರಿಂದ ಜ.24ರ ನಡುವೆ ಆರು ದಿನ ವಿವಿಧ ಸ್ಥಳಗಳಲ್ಲಿ ಗಂಗಾ, ಯಮುನಾ ನದಿಗಳ ನೀರಿನ ಮಾದರಿಗಳನ್ನು ಸಂಗ್ರಹಿಸಿದ್ದ ಸಿಪಿಸಿಬಿ, ಅದರ ಗುಣಮಟ್ಟದ ಪರೀಕ್ಷೆ ನಡೆಸಿತ್ತು. ಅದರ ಪ್ರಕಾರ, ಸಂಗಮದ ವಿವಿಧ ಸ್ಥಳಗಳಲ್ಲಿ ಫೀಕಲ್ ಕೋಲಿಫಾರ್ಮ್ (ಎಫ್‌ಸಿ) ಬ್ಯಾಕ್ಟೀರಿಯಾವು ಅನುಮತಿಸ್ಪಲ್ಪಟ್ಟ ಪ್ರಮಾಣಕ್ಕಿಂತ ಹೆಚ್ಚಾಗಿದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ಸಲ್ಲಿಸಿರುವ (ಎನ್‌ಜಿಟಿ) ವರದಿಯಲ್ಲಿ ಇದನ್ನು ಉಲ್ಲೇಖಿಸಲಾಗಿದೆ. ಅನುಮತಿಸಲ್ಪಟ್ಟ ಮಿತಿಯು 100 ಮಿಲಿಲೀಟರ್‌ಗೆ (ಎಂ.ಎಲ್) ಗರಿಷ್ಠ 2,500 ಎಂಪಿಎನ್. ಆದರೆ, ಸಂಗಮದ ಹಲವೆಡೆ ಈ ಪ್ರಮಾಣ ಹತ್ತಾರು ಪಟ್ಟು ಹೆಚ್ಚಿದೆ. ನೀರಿನ ಮಾಲಿನ್ಯ ಹೆಚ್ಚಾಗಲು ಇತರೆ ಕಾರಣಗಳ ಜತೆಗೆ ಮಹಾಕುಂಭ ಮೇಳದ ಅಂಗವಾಗಿ ಭಾರಿ ಸಂಖ್ಯೆಯಲ್ಲಿ ಭಕ್ತರು ಸ್ನಾನ ಮಾಡುತ್ತಿರುವುದೂ ಕಾರಣ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸಂಗಮದಲ್ಲಿ ಗಂಗಾ ನದಿಯ ನೀರನ್ನು 2024ರ ಜ.12ರಂದು ಪರೀಕ್ಷೆ ಮಾಡಿದ್ದಾಗ ಅದರಲ್ಲಿ ಎಫ್‌ಸಿ ಪ್ರಮಾಣ 2,000 ಎಂಪಿಎನ್ ಇದ್ದರೆ, 2025ರ ಜ.14ರಂದು ಈ ಪ್ರಮಾಣವು 11 ಸಾವಿರ ಎಂಪಿಎನ್ ಆಗಿತ್ತು. ಜ.20ರ ಹೊತ್ತಿಗೆ 49,000 ಎಂಪಿಎನ್‌ನಷ್ಟು ಹೆಚ್ಚಾಗಿದೆ ಎಂದು ವರದಿ ಹೇಳಿದೆ.

ಶೃಂಗ್‌ವೇರ್‌ಪುರ ಘಾಟ್‌ನಲ್ಲಿ ಗಂಗಾನದಿಯ ನೀರಿನ ಗುಣಮಟ್ಟವನ್ನು 2025ರ ಜ.13ರಂದು ಪರೀಕ್ಷೆ ಮಾಡಿದಾಗ ಎಫ್‌ಸಿ ಪ್ರಮಾಣವು 23,000 ಎಂಪಿಎನ್ ಇದ್ದರೆ, ದೀಹಾ ಘಾಟ್‌ನಲ್ಲಿ ಅದರ ಪ್ರಮಾಣವು 33,000 ಎಂಪಿಎನ್ ಎಂದು ದಾಖಲಾಗಿದೆ. ಇದೇ ದಿನ ಓಲ್ಡ್ ನೈನಿ ಬ್ರಿಜ್ ಬಳಿ ಯಮುನಾ ನದಿಯ ನೀರಿನ ಗುಣಮಟ್ಟ ಪರೀಕ್ಷಿಸಿದಾಗ ಅದರಲ್ಲಿ ಎಫ್‌ಸಿ ಪ್ರಮಾಣವು 11,000 ಎಂಪಿಎನ್ ಇತ್ತು. 2025ರ ಜ.20ರಂದು ಅದರ ಅದೇ ಬ್ರಿಜ್ ಬಳಿ ಎಫ್‌ಸಿ ಪ್ರಮಾಣವು 23,000 ಎಂಪಿಎನ್ ಇತ್ತು. ಜ.20ರಂದು ಯಮುನಾ ನದಿಯು ಸಂಗಮವನ್ನು ಸೇರುವುದಕ್ಕೆ ಹಿಂದೆಯೇ ನೀರನ್ನು ಪರೀಕ್ಷೆ ಮಾಡಿದಾಗ ಅದರಲ್ಲಿ ಎಫ್‌ಸಿ ಪ್ರಮಾಣವು 33,000 ಇತ್ತು ಎಂಬುದಾಗಿ ವರದಿ ತಿಳಿಸಿದೆ.

ಗಂಗೆಯ ಶುದ್ಧೀಕರಣದ ವಿಚಾರಕ್ಕೆ ಭಾರಿ ಪ್ರಚಾರ ಸಿಕ್ಕಿದ್ದು ನರೇಂದ್ರ ಮೋದಿ ಅವರು ಪ್ರಧಾನಿಯಾದ ನಂತರ. ಅವರು ವಾರಾಣಸಿಯಿಂದ 2014ರಲ್ಲಿ ಮೊದಲ ಬಾರಿಗೆ ಸಂಸದರಾಗಿ ಗೆದ್ದಾಗ ಗಂಗೆಯ ಶುದ್ಧೀಕರಣ ತಮ್ಮ ಪ್ರಮುಖ ಆದ್ಯತೆ ಎಂದಿದ್ದರು. ಆದರೆ, ಅವರ 11 ವರ್ಷಗಳ ಆಡಳಿತಾವಧಿಯಲ್ಲಿ ನೀಡಿದ್ದ ಭರವಸೆ ಈಡೇರಿಲ್ಲ. ನಮಾಮಿ ಗಂಗೆ ಯೋಜನೆ ಅಡಿ ಸಾವಿರಾರು ಕೋಟಿ ಖರ್ಚಾಗಿದ್ದರೂ ಗಂಗೆ ಮಲಿನವಾಗಿಯೇ ಇದ್ದಾಳೆ.

1,000 ಕಿ.ಮೀ
ಉತ್ತರ ಪ್ರದೇಶದಲ್ಲಿ ಗಂಗಾನದಿಯ ಉದ್ದ

8.61 ಲಕ್ಷ ಚದರ ಕಿ.ಮೀ
ಗಂಗಾನದಿಯ ಜಲಾನಯನ ಪ್ರದೇಶದ ವಿಸ್ತೀರ್ಣ

11
ಗಂಗೆ ಮತ್ತು ಅದರ ಉಪನದಿಗಳು ಹರಿಯುವ ರಾಜ್ಯಗಳು

5
ಗಂಗಾ ನದಿ ಹರಿಯುವ ರಾಜ್ಯಗಳು

2,525 ಕಿ.ಮೀ
ಗಂಗಾನದಿಯ ಉದ್ದ



ಹಿಮಾಲಯದಿಂದ ಬಂಗಾಳಕೊಲ್ಲಿಯವರೆಗೆ: ಗಂಗೆ ಮತ್ತು ಅದರ ಉಪನದಿಗಳ ಹರಿವಿನ ವ್ಯಾಪ್ತಿ

ನಿಯಮ ಪಾಲಿಸದ ಕೈಗಾರಿಕೆಗಳು

ನಮಾಮಿ ಗಂಗಾ ಯೋಜನಾ ವ್ಯಾಪ್ತಿಯಲ್ಲಿ ಮಾಲಿನ್ಯ ಉಂಟು ಮಾಡುವಂತಹ (ಜಿಪಿಐ) 4,246 ಕೈಗಾರಿಕೆಗಳನ್ನು ಗುರುತಿಸಲಾಗಿದೆ. ಕಳೆದ ವರ್ಷ ಅಕ್ಟೋಬರ್‌ವರೆಗೆ 2,487 ಕೈಗಾರಿಕೆಗಳನ್ನು ವಾರ್ಷಿಕ ಪರಿಶೀಲನೆಗೆ ಒಳಪಡಿಸಲಾಗಿದೆ. ಈ ಪೈಕಿ 572 ಕಾರ್ಖಾನೆಗಳು ಮಾಲಿನ್ಯ ನಿಯಂತ್ರಣ ನಿಯಮಗಳನ್ನು ಪಾಲಿಸದಿರುವುದು ಕಂಡುಬಂದಿದೆ. 15 ಕಾರ್ಖಾನೆಗಳನ್ನು ಮುಚ್ಚುವಂತೆ ನೋಟಿಸ್ ನೀಡಲಾಗಿದ್ದು, 557 ಕೈಗಾರಿಕೆಗಳಿಗೆ ಶೋಕಾಸ್ ನೀಡಲಾಗಿದೆ.

ಅಂತ್ಯಸಂಸ್ಕಾರವೂ ಒಂದು ಕಾರಣ

ಗಂಗಾ ನದಿ ಮಾಲಿನ್ಯಕ್ಕೆ ಕಾರಣವಾಗುತ್ತಿರುವ ಅಂಶಗಳನ್ನು ನ್ಯಾಷನಲ್ ಮಿಷನ್ ಫಾರ್ ಕ್ಲೀನ್ ಗಂಗಾ ಪಟ್ಟಿ ಮಾಡಿದೆ. ಅದರಲ್ಲಿ ನದಿಯಲ್ಲಿ ಶವಗಳನ್ನು ವಿಲೇವಾರಿ ಮಾಡುತ್ತಿರುವುದೂ ಒಂದು ಕಾರಣ. ಶವ ಸಂಸ್ಕಾರದ ವೆಚ್ಚ ಭರಿಸಲು ಸಾಧ್ಯವಾಗದಿರುವ ಕಾರಣಕ್ಕೆ ಮೃತದೇಹಗಳನ್ನು ನದಿಗೆ ಎಸೆಯಲಾಗುತ್ತದೆ. ವಾರಾಣಸಿಯಲ್ಲೇ ವಾರ್ಷಿಕವಾಗಿ 40 ಸಾವಿರದಷ್ಟು ಅಂತ್ಯಸಂಸ್ಕಾರ ನಡೆಯುತ್ತವೆ. ಇದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಕಟ್ಟಿಗೆಗಳನ್ನು ಬಳಸಲಾಗುತ್ತದೆ. ಪೂರ್ಣವಾಗಿ ಸುಡದ ದೇಹವನ್ನು ನದಿಗೆ ಹಾಕಲಾಗುತ್ತದೆ. ಪ್ರಾಣಿಗಳ ಕಳೇಬರಗಳನ್ನು ಕೂಡ ನದಿಗೆ ಎಸೆಯಲಾಗುತ್ತದೆ.

ಉತ್ತರಾಖಂಡದಲ್ಲಿ ಹುಟ್ಟುವ ಗಂಗಾ ನದಿಯು ಉತ್ತರ ಪ್ರದೇಶ ಪ್ರವೇಶಿಸುತ್ತಿದ್ದಂತೆ ಮಲಿನಗೊಳ್ಳಲು ಆರಂಭವಾಗುತ್ತದೆ. ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದಲ್ಲೂ ಮಲಿನವಾಗಿಯೇ ಹರಿಯುತ್ತದೆ



ಪ್ರಯಾಗರಾಜ್‌ನ ಸಂಗಮದಲ್ಲಿ ನದಿಗೆ ಹಾಕಲಾದ ತ್ಯಾಜ್ಯವನ್ನು ಸ್ವಚ್ಛತಾ ಸಿಬ್ಬಂದಿ ಸಂಗ್ರಹಿಸುತ್ತಾರೆ



ಹಿಮಾಲಯದಲ್ಲಿ ಹರಿಯುವ ಶುದ್ಧ ಗಂಗೆ

ಕೊಳಚೆ ನೀರೇ ಗಂಗೆಗೆ ಶಾಪ

ಗಂಗಾ ನದಿಯ ಅಚ್ಚುಕಟ್ಟು ಪ್ರದೇಶದಲ್ಲಿ ಪ್ರತಿ ದಿನ 1,200 ಕೋಟಿ ಲೀಟರ್‌ಗಳಷ್ಟು ಕೊಳಚೆ ನೀರು ಉತ್ಪತ್ತಿಯಾಗುತ್ತದೆ. ಸದ್ಯ, ಇಲ್ಲಿ 400 ಕೋಟಿ ಲೀಟರ್ ಕೊಳಚೆ ನೀರನ್ನು ಶುದ್ಧೀಕರಿಸುವ ಸಾಮರ್ಥ್ಯದ ಘಟಕಗಳಿವೆ. ಗಂಗಾ ನದಿ ದಂಡೆಯಲ್ಲಿರುವ ನಗರಗಳು, ಪಟ್ಟಣಗಳು (97 ಇವೆ) ಈಗಲೂ ಪ್ರತಿ ದಿನ 300 ಕೋಟಿ ಲೀಟರ್‌ಗಳಷ್ಟು ಕೊಳಚೆ ನೀರನ್ನು ನೇರವಾಗಿ ಗಂಗೆಯ ಒಡಲಿಗೆ ಹರಿಸುತ್ತಿವೆ. ಗಂಗೆಯ ಮಾಲಿನ್ಯದಲ್ಲಿ ಕೈಗಾರಿಕೆಗಳ ಪಾಲು ಶೇ 20ರಷ್ಟಿದೆ. ಈ ಪೈಕಿ ರಾಮನಗರ, ಕಾಳಿ ನದಿಗಳ ಅಚ್ಚುಕಟ್ಟು ಪ್ರದೇಶ ಹಾಗೂ ಕಾನ್ಪುರದಲ್ಲಿರುವ ಕಾರ್ಖಾನೆಗಳು ಕೈಗಾರಿಕಾ ಮಾಲಿನ್ಯದ ಮೂಲವಾಗಿವೆ. ಪ್ರತಿ ದಿನ 26 ಕೋಟಿ ಲೀಟರ್‌ಗಳಷ್ಟು ತ್ಯಾಜ್ಯ ನೀರು ನದಿಗೆ ಸೇರುತ್ತಿದೆ.

ನಮಾಮಿ ಗಂಗೆ ಯೋಜನೆ, ವೆಚ್ಚ: ಒಂದು ನೋಟ

₹20,000 ಕೋಟಿ
2015ರಿಂದ 2021ರ ಮಾರ್ಚ್‌ವರೆಗಿನ ಅವಧಿಯಲ್ಲಿ ಯೋಜನೆಗೆ ಮೀಸಲಿಟ್ಟ ಬಜೆಟ್

₹22,500 ಕೋಟಿ
ಯೋಜನೆಯನ್ನು 2026ರ ಮಾರ್ಚ್‌ವರೆಗೆ ವಿಸ್ತರಿಸಿದ ಬಳಿಕ ಘೋಷಿಸಿರುವ ಅನುದಾನ

₹39,604 ಕೋಟಿ
ವಿವಿಧ ಕಾಮಗಾರಿಗಳಿಗಾಗಿ ಕೇಂದ್ರ ಸರ್ಕಾರ ಮಂಜೂರು ಮಾಡಿರುವ ಹಣ

₹18,139 ಕೋಟಿ
ಕೇಂದ್ರ ಸರ್ಕಾರ ಈವರೆಗೆ ಬಿಡುಗಡೆ ಮಾಡಿರುವ ಹಣ

484
ಗಂಗಾ ನದಿ ಶುದ್ಧೀಕರಣಕ್ಕಾಗಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು

302
ಪೂರ್ಣಗೊಂಡ ಕಾಮಗಾರಿಗಳು

203
ಗಂಗೆ ಹರಿಯುವ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿರುವ ಕೊಳಚೆ ನೀರು ಶುದ್ಧೀಕರಣ ಘಟಕಗಳು (ಎಸ್‌ಟಿಪಿ)

125
ಕಾಮಗಾರಿ ಪೂರ್ಣಗೊಂಡಿರುವ ಎಸ್‌ಟಿಪಿಗಳು



2019ರಲ್ಲಿ ಪ್ರಯಾಗರಾಜ್‌ನಲ್ಲಿ ನಡೆದ ಕುಂಭ ಮೇಳದಲ್ಲಿ ಪ್ರಧಾನಿ ಮೋದಿ ಅವರು ಪುಣ್ಯ ಸ್ನಾನ ಮಾಡಿದ ಸಂದರ್ಭ

ಆಧಾರ: ಎಂಎನ್‌ಸಿಜಿ ವೆಬ್‌ಸೈಟ್, ರಾಜ್ಯಸಭೆಗೆ ಸಚಿವರು ನೀಡಿದ ಉತ್ತರ, ಕೇಂದ್ರೀಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಎನ್‌ಜಿಟಿಗೆ ಸಲ್ಲಿಸಿರುವ ವರದಿ, ಡೌನ್ ಟು ಅರ್ಥ್

ಸಿನಿ ಬಿಟ್ಸ್

'ಅಮರ ಪ್ರೇಮಿ ಅರುಣ'ನಾದ ಹರಿಶರ್ವಾ



ದೀಪಿಕಾ, ಹರಿಶರ್ವಾ

ಹರಿಶರ್ವಾ ಹಾಗೂ ದೀಪಿಕಾ ಆರಾಧ್ಯ ನಟಿಸಿರುವ, ಪ್ರವೀಣ್ ಕುಮಾರ್ ಜಿ. ನಿರ್ದೇಶನದ 'ಅಮರ ಪ್ರೇಮಿ ಅರುಣ್' ಸಿನಿಮಾದ ಟೀಸರ್ ಇತ್ತೀಚೆಗೆ ಬಿಡುಗಡೆಗೊಂಡಿತು. ಮಂಜಮ್ಮ ಜೋಗತಿ ಹಾಗೂ ನಿರ್ಮಾಪಕಿ ಶೈಲಜಾ ನಾಗ್ ಚಿತ್ರದ ಫಸ್ಟ್ ಲುಕ್ ಹಾಗೂ ಟೀಸರ್ ರಿಲೀಸ್ ಮಾಡಿದರು.


'ಚಿತ್ರದಲ್ಲಿ ಆರು ಹಾಡುಗಳಿದ್ದು, ಎರಡು ಹಾಡುಗಳನ್ನು ಯೋಗರಾಜ್ ಭಟ್, ಒಂದು ಹಾಡನ್ನು ಜಯಂತ ಕಾಯ್ಕಿಣಿ ಬರೆದಿದ್ದಾರೆ. ಕಿರಣ್ ರವೀಂದ್ರನಾಥ್ ಸಂಗೀತ ನಿರ್ದೇಶನವಿದೆ. ಶೀರ್ಷಿಕೆಯೇ ಹೇಳುವಂತೆ ಪ್ರೀತಿಯನ್ನು ಅರಸುವ ಸಿನಿಮಾ ಇದಾಗಿದೆ' ಎಂದರು ಪ್ರವೀಣ್.

ಈ ಸಿನಿಮಾವನ್ನು ಕ್ರೌಡ್ ಫಂಡಿಂಗ್‌ನಡಿ 70 ಜನರು ನಿರ್ಮಾಣ ಮಾಡಿದ್ದಾರೆ. 'ಕಹಿ' ಸಿನಿಮಾದಲ್ಲಿ ಅಭಿನಯಿಸಿದ್ದ ಹರಿಶರ್ವಾ ಈ ಸಿನಿಮಾ ಮೂಲಕ ನಾಯಕನಾಗಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. 'ಕಾವ್ಯಾ' ಎಂಬ ಪಾತ್ರಕ್ಕೆ ದೀಪಿಕಾ ಬಣ್ಣಹಚ್ಚಿದ್ದಾರೆ. ರಾಧಾ ರಾಮಚಂದ್ರ, ಬಲ ರಾಜವಾಡಿ, ಧರ್ಮಣ್ಣ ಕಡೂರು, ಕೃತಿ ಭಟ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಏಪ್ರಿಲ್‌ನಲ್ಲಿ ಈ ಸಿನಿಮಾ ತೆರೆಗೆ ಬರಲಿದೆ.

'ಮುಂಗಾರು ಮಳೆಯಲ್ಲಿ' ಮಿಂದ ವಿನಯ್ ರಾಜ್‌ಕುಮಾರ್

ವಿನಯ್ ರಾಜ್‌ಕುಮಾರ್ ಮತ್ತು ಅದಿತಿ ಪ್ರಭುದೇವ ಅಭಿನಯದ 'ಅಂದೊಂದಿತ್ತು ಕಾಲ' ಚಿತ್ರದ 'ಮುಂಗಾರು ಮಳೆಯಲ್ಲಿ ...' ಹಾಡು ಕೆಲ ದಿನಗಳ ಹಿಂದೆ ಬಿಡುಗಡೆಗೊಂಡಿತ್ತು. 'ಗೋಲ್ಡನ್ ಸ್ಟಾರ್' ಗಣೇಶ್ ಮತ್ತು 'ಮಳೆ ಹುಡುಗಿ' ಪೂಜಾ ಗಾಂಧಿ ಹಾಡು ಬಿಡುಗಡೆ ಮಾಡಿದ್ದರು. ಕೀರ್ತಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಹಾಡಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಚಿತ್ರದಲ್ಲಿ ಐದು ಹಾಡುಗಳಿದ್ದು, ಸಂಗೀತ ನಿರ್ದೇಶಕ ವಿ. ರಾಘವೇಂದ್ರ ಎಲ್ಲಾ ಹಾಡುಗಳಿಗೆ ಬಹಳ ಚೆನ್ನಾಗಿ ಟ್ಯೂನ್ ಮಾಡಿಕೊಟ್ಟಿದ್ದಾರೆ. ಚಿತ್ರವು ಮಾರ್ಚ್ ತಿಂಗಳಲ್ಲಿ ಬಿಡುಗಡೆಯಾಗುತ್ತಿದೆ. ಓರ್ವ ನಿರ್ದೇಶಕನ ಜೀವನದ ಕಥೆ. ನಮ್ಮ ಚಿತ್ರದ ನಿರ್ದೇಶಕ ಕೀರ್ತಿ ಅವರು ಜೀವನದಲ್ಲಿ ಅನುಭವಿಸಿದ ಘಟನೆಗಳು, ಅವರ ಸ್ನೇಹಿತರ ಅನುಭವಗಳನ್ನು ಸೇರಿಸಿ ಒಂದೊಳ್ಳೆಯ ಕಥೆ ಹೇಳಿದ್ದಾರೆ' ಎಂದರು ವಿನಯ್‌ರಾಜ್‌ಕುಮಾರ್.



ಅದಿತಿ ಪ್ರಭುದೇವ, ವಿನಯ್ ರಾಜ್‌ಕುಮಾರ್

ಭುವನ್ ಸುರೇಶ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. 'ಅಂದೊಂದಿತ್ತು ಕಾಲ' ಎಂಬ ಹೆಸರೇ ಬಹಳ ಆಪ್ತವಾಗಿದೆ. ಈ ಚಿತ್ರದಲ್ಲಿ ನನಗೆ ಕಣ್ಣಲ್ಲೇ ಮಾತಾಡುವ ಪಾತ್ರವಿದೆ. ವಿನಯ್ ಅವರ ಜೊತೆಗೆ ಬಹಳ ಖುಷಿಯಿಂದ ಕೆಲಸ ಮಾಡಿದ್ದೇನೆ' ಎಂದರು ಅದಿತಿ.

ನಿಶಾ ರವಿಕೃಷ್ಣನ್, ಜಗ್ಗಪ್ಪ, ಅರುಣಾ ಬಾಲರಾಜ್ ಮುಂತಾದವರು ನಟಿಸಿದ್ದು, ರವಿಚಂದ್ರನ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಬೆಂಗಳೂರು, ತೀರ್ಥಹಳ್ಳಿ ಮುಂತಾದ ಕಡೆ ಚಿತ್ರದ ಚಿತ್ರೀಕರಣವಾಗಿದೆ. ಚಿತ್ರಕ್ಕೆ ಅಭಿಷೇಕ್ ಕಾಸರಗೋಡು ಛಾಯಾಚಿತ್ರಗ್ರಹಣವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ದೆಹಲಿಯಲ್ಲಿ** ಸೋಮವಾರ ಸಂಭವಿಸಿದ ಭೂಕಂಪನದಲ್ಲಿ ಕಟ್ಟಡಗಳಿಗೆ ಹಾನಿಯಾಗಿದೆ ಎಂದು ಹೇಳಿಕೊಳ್ಳುತ್ತಾ ಸಾಮಾಜಿಕ ಜಾಲತಾಣವಾದ 'ಥ್ರೆಡ್'ನ ಬಳಕೆದಾರರೊಬ್ಬರು ಭಾಗಶಃ ಕುಸಿದಿರುವ ಕಟ್ಟಡದ ಚಿತ್ರದ ಸಹಿತ ಪೋಸ್ಟ್ ಮಾಡಿದ್ದಾರೆ. ದೆಹಲಿಯಾದ್ಯಂತ ಮುಂಜಾನೆ 5.30ರ ಸುಮಾರಿಗೆ 4.0 ತೀವ್ರತೆಯ ಭೂಕಂಪನ ಸಂಭವಿಸಿದೆ. ಬಿಹಾರದಲ್ಲಿ ಬೆಳಿಗ್ಗೆ 8 ಗಂಟೆಗೆ ಭೂಕಂಪನವಾಗಿದೆ' ಎಂದು ಆ ಪೋಸ್ಟ್‌ನಲ್ಲಿ ಹೇಳಲಾಗಿದೆ. ಭೂಕಂಪನದಿಂದಾಗಿ ಕಟ್ಟಡ ಕುಸಿದಿದೆ ಎಂಬುದು ಸುಳ್ಳು ಸುದ್ದಿ.

✓ **ಫೋಟೊವನ್ನು** ರಿವರ್ಸ್ ಇಮೇಜ್ ವಿಧಾನದಲ್ಲಿ ಗೂಗಲ್‌ನಲ್ಲಿ ಹುಡುಕಿದಾಗ, ಇದೇ ಪ್ರತಿಪಾದನೆಯೊಂದಿಗೆ ಹಲವರು ಈ ಪೋಸ್ಟ್ ಹಂಚಿಕೊಂಡಿರುವುದು ಕಂಡು ಬಂತು. ಮತ್ತಷ್ಟು ಜಾಲಾಡಿದಾಗ, 2024ರಲ್ಲಿ ಇನ್‌ಸ್ಟಾಗ್ರಾಂನಲ್ಲಿ ಇದೇ ಫೋಟೊವನ್ನು ಹಂಚಿಕೊಂಡಿದ್ದ ಪೋಸ್ಟ್ ಸಿಕ್ಕಿತು. ಮುಂದುವರಿದು, ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಡಿದಾಗ 2015ರ ನವೆಂಬರ್ 9ರಂದು ಹಿಂದೂಸ್ತಾನ್ ಟೈಮ್ಸ್‌ನಲ್ಲಿ ಪ್ರಕಟವಾದ ವರದಿಯೊಂದು ಕಂಡು ಬಂತು. 'ಭೂಕಂಪನದಿಂದ ಕಟ್ಟಡ ಕುಸಿತ: ದಕ್ಷಿಣ ದೆಹಲಿಯಲ್ಲಿ ಭಯ ಹುಟ್ಟುಹಾಕಿದ ಕಂಪನ' ಎಂಬ ತಲೆ ಬರಹ ಅದಕ್ಕೆ ನೀಡಲಾಗಿತ್ತು. ದೆಹಲಿಯ ಸಫ್ದರ್‌ಜಂಗ್ ಎನ್‌ಕ್ಲೇವ್‌ನಲ್ಲಿರುವ ಅನಧಿಕೃತ ಕಾಲೊನಿಯಲ್ಲಿ ನಾಲ್ಕು ಅಂತಸ್ತಿನ ಕಟ್ಟಡ ಭಾಗಶಃ ಕುಸಿದಿದೆ ಎಂದು ವರದಿಯಲ್ಲಿ ಹೇಳಲಾಗಿತ್ತು. ಆ ವರದಿಯಲ್ಲಿ ಈಗ ಹಂಚಿಕೊಳ್ಳಲಾಗುತ್ತಿರುವ ಚಿತ್ರವನ್ನೇ ಬಳಸಲಾಗಿತ್ತು. 2015ರ ಫೋಟೊವನ್ನು ಸೋಮವಾರ ಸಂಭವಿಸಿದ ಭೂಕಂಪನದಿಂದ ಹಾನಿಗೀಡಾದ ಕಟ್ಟಡ ಚಿತ್ರ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ನಿಸರ್ಗದ ಬಯಕೆಯಂತೆ ಬದುಕು

ನುಡಿ ಬೆಳಗು 136



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಒಂದು ಗಿಡದಲ್ಲಿ ಸಾವಿರಾರು ಎಲೆಗಳಿರುತ್ತವೆ. ಯಾವುದಾದರೂ ಒಂದು ಎಲೆ, 'ನಾನು ಹೇಳಿದ ಹಾಗೆಯೇ ಗಿಡ ಕೇಳಬೇಕು. ನಾನು ಅಲುಗಾಡಿದರೆ ಗಿಡ ಅಲುಗಾಡಬೇಕು. ನಾನು ನಿಂತರೆ ಗಿಡ ಸುಮ್ಮನೆ ನಿಲ್ಲಬೇಕು' ಅಂದರೆ ಆಗತ್ತೈತೇನು? ಗಿಡ ಅಲುಗಿದರೆ ಎಲೆ ಅಲುಗಬೇಕೇ ವಿನಾ ಎಲೆ ಅಲುಗಾಡಿದರೆ ಗಿಡ ಅಲುಗಾಡುವುದಿಲ್ಲ. ಹಾಗೆಯೇ ಒಂದು ಬಸ್ಸಿನಲ್ಲಿ 50 ಮಂದಿ ಪ್ರಯಾಣಿಕರಿದ್ದರೆ ಪ್ರತಿಯೊಬ್ಬ ಪ್ರಯಾಣಿಕನೂ, 'ಬಸ್ ನಾನು ಹೇಳಿದ ದಾರಿಯಲ್ಲಿಯೇ ಹೋಗಬೇಕು' ಎಂದು ಬಯಸಿದರೆ ಅಪಘಾತವಾಗುತ್ತದೆಯೇ ವಿನಾ ಬಸ್ ಮುಂದೆ ಹೋಗೋದಿಲ್ಲ. ಬಸ್ ಹೋಗೋದು ಚಾಲಕನ ಇಚ್ಛೆಯಂತೆಯೇ ವಿನಾ ಪ್ರಯಾಣಿಕರ ಇಚ್ಛೆಯಂತೆ ಅಲ್ಲ. ಇಲ್ಲಿ ನಾವು ಪ್ರಯಾಣಿಕರು ಅಷ್ಟೆ. ಚಾಲಕ ಬೇರೆ ಇದ್ದಾನೆ. ಅವನು ನಡೆಸಿದಂತೆ ನಡೀಬೇಕು. ಇದನ್ನು ತಲೆಯಲ್ಲಿ ಇಟ್ಟುಕೊಂಡರೆ ಬದುಕು ಸಮಾಧಾನದಿಂದ ಇರತ್ತೈತಿ. ಇಲ್ಲವಾದರೆ ಅಪಘಾತ-ವಾಗತ್ತೈತಿ. ಇಲ್ಲಿ ನಿಸರ್ಗದ ಇಚ್ಛೆಯಂತೆ ಬದುಕಬೇಕು. ನನ್ನ ಇಚ್ಛೆಯಂತೆ ಬದುಕಲು ಹೋದರೆ ದುಃಖ ಆಗತ್ತೈತಿ ಅನ್ನೋದನ್ನು ತಿಳಕೊಂಡು ಬದುಕಬೇಕು.

ಹಾಗಾದರೆ ಬಯಕೆಗಳೇ ಇರಬಾರದೇನು? ಉಣಬೇಕು, ತಿನಬೇಕು, ಮನೆ ಕಟ್ಟಿಸಬೇಕು, ಮಕ್ಕಳನ್ನು ಚೆನ್ನಾಗಿ ಓದಿಸಬೇಕು ಎಲ್ಲವೂ ಬೇಕು. ಬಯಸೋದರಲ್ಲಿ ಏನೂ ತಪ್ಪಿಲ್ಲ. ಬಯಕೆಗಳಲ್ಲಿ ಪಾಪವಿಲ್ಲ. ಆದರೆ ಮನುಷ್ಯನ ಮನಸ್ಸು ಏನೈತಲ್ಲ, ಅದು ಮಂಗ್ಯಾ ಇದ್ದಾಂಗೆ ಇದೆ. ಅದು ಒಂದೇ ಬಯಕೆಗೆ ನಿಲ್ಲೋದಿಲ್ಲ. ಬಯಕೆಗಳ ಪಟ್ಟಿ ಬೆಳೀತಾ ಹೋಗತ್ತೈತಿ. ಅದಕ್ಕೆ ಬಯಕೆ ಪಡು. ಆದರೆ ನಾನು ಬಯಸಿದ್ದೆಲ್ಲಾ ಸಿಗೋದಿಲ್ಲ ಎನ್ನುವುದನ್ನು ನೆನಪಿನಲ್ಲಿ ಇಟ್ಟುಕೊ ಅಷ್ಟೆ. ಎಲ್ಲವನ್ನೂ ನಿಸರ್ಗದ ಇಚ್ಛೆಗೆ ಅರ್ಪಿಸಿ ಬದುಕುವುದು ಅಷ್ಟೆ. ನಂದು ಎನ್ನುವುದನ್ನು ಹೃದಯದಿಂದ ತೆಗೆದುಬಿಟ್ಟರೆ ನಮಗೆ ಕೋರ್ಟ್‌ಗಳೇ ಬೇಕಾಗಿಲ್ಲ. 'ನ' ಎನ್ನುವ ಜಾಗದಲ್ಲಿ 'ನಿ' ಹಾಕಿದರೆ ಭಕ್ತನಾಗುತ್ತಾನೆ. 'ಎನ್ನ ವಾಮ-ಕ್ಷೇಮ ನಿಮ್ಮದಯ್ಯಾ, ಎನ್ನ ಹಾನಿ-ವೃದ್ಧಿ ನಿಮ್ಮದಯ್ಯಾ, ಎನ್ನ ಮಾನಾಪಮಾನವೂ ನಿಮ್ಮದಯ್ಯಾ, ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವಾ' ಎಂದು ಹೇಳುತ್ತಾರೆ ಬಸವಣ್ಣನವರು.

'ನನ್ನ ಇಚ್ಛೆಯಂತೆ ಏನೂ ನಡೆಯೋದಿಲ್ಲ ಅನ್ನೋದು ಗೊತ್ತೈತಿ. ಎಲ್ಲಾ ನಿನ್ನ ಇಚ್ಛೆಯಂತೆ ನಡೆಯುತ್ತದೆ ಎನ್ನುವುದೂ ಗೊತ್ತಿದೆ. ಆದರೂ ಬದುಕೆಂದ ಮೇಲೆ ಕಷ್ಟ ನಷ್ಟಗಳು, ಸುಖ ಎಲ್ಲವೂ ಬರ್ತವೆ. ಅವುಗಳನ್ನು ಎದುರಿಸಲು ಶಕ್ತಿ ಕೊಡು ಅಷ್ಟೆ' ಎಂದು ಕವಿ ರವೀಂದ್ರರು ಕೇಳಿಕೊಳ್ಳು-ತ್ತಾರೆ. ಯಾರಾದರು ವಿಷ ಕುಡಿದು ಸತ್ತರೆ ನಾವು ಅವರು ಆತ್ಮಹತ್ಯೆ ಮಾಡಿಕೊಂಡರು ಎನ್ನುತ್ತೇವೆ. ನೇಣು ಹಾಕಿಕೊಳ್ಳುವುದು, ಬಾವಿಗೆ ಹಾರಿ ಪ್ರಾಣ ಬಿಡುವುದು ಆತ್ಮಹತ್ಯೆ ಅಲ್ಲ. ಅದು ಕೇವಲ ದೇಹದ ಹತ್ಯೆ ಅಷ್ಟೆ. ದೇವರು ಕೊಟ್ಟ ಈ ಸುಂದರ ಜೀವನವನ್ನು ನಮ್ಮ ಕೈಯ್ಯಾರೆ ಹಾಳು ಮಾಡಿದರೆ ಮಾತ್ರ ಅದು ಆತ್ಮಹತ್ಯೆ.ದೇಹ ಹೋದರಷ್ಟೆ ಆತ್ಮಹತ್ಯೆ ಅಲ್ಲ. ಜೀವನದಲ್ಲಿ ಕಷ್ಟ ಬಂದರೆ ನಾವು ಜೀವಂತ ಇದ್ದೇವಿ ಅಂತ ಅರ್ಥ. ಯಾರೂ ಜಾಲಿ ಗಿಡಕ್ಕೆ ಕಲ್ಲು ಒಗೆಯೋದಿಲ್ಲ. ಮಾವಿನ ಗಿಡಕ್ಕೇ ಕಲ್ಲು ಒಗೆಯುತ್ತಾರೆ. ನಮಗೆ ಕಷ್ಟವೆಂಬ ಕಲ್ಲುಗಳು ಬಂದು ಬೀಳುತ್ತಿವೆ ಅಂದ್ರ ನಾವು ಮಾವಿನ ಗಿಡ ಎನ್ನುವುದನ್ನು ತಿಳಕೊಂಡು ಬದುಕಬೇಕು. ಮನುಷ್ಯ ಹೇಡಿಯಾಗಬಾರದು; ಧೀರನಾಗಿ ಬದುಕಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಫೆಬ್ರುವರಿ 20, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಸಪ್ತಮಿ ಗಂ. 09-59 ನಕ್ಷತ್ರ: ವಿಶಾಖಾ ಗಂ. 13-30 ಯೋಗ: ಧ್ರುವ ಗಂ. 11-34 ಕರಣ: ಬವ ಗಂ. 09-59, ಕುಂಭ ಮಾಸದ 08 ನೇ ದಿನ, ಮಳೆನಕ್ಷತ್ರ: ಶತಭಿಷ 1.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 06-54 **ಸೂರ್ಯಾಸ್ತ:** 06-34
ಮುಸ್ಲಿಂ ದಿನಾಂಕ: 21 ಶಬನ್
ದಿನ ವಿಶೇಷ: ಜಾನಕಿ ಜನ್ಮ, ವೈಕಟ್ವಾಷ್ಟಮಿ, ಅದೃಷ್ಟ ಸಂಖ್ಯೆ: 12, 4

ಮೇಷ: ಹೊಸ ಅತಿಥಿಯನ್ನು ಸ್ವಾಗತಿಸಲು ಉತ್ಸುಕರಾಗುತ್ತೀರಿ. ಕೂದಲು ಉದುರುವಿಕೆ ಇಲ್ಲವೇ ಚರ್ಮದಲ್ಲಿನ ಬದಲಾವಣೆ ತೀರಾ ಚಿಂತೆ ಉಂಟುಮಾಡುವುದು. ಉತ್ತಮ ಭೋಜನ ಮಾಡುವಿರಿ.

ವೃಷಭ: ಷೇರು ಮಾರುಕಟ್ಟೆಯಲ್ಲಿ ಎಣಿಕೆಗಿಂತ ಭಿನ್ನ ವಿದ್ಯಮಾನಗಳು ನಡೆಯಲಿವೆ. ಪ್ರಾದೇಶಿಕ ಹಾಗೂ ಅಳಿವಿನಂಚಿನಲ್ಲಿ ಇರುವ ಭಾಷೆಯ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಆಲೋಚನೆ ನಡೆಸುವಿರಿ.

ಮಿಥುನ: ವಾರ್ಷಿಕವಾಗಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಿಗೆ ಪ್ರಯಾಣ ಬೆಳೆಸುವಿರಿ. ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಹಣ ಮೀಸಲಿಡುವಿರಿ. ಮಕ್ಕಳ ಜತೆ ಕಾಲ ಕಳೆಯುವಿರಿ.

ಕರ್ಕಾಟಕ: ಯುವ ಜನತೆಯಲ್ಲಿ ಆಯ್ಕೆ ಮಾಡುವ ವಿಚಾರವಾಗಿ ಗೊಂದಲ ಉಂಟಾಗುವುದು. ತಾಳ್ಮೆ ಇದ್ದಲ್ಲಿ ಅಭಿಲಾಷೆಗಳು ಈಡೇರಲಿವೆ. ಕಾದಂಬರಿ ಓದುವ ಹವ್ಯಾಸಕ್ಕೆ ಸಂಗಾತಿ ದೊರೆಯಲಿದ್ದಾರೆ.

ಸಿಂಹ: ಉಂಡ ಮನೆಗೆ ಎರಡು ಬಗೆಯುವವರ ಬಗ್ಗೆ ಅನುಭವ ಆಗಲಿದೆ. ಇರುವ ಜಾಗ ಹಾಗೂ ಸಮಯವನ್ನು ನೋಡಿ ವ್ಯವಹಾರ ಮಾಡುವಿರಿ. ಉತ್ತಮ ಉಪನ್ಯಾಸಗಳನ್ನು ಕೇಳುವಿರಿ.

ಕನ್ಯಾ: ಪೊಲೀಸ್ ಅಧಿಕಾರಿ ವರ್ಗದವರಿಗೆ ಈವರೆಗೆ ಇದ್ದಂಥ ರಾಜಕೀಯದವರ ಒತ್ತಡ ಕಡಿಮೆಯಾಗಲಿದೆ. ವ್ಯವಹಾರಗಳಲ್ಲಿ ಮೂಗು ತೂರಿಸುವಿಕೆಯಿಂದ ರೋಸಿ ಹೋಗುವಿರಿ.

ತುಲಾ: ಮಗಳ ಮದುವೆಯ ವಿಚಾರದಲ್ಲಿ ಇಡುವ ಹೆಜ್ಜೆ ಬಹಳ ಪ್ರಮುಖವಾಗಿ-ರುತ್ತದೆ. ವಿದೇಶದಲ್ಲಿರುವ ಮಕ್ಕಳಿಂದ ಶುಭ ಸಂದೇಶ ಪಡೆಯುವಿರಿ. ಉತ್ಸಾಹ ಹೆಚ್ಚಾಗುವುದು.

ವೃಶ್ಚಿಕ: ಮೃತ ವ್ಯಕ್ತಿಯೊಬ್ಬರಿಗೆ ಸಂಬಂಧಪಟ್ಟಂಥ ಕೆಲಸಗಳನ್ನು ಮಾಡುವಲ್ಲಿ ಅನೇಕ ಎಡರು ತೊಡರುಗಳನ್ನು ಅನುಭವಿಸುವಿರಿ. ರಾತ್ರಿಯ ಸಮಯದಲ್ಲಿ ಪ್ರಯಾಣ ಬೇಡ.

ಧನು: ಬೃಹತ್ ಯೋಜನೆಗಳಿಗೆ ಅವಕಾಶಗಳು ಹಾಗೂ ಸನ್ನಿವೇಶಗಳು ದೊರೆತು ಜೀವಬಂದಂತಾಗುವುದು. ಯಾರೊಂದಿಗೆ ವ್ಯವಹಾರ ನಡೆಸುವಾಗಲೂ ಹಲವು ಬಾರಿ ಯೋಚನೆ ಮಾಡುವುದು ಸೂಕ್ತ.

ಮಕರ: ಕೃಷಿಕರಿಗೆ ಕಾಡು ಪ್ರಾಣಿಗಳಿಂದ ತೊಂದರೆಗಳು ಸಂಭವಿಸಬಹುದು. ಕೆಲಸಗಾರರಿಂದ ಅಸಹಕಾರ ಕಂಡುಬರಲಿದೆ. ಹೊಸ ಮನೆಯ ಬಗ್ಗೆ ಇತರರು ಕುಂದುಕೊರತೆಗಳನ್ನು ಹೇಳುವರು.

ಕುಂಭ: ಎಷ್ಟೇ ಅನುಭವ ಇದ್ದರೂ ಜೀವನದ ಪಾಠವನ್ನು ಕಲಿಯುವುದು ಅಗತ್ಯ. ಗುಡಿ ಕೈಗಾರಿಕೆಯವರಿಗೆ ಅಥವಾ ಸಣ್ಣ ಕೈಗಾರಿಕೆಯವರಿಗೆ ಸಾಕಷ್ಟು ಲಾಭ ಸಿಗಲಿದೆ. ಕಫದ ವ್ಯಾಧಿ ಹೆಚ್ಚಾಗಲಿದೆ.


ಮೀನ: ಔಷಧ ಮಾರಾಟಗಾರರಿಗೆ ಅಥವಾ ಪ್ರತಿನಿಧಿಗಳಿಗೆ ಕಾರ್ಯಾನುಕೂ-ಲವಾಗಲಿದೆ. ಪ್ರಯಾಣ ಮಾಡಲೇಬೇಕಾದ ಸಂದರ್ಭವಿದೆ. ಬರವಣಿಗೆಯಲ್ಲಿ ಉತ್ಸಾಹ ಮೂಡುವುದು, ಸಂತೋಷ ಹೊಂದುವಿರಿ.

ಪದಬಂಧ 5959

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಭಿಮಾನಿಯಿಂದ ಹೆಚ್ಚಿದ ಆತ್ಮಗೌರವ! (4)
3.ದಾಯಾದಿಯ ಬೀಳ್ಕೊಡುಗೆ! (3)
4.ಇದು ಸುಲಭವಲ್ಲದುದು (3)
6.ಕಾರನ್ನೇರಿದ ಚಾರನ ಕೆಲಸವೆಲ್ಲಾ ಬೇಕಾಬಿಟ್ಟಿ! (4)
8.ಯತಿಗೆ ಅನುಗುಣವಾಗಿ ಉಚಿತವಾಗುವಂತೆ! (4)
10.ಇಂಪಾದ ಧ್ವನಿ (3)
12.ಮದುವೆಯಲ್ಲಿ ವಧು ವರರ ಮುಂಗೈಗೆ ಕಟ್ಟುವ ರಕ್ಷಾಸೂತ್ರ (3)
13.ತರಂಗದಂತಿರುವ ಒಳಮನಸ್ಸು (4)
15.ಹರಿಯನ್ನು ನೆನೆಯುತ್ತಾ ನಡೆಸಿದ ದೋಣಿ! (4)
16.ದಾವಣಿ ಧರಿಸಿ ಹೇಳಿದ ಜನಪದ ಹಾಡು (3)
17.ಗೊರಟೆಯಲ್ಲ! ಹಣ್ಣಿನ ಮೇಲುಹೊದಿಕೆ! (3)
18.ಎಳೆತನದಿಂದಲೇ ಮೊಳೆತ ಸ್ನೇಹ (4)

ಮೇಲಿಂದ ಕೆಳಕ್ಕೆ
2.ಗರ ಬಡಿದಿರುವ ಪಟ್ಟಣ (3)
3.ನಯವಾಗಿ ತೋರುವ ನಮ್ರತೆ (3)
5.ದೂರನ್ನು ತರುತ್ತಿರುವ ರಾಯಭಾರಿ (2)
7.ಚಾಕಚಕ್ಯತೆಯಿಂದ ಕೆಲಸ ಮಾಡುವ ಆಳು! (3)
9.ಚೀಲ ತರುವಾಗ ಹಾಕಿದ ಬಾಗಿಲಿನ ಕೊಂಡಿ (3)
11.ತನಗೆ ತಾನು ಮಾತಾಡಿಕೊಳ್ಳುವುದು (3)
12.ಒಂದು ಸಣ್ಣ ಚರ್ಮವಾದ್ಯ (3)
13.ಅಂಬುಧಿಗೆ ಬಿದ್ದಿರುವ ಬಾಣ (2)
14.ಲಾಗ ಹಾಕುವಾಗ ಆದ ಗದ್ದಲ! (3)
15.ಹೆಣ್ಣಿಗೆ ಬೇಕಾದ ಬಾಚಣಿಕೆ (3)



5958ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ದಾಯಾದಿ 2.ಕದ
5.ಶರಾವತಿ 7.ನಿರರ್ಥಕ 9.ಕರಿ
10.ಚನ್ನವೀರಕಣವಿ
12.ಗೋಲಂದು 15.ಭದ್ರಾವತಿ
16.ಮಂಗಳೂರು 17.ಕಡ 18.ಅಚಲ

ಮೇಲಿಂದ ಕೆಳಕ್ಕೆ:
1.ದಾರ್ಶನಿಕ 3.ದಶಕ
4.ಪಾತಿ 6.ವರಕವಿ
8.ಕಕ್ಷವೀ 10.ಚದುರಂಗ
11.ಕಳಭ 13.ಪ್ರತಿಫಲ
14.ಮರುಕ 16.ಮಂಜು

ಸುಡೊಕು 6344

7		5	9					
					2		9	
2		9	3	7		5		4
9		4						2
			4		9	1		
	3					9		6
4					8		7	
		1	7			2		3
8		2		5			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6343 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

ಎನ್‌ಇಸಿಸಿ ಮೊಟ್ಟೆ ಧಾರಣೆ


ಬೆಂಗಳೂರು	
100ಕ್ಕೆ	₹475
12 ಕ್ಕೆ	₹65
ಮೈಸೂರು	
100ಕ್ಕೆ	₹475

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹466-685

ದ್ವಿತಳಿ (ಬಿ.ವಿ) ₹233-825

ಷೇರುಪೇಟೆ ವಹಿವಾಟು 28



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,945
ಇಂದಿನ ಅಂತ್ಯ	22,932
▼	12
ದಿನದ ಕನಿಷ್ಠ	22,814

ವಿನಿಮಯ ದರ

$ ಡಾಲರ್	86.93
£ ಪೌಂಡ್	109.32
€ ಯುರೊ	90.61
¥ ಯೆನ್ (100ಕ್ಕೆ)	57

50 ದಿನದಲ್ಲಿ 10 ಗ್ರಾಂ ಬೆಲೆ ₹10 ಸಾವಿರ ಏರಿಕೆ

ಚಿನ್ನ ಬಲು ದುಬಾರಿ



ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ತಲೆದೋರಿರುವ ಅನಿಶ್ಚಿತತೆಯಿಂದಾಗಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ, ಚಿನ್ನದ ಧಾರಣೆಯು ಮತ್ತೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಕಳೆದ ಐವತ್ತು ದಿನಗಳಲ್ಲಿ 10 ಗ್ರಾಂ ಚಿನ್ನದ ದರದಲ್ಲಿ ₹10,010 ಏರಿಕೆಯಾಗಿದೆ. ಸದ್ಯ ಮದುವೆ ಹಾಗೂ ಇತರೆ ಶುಭ ಸಮಾರಂಭಗಳು ನಡೆಯುತ್ತಿವೆ. ಇದರ ಬೆನ್ನಲ್ಲೇ ಬೆಲೆ ಏರಿಕೆಯಾಗಿರುವುದರಿಂದ ಗ್ರಾಹಕರ ಜೇಬಿಗೆ ಕತ್ತರಿ ಬಿದ್ದಿದೆ ಎಂದು ವರ್ತಕರು ಹೇಳಿದ್ದಾರೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹900 ಏರಿಕೆಯಾಗಿ ₹89,400 ಆಗಿದೆ. ಇದೇ 14ರಂದು ನಡೆದ ವಹಿವಾಟಿನಲ್ಲೂ ಧಾರಣೆಯು ಇಷ್ಟೇ ಮಟ್ಟಕ್ಕೆ ತಲುಪಿ ದಾಖಲೆ ಬರೆದಿತ್ತು.

ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ದರವು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹89,000 ಆಗಿದೆ.

ಪ್ರಸಕ್ತ ವರ್ಷದ ಜನವರಿ 1ರಂದು 10 ಗ್ರಾಂ ಚಿನ್ನದ ಬೆಲೆಯು ₹79,390 ಇತ್ತು. ಇಲ್ಲಿಯವರೆಗೆ ಶೇ 12.6ರಷ್ಟು ದರ ಹೆಚ್ಚಳವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಜಾಗತಿಕ ಬಿಕ್ಕಟ್ಟು ಇನ್ನೂ ಉಪಶಮನಗೊಂಡಿಲ್ಲ. ಮತ್ತೊಂದೆಡೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿಯಿಂದಾಗಿ ವ್ಯಾಪಾರ ವಹಿವಾಟಿನಲ್ಲಿ ಅನಿಶ್ಚಿತತೆ ತಲೆದೋರಿದೆ. ಹಾಗಾಗಿ, ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಹಳದಿ ಲೋಹದತ್ತ ದೃಷ್ಟಿ ನೆಟ್ಟಿದ್ದಾರೆ. ಇದರಿಂದ ಬೆಲೆಯು ನಾಗಾಲೋಟದಲ್ಲಿ ಸಾಗುತ್ತಿದೆ' ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಪ್ರತಿ ಕೆ.ಜಿ ಬೆಳ್ಳಿ ಧಾರಣೆಯು ₹600 ಏರಿಕೆಯಾಗಿದ್ದು, ₹99,600ರಂತೆ ಮಾರಾಟವಾಗಿದೆ.

'ಸದ್ಯದ ಪರಿಸ್ಥಿತಿಯಲ್ಲಿ ಚಿನ್ನವು ಸುರಕ್ಷಿತ ಹೂಡಿಕೆಯಾಗಿದೆ. ಮತ್ತೊಂದೆಡೆ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ಚಿನ್ನ ಸಂಗ್ರಹಕ್ಕೆ ಹೆಚ್ಚು ಒತ್ತು ನೀಡಿವೆ. ಇದು ಕೂಡ ದರ ಏರಿಕೆಯಾಗಲು ಕಾರಣವಾಗಿದೆ' ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ವಿಶ್ಲೇಷಕ ಜತೀನ್ ತ್ರಿವೇದಿ ಹೇಳಿದ್ದಾರೆ.

'ಜನವರಿಯಲ್ಲಿ ಅಮೆರಿಕದ ಫೆಡರಲ್ ರಿಸರ್ವ್‌ನ ಹಣಕಾಸು ನೀತಿ ಸಮಿತಿ ಸಭೆ ನಡೆದಿತ್ತು. ಇನ್ನೂ ಈ ಸಭೆಯ ಸಾರಾಂಶದ ವರದಿ ಪ್ರಕಟ ಆಗಿಲ್ಲ. ಈ ವರದಿಯು ಚಿನ್ನದ ಬೆಲೆ ಏರಿಳಿತದ ಮೇಲೆ ಪರಿಣಾಮ ಬೀರಲಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ತಿಳಿಸಿದ್ದಾರೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹187.50
ಆರ್‌ಎಸ್‌ಎಸ್-5	₹182.50
ಗುಡ್ ಲಾಟ್	₹177.50

(ಪ್ರತಿ ಕೆ.ಜಿಗೆ)

ದೆಹಲಿ, ಮುಂಬೈನಲ್ಲಿ ಆಮದು ಕಾರು ಮಾರಾಟ?

2 ಮಳಿಗೆ ಸ್ಥಾಪನೆಗೆ ಟೆಸ್ಲಾ ಸಿದ್ಧತೆ



ನವದೆಹಲಿ (ರಾಯಿಟರ್ಸ್): ಅಮೆರಿಕದ ವಿದ್ಯುತ್‌ಚಾಲಿತ ಕಾರು ತಯಾರಿಕಾ ಕಂಪನಿ ಟೆಸ್ಲಾ, ನವದೆಹಲಿ ಮತ್ತು ಮುಂಬೈನಲ್ಲಿ ತನ್ನ ಮಾರಾಟ ಮಳಿಗೆ ತೆರೆಯುವ ಸಾಧ್ಯತೆಯಿದೆ ಎಂದು ಬುಧವಾರ ಮೂಲಗಳು ತಿಳಿಸಿವೆ.

ಭಾರತದಲ್ಲಿ ಕಂಪನಿಯು ಕಾರು ತಯಾರಿಕಾ ಘಟಕ ಸ್ಥಾಪಿಸುತ್ತಿಲ್ಲ. ಇದಕ್ಕೆ ಬದಲಾಗಿ ಜರ್ಮನಿಯಲ್ಲಿರುವ ತನ್ನ ಘಟಕದಿಂದ ಕಾರುಗಳನ್ನು ಇಲ್ಲಿಗೆ ಆಮದು ಮಾಡಿಕೊಂಡು ಮಾರಾಟಕ್ಕೆ ಮುಂದಾಗಿದೆ ಎಂದು ಹೇಳಿವೆ.

ಅಮೆರಿಕಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಟೆಸ್ಲಾ ಸಿಇಒ ಇಲಾನ್ ಮಸ್ಕ್ ಅವರೊಟ್ಟಿಗೆ ಬಾಹ್ಯಾಕಾಶ, ಮೊಬಿಲಿಟಿ ಮತ್ತು ತಂತ್ರಜ್ಞಾನ ವಿಷಯ ಕುರಿತು ಚರ್ಚಿಸಿದ್ದರು. ಇದರ ಬೆನ್ನಲ್ಲೇ ದೇಶದಲ್ಲಿ ವಿವಿಧ ಹುದ್ದೆಗಳ ನೇಮಕಕ್ಕೆ ಕಂಪನಿಯು ಅರ್ಜಿ ಆಹ್ವಾನಿಸಿದೆ.

ಟೆಸ್ಲಾ ವಿಶ್ವದ ಅತಿದೊಡ್ಡ ಇ.ವಿ ಕಾರು ತಯಾರಿಕಾ ಕಂಪನಿಯಾಗಿದೆ. 2022ರಿಂದಲೂ ದೇಶದ ಇ.ವಿ ಮಾರುಕಟ್ಟೆ ಪ್ರವೇಶಿಸಲು ಸಿದ್ಧತೆ ನಡೆಸಿತ್ತು. ಕಳೆದ ವರ್ಷವೇ ದೇಶದಲ್ಲಿ ಷೋರೂಂ ಆರಂಭಿಸುವ ಸಂಬಂಧ ಸೂಕ್ತ ಸ್ಥಳದ ಹುಡುಕಾಟ ನಡೆಸಿತ್ತು.

ಸದ್ಯ ನವದೆಹಲಿಯ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಇರುವ ಏರೊಸಿಟಿಯಲ್ಲಿ ಷೋರೂಂ ಸ್ಥಾಪನೆ ಸಂಬಂಧ ಸ್ಥಳ ಗುರುತಿಸಿದೆ. ಈ ಪ್ರದೇಶದಲ್ಲಿ ಕಾರ್ಪೊರೇಟ್ ಕಂಪನಿಗಳು ಸೇರಿ ಐಷಾರಾಮಿ ಹೋಟೆಲ್, ಮಾರಾಟ ಮಳಿಗೆಗಳಿವೆ ಎಂದು ಮೂಲಗಳು ತಿಳಿಸಿವೆ.

ಮುಂಬೈನ ಪ್ರಮುಖ ವಾಣಿಜ್ಯ ಕೇಂದ್ರವಾದ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್ ಬಳಿ ಸ್ಥಳ ಗುರುತಿಸಿದೆ. ನವದೆಹಲಿ ಮತ್ತು ಮುಂಬೈನಲ್ಲಿ ತಲಾ 5 ಸಾವಿರ ಚದರ ಅಡಿ ಸ್ಥಳವನ್ನು ಗುರುತಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆದರೆ, ಭಾರತದಲ್ಲಿ ಯಾವ ದಿನಾಂಕದಿಂದ ಕಾರುಗಳ ಮಾರಾಟ ಆರಂಭಿಸಲಿದೆ ಎಂದು ಟೆಸ್ಲಾ ಅಧಿಕೃತವಾಗಿ ತಿಳಿಸಿಲ್ಲ. ಈ ಮಳಿಗೆಗಳು ಕಾರುಗಳ ಮಾರಾಟಕ್ಕಷ್ಟೇ ಸೀಮಿತವಾಗಿವೆ. ಸೇವಾ ಕೇಂದ್ರಗಳಿಗೆ ಇಲ್ಲಿ ಅವಕಾಶವಿಲ್ಲ ಎಂದು ಹೇಳಿವೆ.

ಈ ಬಗ್ಗೆ ಟೆಸ್ಲಾ ಅಧಿಕೃತವಾಗಿ ಯಾವುದೇ ಮಾಹಿತಿ ನೀಡಿಲ್ಲ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-37000
ಹಳತು	45500-49000
ಕುಮಟ	
ಚಾಲಿ	30500-36599
ಚಿಪ್ಪು	15099-25099
ಕೋಕ	6569-18869
ಫ್ಯಾಕ್ಟರಿ	3099-22879
ಹೊಸಚಾಲಿ	27589-34200
ಶಿವಮೊಗ್ಗ	
ಬೆಟ್ಟೆ	46009-56609
ಗೊರಬಲು	16160-26786
ರಾಶಿ	32899-51899
ಸರಕು	50069-84240
ಸಿದ್ದಾಪುರ	
ಬಿಳಿಗೋಟು	21899-25299
ಚಾಲಿ	32409-36999
ಕೋಕ	12609-14609
ಹೊಸಚಾಲಿ	24409-34999
ಕೆಂಪುಗೋಟು	18699-27909
ರಾಶಿ	41099-49239
ತಟ್ಟಿಬೆಟ್ಟೆ	29099-36109
ಶಿರಸಿ	
ಬೆಟ್ಟೆ	27009-37099
ಬಿಳಿಗೋಟು	14199-28808
ಚಾಲಿ	31018-35613
ಕೆಂಪುಗೋಟು	10999-23661
ರಾಶಿ	43099-46399

ಮುಂಬೈ ಧಾರಣೆ

ಶೇಂಗಾ

19-02-2025

ಜಾವಾ 70/80(ಹೊಸ)	9900-10000
ಜಾವಾ 80/90(ಹೊಸ)	9400-9500
ದಪ್ಪ ಮಧ್ಯಪ್ರದೇಶ(ಹೊಸ)	7800-7900
ದಪ್ಪ ಗುಜರಾತ್(ಹೊಸ)	8100-8200

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹**86,500** (85,500)

ಬೆಳ್ಳಿ ಕೆ.ಜಿ ₹**97,550** (96,100)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮೋದಿಗೂ ಮನವರಿಕೆ ಮಾಡಿರುವೆ: ಟ್ರಂಪ್

'ಸುಂಕದವನ ಮುಂದೆ ಸುಖ, ದುಃಖ ಹೇಳಬೇಡಿ'



ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಪಿಟಿಐ): 'ಸುಂಕ ನೀತಿಗೆ ಸಂಬಂಧಿಸಿದಂತೆ ನನ್ನೊಂದಿಗೆ ಯಾರೊಬ್ಬರೂ ವಾದಿಸಲು ಸಾಧ್ಯವಿಲ್ಲ. ಅವರ ಮನವಿ ಆಲಿಸುವುದಿಲ್ಲ. ಪ್ರತಿ ಸುಂಕ ವಿಧಿಸಲು ಸಿದ್ಧಪಡಿಸಿರುವ ರಾಷ್ಟ್ರಗಳ ಪಟ್ಟಿಯಿಂದ ಭಾರತವನ್ನು ಕೈಬಿಡುವುದಿಲ್ಲ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೂ ಸ್ಪಷ್ಟಪಡಿಸಿದ್ದೇನೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಟೆಸ್ಲಾ ಸಿಇಒ ಇಲಾನ್ ಮಸ್ಕ್ ಜೊತೆಗೆ ಫಾಕ್ಸ್ ನ್ಯೂಸ್‌ಗೆ ನೀಡಿರುವ ಜಂಟಿ ಸಂದರ್ಶನದಲ್ಲಿ ಟ್ರಂಪ್ ಈ ಮಾಹಿತಿ ಹಂಚಿಕೊಂಡಿದ್ದಾರೆ.

'ಅಮೆರಿಕದಿಂದ ರವಾನಿಸುವ ಸರಕುಗಳ ಮೇಲೆ ನೀವು (ಭಾರತ) ಎಷ್ಟು ಸುಂಕ ವಿಧಿಸುತ್ತೀರೊ ಅದಕ್ಕೆ ಪ್ರತಿಯಾಗಿ ನಾನು ಸುಂಕ ವಿಧಿಸುತ್ತೇನೆ. ಮೋದಿ ಅವರೊಂದಿಗಿನ ಚರ್ಚೆಯಲ್ಲೂ ಈ ಬಗ್ಗೆ ಅವರಿಗೆ ಮನವರಿಕೆ ಮಾಡಿದ್ದೇನೆ. ಭಾರತಕ್ಕಷ್ಟೇ ಈ ನೀತಿ ಅನ್ವಯಿಸುವುದಿಲ್ಲ. ಉಳಿದ ದೇಶಗಳಿಗೂ ಅನ್ವಯಿಸುತ್ತದೆ' ಎಂದು ಟ್ರಂಪ್ ಹೇಳಿದ್ದಾರೆ.

ಪ್ರಸ್ತುತ ಅಮೆರಿಕದಿಂದ ಭಾರತಕ್ಕೆ ಆಮದಾಗುವ ವಾಹನಗಳ ಮೇಲೆ ಶೇ 100ರಷ್ಟು ಸುಂಕ ವಿಧಿಸಲಾಗುತ್ತಿದೆ. ಹೊಸ ಸುಂಕ ನೀತಿಯಡಿ ಅಮೆರಿಕವು ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಷ್ಟೇ ಪ್ರಮಾಣದಲ್ಲಿ ಸುಂಕ ವಿಧಿಸುವ ಸಾಧ್ಯತೆಯಿದೆ.

'ಭಾರತವು ನಮ್ಮ ಸರಕುಗಳಿಗೆ ಅತಿಹೆಚ್ಚು ಸುಂಕ ವಿಧಿಸುವ ರಾಷ್ಟ್ರವಾಗಿದೆ' ಎಂದು ಹೇಳಿದ್ದಾರೆ.

'ನಾನು ಶೇ 25ರಷ್ಟು ಸುಂಕ ವಿಧಿಸುವುದಾಗಿ ಹೇಳಿದರೆ ಸುಂಕ ಹೆಚ್ಚಾಯಿತು ಎಂದು ಪ್ರತಿಕ್ರಿಯಿಸುತ್ತಾರೆ. ನಾವು ಅವರಷ್ಟೇ ಸುಂಕ ವಿಧಿಸಲು ಮುಂದಾದರೆ ಆಗ ಅವರು ಸುಂಕ ಕಡಿಮೆಗೊಳಿಸುತ್ತಾರೆ' ಎಂದು ಹೇಳಿದ್ದಾರೆ.

'ಜಗತ್ತಿನ ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ಅಮೆರಿಕದಿಂದ ರವಾನಿಸುವ ಸರಕುಗಳಿಗೆ ಭಾರತವು ಅತಿಹೆಚ್ಚು ಸುಂಕ ವಿಧಿಸುತ್ತದೆ. ಇದಕ್ಕಾಗಿ ನಾನು ಅವರನ್ನು ಟೀಕಿಸುವುದಿಲ್ಲ. ಇದರ ಅಗತ್ಯವೂ ಅವರಿಗೆ ಇದೆ. ಆದರೆ, ವ್ಯವಹಾರ ನಡೆಸಲು ಪರ್ಯಾಯ ದಾರಿಯಿದೆ' ಎಂದು ಮೋದಿ ಭೇಟಿ ವೇಳೆ ಟ್ರಂಪ್ ಹೇಳಿಕೆ ನೀಡಿದ್ದರು.

'ಭಾರತದಲ್ಲಿ ಜಗತ್ತಿನಲ್ಲೇ ಅಧಿಕ ತೆರಿಗೆ'

ನ್ಯೂಯಾರ್ಕ್/ಫ್ಲಾರಿಡಾ (ಪಿಟಿಐ): 'ಭಾರತವು ಜಗತ್ತಿನಲ್ಲಿಯೇ ಅತ್ಯಧಿಕ ತೆರಿಗೆ ದರ ಪ್ರಮಾಣವನ್ನು ಹೊಂದಿರುವ ದೇಶವಾಗಿದೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ಮತದಾನ ಪ್ರಮಾಣ ಹೆಚ್ಚಿಸುವ ಉದ್ದೇಶಕ್ಕಾಗಿ ಭಾರತಕ್ಕೆ ₹182 ಕೋಟಿ (21 ಮಿಲಿಯನ್ ಡಾಲರ್) ಆರ್ಥಿಕ ನೆರವು ಒದಗಿಸುವ ಅಗತ್ಯವೇನಿದೆ' ಎಂದು ಟ್ರಂಪ್ ಅವರು ಪ್ರಶ್ನಿಸಿದ್ದಾರೆ.

'ಮತದಾನ ಪ್ರಮಾಣ ಹೆಚ್ಚಿಸಲು ಭಾರತ ಚುನಾವಣಾ ಆಯೋಗಕ್ಕೆ 21 ಮಿಲಿಯನ್ ಡಾಲರ್ ಕೊಡುಗೆ ನೀಡಲಾಗಿದೆ' ಎಂಬ ಎಲಾನ್ ಮಸ್ಕ್ ನೇತೃತ್ವದ ಸರ್ಕಾರದ ಕಾರ್ಯದಕ್ಷತಾ ಇಲಾಖೆಯ (ಡಿಒಜಿಇ) ಹೇಳಿಕೆ ಹಿನ್ನಲೆಯಲ್ಲಿ ಈ ಮಾತು ಹೇಳಿದ್ದಾರೆ.

ಮಂಗಳವಾರ ಈ ಕುರಿತ ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕುವ ಸಂದರ್ಭದಲ್ಲಿ ಟ್ರಂಪ್ ಅವರು, 'ಭಾರತದ ತೆರಿಗೆ ದರ ಪ್ರಮಾಣವು ಹೆಚ್ಚಾಗಿರುವ ಕಾರಣದಿಂದಲೇ ಅಲ್ಲಿಗೆ ನಾವು ಪ್ರವೇಶಿಸುವುದೂ ಕಷ್ಟವಾಗಿದೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅಮೆರಿಕದ ತೆರಿಗೆದಾರರ ಹಣ ವ್ಯಯ ಮಾಡಲಾದ ಪಟ್ಟಿಯನ್ನು ಡಿಒಜಿಇ ಫೆ.16ರಂದು ಬಿಡುಗಡೆ ಮಾಡಿದ್ದು, ಈ ಪಟ್ಟಿಯಲ್ಲಿ ಭಾರತದಲ್ಲಿ ಮತ ಪ್ರಮಾಣ ಹೆಚ್ಚಿಸಲು ನೆರವು ನೀಡಿರುವ ಉಲ್ಲೇಖವೂ ಇತ್ತು.

ಬಾಂಗ್ಲಾದೇಶದಲ್ಲಿ ರಾಜಕೀಯ ರೂಪುರೇಷೆ ಬಲಪಡಿಸಲು 29 ಮಿಲಿಯನ್ ಡಾಲರ್ ನೆರವು, ನೇಪಾಳದಲ್ಲಿ ಜೀವವೈವಿಧ್ಯ ಪರಿವರ್ತನೆಗೆ 19 ಮಿಲಿಯನ್ ಡಾಲರ್ ನೆರವು ನೀಡಿರುವ ಉಲ್ಲೇಖವೂ ಉದ್ದೇಶಿತ ಪಟ್ಟಿಯಲ್ಲಿತ್ತು.

> ಮತ ಪ್ರಮಾಣ ಹೆಚ್ಚಿಸಲು ಭಾರತಕ್ಕೆ ನಾವು ಏಕೆ ಹಣ ನೀಡುತ್ತಿದ್ದೇವೆ? ಅವರ ಬಳಿಯೇ ಸಾಕಷ್ಟು ಹಣವಿದೆ. ಭಾರತ ಅತಿ ಹೆಚ್ಚಿನ ತೆರಿಗೆ ದರ ಇರುವ ದೇಶ
>
> **ಡೊನಾಲ್ಡ್ ಟ್ರಂಪ್** ಅಮೆರಿಕ ಅಧ್ಯಕ್ಷ

ಒಕ್ಕೂಟ ಸರ್ಕಾರವು ತೆರಿಗೆದಾರರ ಹಣ ವ್ಯಯಿಸುವ ಕುರಿತು ಪಾರದರ್ಶಕತೆ ಅಗತ್ಯ ಎಂಬ ಒಪ್ಪಂದಕ್ಕೂ ಅವರು ಸಹಿ ಹಾಕಿದರು.

'ಭಾರತ ದೇಶದ ಕುರಿತು ನನಗೆ ಅಗಾಧ ಗೌರವವಿದೆ. ಪ್ರಧಾನಮಂತ್ರಿ ಅವರ ಬಗ್ಗೆಯೂ ಗೌರವವಿದೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಟ್ರಂಪ್, ಕಳೆದ ವಾರವಷ್ಟೇ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೂ ಭೇಟಿ ನೀಡಿದ್ದರು ಎಂದರು.

ಸರ್ಕಾರದ ವಿವಿಧ ಹಂತದಲ್ಲಿ ಸಿಬ್ಬಂದಿ ಗಾತ್ರ ತಗ್ಗಿಸುವುದು ಮಸ್ಕ್ ನೇತೃತ್ವದ ಡಿಒಜಿಇ ಹೊಣೆಯಾಗಿದೆ. ಇದರ ಭಾಗವಾಗಿ ಅವರು, ಜಾಗತಿಕವಾಗಿ ವಿವಿಧ ಬಾಬ್ತಿನಲ್ಲಿ ನೀಡಲಾಗುತ್ತಿದ್ದ ಮಾನವೀಯ ನೆರವು ಮೊತ್ತವನ್ನು ಸ್ಥಗಿತಗೊಳಿಸುವ ನಿಲುವು ಪ್ರಕಟಿಸಿದ್ದರು.

ಅಮೆರಿಕದ ನೆರವು (ಯುಎಸ್‌ಏಡ್) ಸಂಬಂಧಿತ ಅಧಿಕಾರಿಗಳು ಫೆ. 7ರಂದು ವಿಶ್ವದಾದ್ಯಂತ ನೀಡುತ್ತಿರುವ ವಿವಿಧ ಮಾನವೀಯ ನೆರವು ಸ್ಥಗಿತಗೊಳಿಸುವ ನಿಲುವು ಪ್ರಕಟಿಸಿದ್ದರು.

ಜಿಯೊ ಟೆಲಿ ಓಎಸ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಜಿಯೊದಿಂದ ಸ್ಮಾರ್ಟ್ ಟಿ.ವಿಗಳಿಗಾಗಿ 'ಜಿಯೊ ಟೆಲಿ ಓಎಸ್' ಅನ್ನು ಬಿಡುಗಡೆ ಮಾಡಲಾಗಿದೆ.

ಇದು ಸ್ಮಾರ್ಟ್ ಟಿ.ವಿಗಳಿಗೆ ಸಿದ್ಧಪಡಿಸಿರುವ ದೇಶದ ಮೊದಲ ಆಪರೇಟಿಂಗ್ ಸಿಸ್ಟಂ ಆಗಿದೆ. ಹೊಸ ಪೀಳಿಗೆಗೆ ಅನುಕೂಲ ಕಲ್ಪಿಸುವುದು ಇದರ ಉದ್ದೇಶವಾಗಿದೆ ಎಂದು ಕಂಪನಿ ತಿಳಿಸಿದೆ.

ಪ್ರೇಕ್ಷಕರ ಅಗತ್ಯ ಪೂರೈಸುವುದು ಪ್ರಮುಖ ಗುರಿಯಾಗಿದೆ. ದೇಶದಲ್ಲಿ ಟಿ.ವಿ ಸಂಪರ್ಕ ಹೊಂದಿರುವ 3.50 ಕೋಟಿ ಕುಟುಂಬಗಳಿವೆ. ಡಿಜಿಟಲ್ ಮನರಂಜನೆಗೆ ಬೇಡಿಕೆ ಹೆಚ್ಚಾಗುತ್ತಿದೆ. ಈ ನಡುವೆಯೇ ಗ್ರಾಹಕರು ಹಲವು ಸವಾಲು ಎದುರಿಸುತ್ತಿದ್ದಾರೆ. ಅವರಿಗೆ ಅನುಕೂಲ ಕಲ್ಪಿಸಲು ಈ ಸಿಸ್ಟಂ ಅನ್ನು ರೂಪಿಸಲಾಗಿದೆ ಎಂದು ತಿಳಿಸಿದೆ.

ಟಿ.ವಿ ಸಂಪರ್ಕ ಹೊಂದಿರುವ ಕುಟುಂಬಗಳಿಗೆ ವೇಗವಾದ ಮತ್ತು ಅತಿಹೆಚ್ಚು ಕಂಟೆಂಟ್ ಒಳಗೊಂಡ ಸ್ಮಾರ್ಟ್ ಟಿ.ವಿ ಸೇವೆಯನ್ನು ಕೈಗೆಟುಕುವ ದರದಲ್ಲಿ ನೀಡಲಾಗುವುದು. ಯಾವುದೇ ಅಡೆತಡೆ ಇಲ್ಲದೆ ಜಾಗತಿಕ ಹಾಗೂ ಪ್ರಾದೇಶಿಕ ಕಂಟೆಂಟ್ ಸಂಯೋಜನೆಯನ್ನು ಇದು ಒಳಗೊಂಡಿದೆ ಎಂದು ಹೇಳಿದೆ.



ಸಾಹಸ ಹಿಮಾಚಲ ಪ್ರದೇಶದ ಮನಾಲಿಯ ಪರ್ವತ ಶ್ರೇಣಿ ಪ್ರದೇಶಕ್ಕೆ ಭೇಟಿ ನೀಡಿರುವ ಪ್ರವಾಸಿಗರು ಬುಧವಾರ ಬಿಸಿ ಗಾಳಿಯ ಬಲೂನ್‌ನಲ್ಲಿ ಸಾಹಸ ಮೆರೆದರು –ಪಿಟಿಐ ಚಿತ್ರ

ನ್ಯಾಯಾಲಯದ ಆವರಣದಲ್ಲಿ ಭೂಗತ ಪಾತಕಿ ಹತ್ಯೆ

ಕೊಲಂಬೊ (ಪಿಟಿಐ): ಕುಖ್ಯಾತ ಭೂಗತ ಪಾತಕಿ ಗಣೆಮುಲ್ಲೆ ಸಂಜೀವನನ್ನು ಬುಧವಾರ ಬೆಳಿಗ್ಗೆ ನ್ಯಾಯಾಲಯದ ಆವರಣದಲ್ಲಿ ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಕೊಲಂಬೊದ ಉಪನಗರ ಜಿಲ್ಲೆಯಲ್ಲಿ ನಡೆದಿದೆ. ಗುಂಡು ಹಾರಿಸಿದ ಶೂಟರ್ ಸ್ಥಳದಿಂದ ಪರಾರಿಯಾಗಿದ್ದಾನೆ.

ಗುಂಡೇಟಿನಿಂದ ಗಾಯಗೊಂಡಿದ್ದ ಸಂಜೀವನನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟನು ಎಂದು ರಾಷ್ಟ್ರೀಯ ಆಸ್ಪತ್ರೆಯ ನಿರ್ದೇಶಕ ಡಾ. ರುಕ್ಷನ್ ಬೆಲ್ಲಾನಾ ತಿಳಿಸಿದ್ದಾರೆ.

ನ್ಯಾಯಾಲಯಕ್ಕೆ ವಿಚಾರಣೆಗಾಗಿ ಸಂಜೀವನನ್ನು ಬೆಂಗಾವಲಿನಲ್ಲಿ ಕರೆತರಲಾಗಿತ್ತು. ವಕೀಲರ ವೇಷದಲ್ಲಿ ಬಂದಿದ್ದ ಶೂಟರ್, ಆತನ ಮೇಲೆ ಗುಂಡು ಹಾರಿಸಿದ್ದಾನೆ.

ಅದಾನಿ ವಿರುದ್ಧ ಕ್ರಮ ಭಾರತದ ನೆರವು ಕೋರಿದ ಎಸ್‌ಇಸಿ

ವಾಷಿಂಗ್ಟನ್/ನ್ಯೂಯಾರ್ಕ್ (ಪಿಟಿಐ/ರಾಯಿಟರ್ಸ್): ಸೌರಶಕ್ತಿ ಉತ್ಪಾದನಾ ಘಟಕ ಸ್ಥಾಪನೆಗಾಗಿ ಅಧಿಕಾರಿಗಳಿಗೆ ಲಂಚ ನೀಡಿದ್ದರು ಇಲ್ಲವೇ ನೀಡಲು ಯತ್ನಿಸಿದ್ದರು ಎಂಬ ಆರೋಪ ಎದುರಿಸುತ್ತಿರುವ ಉದ್ಯಮಿ ಗೌತಮ್ ಅದಾನಿ ಹಾಗೂ ಸೋದರ ಸಂಬಂಧಿ ಸಾಗರ್ ಅದಾನಿ ವಿರುದ್ಧ ತಾನು ಕೈಗೊಂಡಿರುವ ತನಿಖೆಗೆ ನೆರವು ನೀಡುವಂತೆ ಅಮೆರಿಕದ ಸೆಕ್ಯುರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಕಮಿಷನ್ (ಎಸ್‌ಇಸಿ), ಭಾರತದ ಕಾನೂನು ಸಚಿವಾಲಯಕ್ಕೆ ಮನವಿ ಮಾಡಿದೆ.



ನ್ಯೂಯಾರ್ಕ್‌ನ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶ ನಿಕೋಲಾಸ್ ಗರೌಫಿಸ್ ಅವರಿಗೆ ತನಿಖೆ ಕುರಿತ ವಸ್ತುಸ್ಥಿತಿ ವರದಿಯನ್ನು ಎಸ್‌ಇಸಿ ಸಲ್ಲಿಸಿದೆ.

ಈ ಬೆಳವಣಿಗೆ ಬೆನ್ನಲ್ಲೇ, ಬುಧವಾರದ ವಹಿವಾಟಿನಲ್ಲಿ ಅದಾನಿ ಸಮೂಹದ ಷೇರುಗಳ ಮೌಲ್ಯ ಕುಸಿದಿದೆ.

'ಗೌತಮ್ ಅದಾನಿ ಹಾಗೂ ಸಾಗರ್ ಅದಾನಿ ಭಾರತದಲ್ಲಿ ನೆಲಸಿದ್ದು, ಅವರಿಗೆ ಸಮನ್ಸ್ ನೀಡುವ ಪ್ರಯತ್ನ ನಡೆಯುತ್ತಿದೆ. ಬೇರೆ ದೇಶಗಳಲ್ಲಿರುವ ವ್ಯಕ್ತಿಗಳಿಗೆ ನೋಟಿಸ್ ನೀಡುವುದಕ್ಕೆ ಸಂಬಂಧಿಸಿ, ಹೇಗ್ ಸೇವಾ ಒಪ್ಪಂದದ ಅನ್ವಯ ಈ ಪ್ರಯತ್ನಗಳು ನಡೆಯುತ್ತಿವೆ' ಎಂದೂ ಎಸ್‌ಇಸಿ ಹೇಳಿದೆ.'ಆರೋಪಿಗಳಿಗೆ ಸಮನ್ಸ್ ನೀಡುವುದಕ್ಕೆ ಸಂಬಂಧಿಸಿ, ಫೆಡರಲ್ ರೂಲ್ಸ್ ಆಫ್ ಸಿವಿಲ್ ಪ್ರೊಸಿಜರ್ (ಎಫ್‌ಆರ್‌ಸಿಪಿ)ನ ನಿಯಮ 4(ಎಫ್) ಅಡಿ ಯಾವುದೇ ಕಾಲಮಿತಿ ಇಲ್ಲ. ಆದರೆ, ಹೇಗ್ ಸೇವಾ ಒಪ್ಪಂದದಂತಹ ಅಂತರರಾಷ್ಟ್ರೀಯವಾಗಿ ಒಪ್ಪಿದ ವಿಧಾನದ ಮೂಲಕ ಸಮನ್ಸ್ ನೀಡಬಹುದಾಗಿದೆ' ಎಂದು ವರದಿಯಲ್ಲಿ ಹೇಳಲಾಗಿದೆ.

'ಎಫ್‌ಆರ್‌ಸಿಪಿ ನಿಯಮ 5(ಎ)ಅಡಿ, ಅದಾನಿ ವಿರುದ್ಧದ ತನಿಖೆಗೆ ನೆರವು ನೀಡುವಂತೆ ಭಾರತದ ಕಾನೂನು ಸಚಿವಾಲಯವನ್ನು ಕೋರಲಾಗಿದೆ' ಎಂದು ಎಸ್‌ಇಸಿ ಪರ ವಕೀಲ ಕ್ರಿಸ್ಟೋಫರ್ ಕೊಲರಾಡೊ ಹೇಳಿದ್ದಾರೆ.

ಕಠಿಣ ಭೂ ಕಾನೂನಿಗೆ ಉತ್ತರಾಖಂಡ ಸಂಪುಟ ಅಸ್ತು

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡ ರಾಜ್ಯದ ಮೂಲ ಅಸ್ಮಿತೆಯನ್ನು ಉಳಿಸಿಕೊಳ್ಳುವ ಉದ್ದೇಶದ, ಜನ ಮಿತಿಯಿಲ್ಲದೆ ಜಮೀನು ಖರೀದಿಸುವುದನ್ನು ನಿರ್ಬಂಧಿಸುವ ಕಠಿಣ ಭೂ ಕಾನೂನಿಗೆ ರಾಜ್ಯದ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದಲ್ಲಿ ಜನ ಜಮೀನು ಖರೀದಿಸುವುದರ ಮೇಲೆ ಮಿತಿ ಇರಬೇಕು ಎಂಬ ಬೇಡಿಕೆಯು ಸಾರ್ವಜನಿಕರಿಂದ ಬಹುಕಾಲದಿಂದ ಇತ್ತು ಎಂದು ಅವರು ಹೇಳಿದ್ದಾರೆ. ಕಠಿಣವಾದ ಭೂ ಕಾನೂನು ಜಾರಿಗೆ ತರುವ ಇರಾದೆಯನ್ನು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ವ್ಯಕ್ತಪಡಿಸಿದ್ದರು.

'ಈ ಐತಿಹಾಸಿಕ ಹೆಜ್ಜೆಯು ರಾಜ್ಯದ ಸಂಪನ್ಮೂಲಗಳನ್ನು, ಸಾಂಸ್ಕೃತಿಕ ಪರಂಪರೆಯನ್ನು, ಪ್ರಜೆಗಳ ಹಕ್ಕುಗಳನ್ನು ರಕ್ಷಿಸುತ್ತದೆ. ಇದು ರಾಜ್ಯದ ಮೂಲ ಅಸ್ಮಿತೆಯನ್ನು ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ' ಎಂದು ಧಾಮಿ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಹೊರಗಿನವರು ಉತ್ತರಾಖಂಡದಲ್ಲಿ ಖರೀದಿಸಬಹುದಾದ ಜಮೀನಿಗೆ ಇದ್ದ ಮಿತಿಯನ್ನು 2018ರಲ್ಲಿ ತೆರವು ಮಾಡಲಾಗಿತ್ತು. ಆದರೆ ಮಿತಿಯನ್ನು ತೆರವು ಮಾಡಿದ ಪರಿಣಾಮವಾಗಿ ರಾಜ್ಯದ ಕೃಷಿ ಜಮೀನಿನ ವ್ಯಾಪ್ತಿಯು ಕುಗ್ಗುತ್ತಿದೆ ಎಂಬ ಕಳವಳ ಸ್ಥಳೀಯರಲ್ಲಿದೆ.

ಟ್ರೈನಿಗಳ ಮೌಲ್ಯಮಾಪನ ಮುಂದೂಡಿದ ಇನ್ಫೊಸಿಸ್

ನವದೆಹಲಿ (ಪಿಟಿಐ): ಇನ್ಫೊಸಿಸ್ ಕಂಪನಿಯು 800 ಟ್ರೈನಿಗಳ ಆಂತರಿಕ ಮೌಲ್ಯಮಾಪನ ಪ್ರಕ್ರಿಯೆಯನ್ನು ಒಂದು ವಾರದವರೆಗೆ ಮುಂದೂಡಿದೆ.

ಟ್ರೈನಿಗಳಿಗೆ ಹೆಚ್ಚಿನ ಸಿದ್ಧತೆ ಕೈಗೊಳ್ಳಲು ಅನುಕೂಲವಾಗುವಂತೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕಂಪನಿಯು ಸ್ಪಷ್ಟಪಡಿಸಿದೆ.

ಕಂಪನಿಗೆ ನೇಮಕಗೊಂಡ ಟ್ರೈನಿಗಳು ತರಬೇತಿ ಬಳಿಕ ಆಂತರಿಕ ಮೌಲ್ಯಮಾಪನದಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಾಗಿದೆ. ಉತ್ತೀರ್ಣರಾಗಲು ಮೂರು ಬಾರಿ ಅವರಿಗೆ ಅವಕಾಶ ನೀಡಲಾಗುತ್ತದೆ. ಇದರಲ್ಲಿ ಅನುತ್ತೀರ್ಣರಾದರೆ ಕೆಲಸದಿಂದ ವಜಾಗೊಳಿಸಲಾಗುತ್ತದೆ. ಕಳೆದ ವಾರ ಮೈಸೂರು ಕ್ಯಾಂಪಸ್‌ನಿಂದ ಟ್ರೈನಿಗಳನ್ನು ವಜಾಗೊಳಿಸಲಾಗಿತ್ತು.

ಕಂಪನಿಯ ಈ ಕ್ರಮದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಐ.ಟಿ ಉದ್ಯೋಗಿಗಳ ಕ್ಷೇಮಾಭಿವೃದ್ಧಿ ಸಂಘವಾದ ಎನ್‌ಐಟಿಇಎಸ್ ಮಧ್ಯಪ್ರವೇಶದಿಂದಾಗಿ ಕೇಂದ್ರ ಕಾರ್ಮಿಕ ಇಲಾಖೆಯು ಈ ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಂಡಿದೆ.

ಬೆದರಿಕೆ ತಂತ್ರ ಅನುಸರಿಸಿಲ್ಲ: ಸ್ಪಷ್ಟನೆ

'ಮೈಸೂರು ಕ್ಯಾಂಪಸ್‌ನಲ್ಲಿ ಪ್ರಾಥಮಿಕ ತರಬೇತಿ ಪಡೆದಿದ್ದ 300 ಟ್ರೈನಿಗಳನ್ನು ಕೆಲಸದಿಂದ ವಜಾಗೊಳಿಸುವಲ್ಲಿ ಬಲವಂತದ ಅಥವಾ ಬೆದರಿಕೆಯ ತಂತ್ರ ಅನುಸರಿಸಿಲ್ಲ. ಪರಿಸ್ಥಿತಿ ಬಗ್ಗೆ ಕಾರ್ಮಿಕ ಇಲಾಖೆ ಅಧಿಕಾರಿಗಳಿಗೂ ಮನವರಿಕೆ ಮಾಡಿಕೊಡಲಾಗುವುದು' ಎಂದು ಇನ್ಫೊಸಿಸ್ ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಶಾಜಿ ಮ್ಯಾಥ್ಯೂ ಸ್ಪಷ್ಟಪಡಿಸಿದ್ದಾರೆ.

'ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಆಂತರಿಕ ಮೌಲ್ಯಮಾಪನದಲ್ಲಿ ಅನುತ್ತೀರ್ಣರಾದವರ ಟ್ರೈನಿಗಳ ಸಂಖ್ಯೆ ಹೆಚ್ಚಿದೆ. ಕಂಪನಿಯ ನಿಯಮಾವಳಿ ಅನ್ವಯ ಈ ಕ್ರಮ ಜರುಗಿಸುವುದು ಅನಿವಾರ್ಯವಾಗಿದೆ' ಎಂದು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

2025–26ನೇ ಆರ್ಥಿಕ ವರ್ಷದಲ್ಲಿ ಹೊಸದಾಗಿ 20 ಸಾವಿರ ಉದ್ಯೋಗಿಗಳ ನೇಮಕಕ್ಕೆ ಯೋಜನೆ ರೂಪಿಸಲಾಗಿದೆ. ಅವರಿಗೆ ಉತ್ತಮ ಕಾರ್ಪೊರೇಟ್ ತರಬೇತಿ ನೀಡಲಾಗುವುದು ಎಂದು ತಿಳಿಸಿದ್ದಾರೆ.

'ಟ್ರೈನಿಗಳನ್ನು ವಜಾಗೊಳಿಸಿರುವ ಇನ್ಫೊಸಿಸ್ ಕ್ರಮದ ವಿರುದ್ಧ ಹೋರಾಟ ಮುಂದುವರಿಸಲಾಗಿದೆ. ನಮ್ಮ ಮಧ್ಯಪ್ರವೇಶದಿಂದಾಗಿ ಆಂತರಿಕ ಮೌಲ್ಯಮಾಪನ ಮಾಡುವ ಪ್ರಕ್ರಿಯೆಯನ್ನು ಮುಂದೂಡಲಾಗಿದೆ' ಎಂದು ಎನ್‌ಐಟಿಇಎಸ್ ಹೇಳಿದೆ.

ಐ.ಟಿ ವಲಯದಲ್ಲಿ ಏಕಾಏಕಿಯಾಗಿ ಉದ್ಯೋಗಿಗಳನ್ನು ವಜಾಗೊಳಿಸುವ ಕಂಪನಿಗಳ ನಿರ್ಧಾರದ ವಿರುದ್ಧ ಹೋರಾಟ ಮುಂದುವರಿಸಲಾಗುವುದು ಎಂದು ಹೇಳಿದೆ.

'ಮಂಗಳವಾರ ಟ್ರೈನಿಗಳ ಆಂತರಿಕ ಮೌಲ್ಯಮಾಪನ ನಡೆಸಿ ಬುಧವಾರದಂದು ಫಲಿತಾಂಶ ಪ್ರಕಟಿಸಲು ಇನ್ಫೊಸಿಸ್ ನಿರ್ಧರಿಸಿತ್ತು. ನಮ್ಮ ಹೋರಾಟ, ಸರ್ಕಾರದ ಮಧ್ಯಪ್ರವೇಶ ಮತ್ತು ಮಾಧ್ಯಮಗಳ ಬೆಂಬಲದಿಂದ ಆಂತರಿಕ ಮೌಲ್ಯಮಾಪನ ಪ್ರಕ್ರಿಯೆಯನ್ನು ಮುಂದೂಡಿದೆ. ಇದರಿಂದ ಹಲವು ಟ್ರೈನಿಗಳು ನಿರಾಳರಾಗಿದ್ದಾರೆ' ಎಂದು ಹೇಳಿದೆ.

ದುಬೈನಲ್ಲಿ ಭಾರತದ ಅಭಿಯಾನ ಇಂದಿನಿಂದ • ಬಾಂಗ್ಲಾದೇಶ ಸವಾಲು

ರೋಹಿತ್ ಪಡೆಗೆ ಶುಭಾರಂಭದ ತವಕ

ದುಬೈ(ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಇತಿಹಾಸದಲ್ಲಿ ಸತತ ಮೂರನೇ ಬಾರಿ ಫೈನಲ್ ಪ್ರವೇಶಿಸಿ ದಾಖಲೆ ಬರೆಯುವತ್ತ ಚಿತ್ತ ನೆಟ್ಟಿರುವ ಭಾರತ ತಂಡವು ಗುರುವಾರ ಇಲ್ಲಿ ತನ್ನ ಅಭಿಯಾನ ಆರಂಭಿಸಲಿದೆ. ತನ್ನ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

2013ರಲ್ಲಿ ಮಹೇಂದ್ರಸಿಂಗ್ ಧೋನಿ ನಾಯಕತ್ವದಲ್ಲಿ ಚಾಂಪಿಯನ್ ಆಗಿದ್ದ ತಂಡವು, 2017ರಲ್ಲಿ ಫೈನಲ್‌ನಲ್ಲಿ ಪಾಕಿಸ್ತಾನ ತಂಡದ ಎದುರು ಸೋತಿತ್ತು. ಇದೇ 23ರಂದು ಇಲ್ಲಿ ಭಾರತ ಮತ್ತು ಪಾಕ್ ಮುಖಾಮುಖಿಯಾಗಲಿವೆ.

ಅದಕ್ಕೂ ಮುನ್ನ ಭಾರತವು ನಜ್ಮುಲ್ ಹುಸೇನ್ ಶಾಂತೊ ನಾಯಕತ್ವದ ಬಾಂಗ್ಲಾದ ಸವಾಲನ್ನು ಮೀರಬೇಕಿದೆ. ಗುರುವಾರ ಈ ಪಂದ್ಯದಲ್ಲಿ ಭಾರತ ತಂಡದ ಸಾಮರ್ಥ್ಯದ ಪರೀಕ್ಷೆಯಾಗಲಿದೆ. ಏಕೆಂದರೆ; ಟೂರ್ನಿಗೆ ಬರುವ ಮುನ್ನ ಆಟಗಾರರ ಆಯ್ಕೆಯ ಕುರಿತು ಬಹಳಷ್ಟು ಪರ–ವಿರೋಧ ಚರ್ಚೆಗಳು ನಡೆದಿದ್ದವು.


ಬಾಂಗ್ಲಾದೇಶ ತಂಡದ ನಾಯಕ ನಜ್ಮುಲ್ ಹುಸೇನ್ ಶಾಂತೊ –ಎಎಫ್‌ಪಿ ಚಿತ್ರ

ಅದರಿಂದಾಗಿ; ರೋಹಿತ್ ಶರ್ಮಾ ನಾಯಕತ್ವ ರಂಗೇರುವುದೇ? ಯುವ ಆಟಗಾರ, ಉಪನಾಯಕ ಶುಭಮನ್ ಗಿಲ್ ಗಮನ ಸೆಳೆಯುವರೇ? ವಿರಾಟ್ ಕೊಹ್ಲಿ ತಮ್ಮ ಗತವೈಭವಕ್ಕೆ ಮರಳುವರೇ? 'ವೇಗದ ಸರದಾರ' ಜಸ್‌ಪ್ರೀತ್ ಬೂಮ್ರಾ ಅವರ ಗೈರುಹಾಜರಿಯಲ್ಲಿ ತಂಡದ ಬೌಲಿಂಗ್ ಪಡೆ ಒತ್ತಡವನ್ನು ನಿಭಾಯಿಸುವುದೇ? ಎಂಬ ಸವಾಲುಗಳು ಕುತೂಹಲ ಕೆರಳಿಸಿವೆ.

ಹಾಗೆ ನೋಡಿದರೆ; ಏಕದಿನ ಕ್ರಿಕೆಟ್ ಮಾದರಿಯ ಚಾಂಪಿಯನ್ಸ್ ಟ್ರೋಫಿ ಟೂರ್ನಿಯು ತಂಡಕ್ಕೆ ಹಾಗೂ ವೈಯಕ್ತಿಕವಾಗಿ ಆಟಗಾರರು ತಮ್ಮ ಸಾಮರ್ಥ್ಯ ಮೆರೆಯಲು ಉತ್ತಮ ವೇದಿಕೆಯಾಗಿದೆ. ವಿರಾಟ್, ರೋಹಿತ್ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಕಳೆದ ಆರು ತಿಂಗಳುಗಳಿಂದ ವೈಫಲ್ಯಗಳ ಕಹಿಯನ್ನೇ ಹೆಚ್ಚು ಅನುಭವಿಸಿದ್ದಾರೆ. ಆದರೂ ತಮ್ಮ ಸ್ಥಾನಗಳಲ್ಲಿ ಉಳಿದುಕೊಂಡಿದ್ದಾರೆ. ಅವರಿಗೆ ನಿರಂತರ ಅವಕಾಶಗಳು ಸಿಗುತ್ತಿರುವುದು ವಿಶೇಷ. ಇದೀಗ ಚಾಂಪಿಯನ್ಸ್ ಟ್ರೋಫಿ ಗೆಲುವಿನೊಂದಿಗೆ ಹಿಂದಿನ ಎಲ್ಲ ವೈಫಲ್ಯಗಳನ್ನು ಮರೆಸುವ ಅವಕಾಶ ಅವರಿಗೆ ಇದೆ.

ಈಚೆಗೆ ಇಂಗ್ಲೆಂಡ್ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯ ಪಂದ್ಯದಲ್ಲಿ ರೋಹಿತ್ ಶತಕ ಬಾರಿಸಿ ತಮ್ಮ ಲಯಕ್ಕೆ ಮರಳಿದ್ದರು. ಅದೇ ಸರಣಿಯಲ್ಲಿ ಗಿಲ್ ಎರಡು ಅರ್ಧಶತಕ ಮತ್ತು ಒಂದು ಶತಕ ಹೊಡೆದಿದ್ದರು.


ಭಾರತದ ವಿರಾಟ್ ಕೊಹ್ಲಿ, ಅರ್ಷದೀಪ್ ಸಿಂಗ್, ಶುಭಮನ್ ಗಿಲ್ ಮತ್ತು ನಾಯಕ ರೋಹಿತ್ ಶರ್ಮಾ –ಪಿಟಿಐ ಚಿತ್ರ

ಮಧ್ಯಮ ಕ್ರಮಾಂಕದಲ್ಲಿ ಕೆ.ಎಲ್. ರಾಹುಲ್ ಅವರ ಮೇಲೆ ಹೆಚ್ಚು ಜವಾಬ್ದಾರಿ ಬೀಳಲಿದೆ. ಅಲ್ಲದೇ ಅವರು ವಿಕೆಟ್ ಕೀಪಿಂಗ್ ಕೂಡ ನಿರ್ವಹಿಸಲಿದ್ದಾರೆ.

ಆಲ್‌ರೌಂಡರ್‌ಗಳಾದ ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ರವೀಂದ್ರ ಜಡೇಜ ಅವರ ಮೇಲೂ ಹೆಚ್ಚಿನ ನಿರೀಕ್ಷೆಗಳಿವೆ. ಈ ಬಾರಿ ತಂಡದಲ್ಲಿ ಒಟ್ಟು ಐವರು ಸ್ಪಿನ್ನರ್‌ಗಳಿದ್ದಾರೆ. ಹರ್ಷಿತ್ ರಾಣಾ ಮತ್ತು ಅರ್ಷದೀಪ್ ಅವರಲ್ಲಿ ಒಬ್ಬರು ಮೊಹಮ್ಮದ್ ಶಮಿಯೊಂದಿಗೆ ವೇಗದ ವಿಭಾಗವನ್ನು ನಿಭಾಯಿಸುವ ಸಾಧ್ಯತೆ ಇದೆ. ಕುಲದೀಪ್ ಯಾದವ್ ಅಥವಾ ವರುಣ ಚಕ್ರವರ್ತಿಯವರಲ್ಲಿ ಒಬ್ಬರಿಗೆ ಅವಕಾಶ ಸಿಗಬಹುದು.

ಬಾಂಗ್ಲಾ ತಂಡವು ಪ್ರಮುಖ ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಅವರಿಲ್ಲದೇ ಕಣಕ್ಕಿಳಿಯಬೇಕಿದೆ. ಅನುಭವಿಗಳಾದ ಸೌಮ್ಯ ಸರ್ಕಾರ್, ಮುಷ್ಫಿಕುರ್ ರಹೀಮ್, ವೇಗಿ ಮುಸ್ತಫಿಜುರ್ ರೆಹಮಾನ್ ಅವರ ಮೇಲೆ ತಂಡವು ಹೆಚ್ಚು ಅವಲಂಬಿತವಾಗಿದೆ.



ಕೆ.ಎಲ್. ರಾಹುಲ್

ಭಾರತಕ್ಕೆ ಕಠಿಣ ಹಾದಿ

ಭಾರತ ತಂಡವು ಎ ಗುಂಪಿನಲ್ಲಿ ಮೂರು ತಂಡಗಳನ್ನು ಎದುರಿಸಲಿದೆ. ಬಾಂಗ್ಲಾ, ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳು ಭಾರತಕ್ಕೆ ಸವಾಲೊಡ್ಡಲಿವೆ. ಮೂರು ತಂಡಗಳೂ ಉತ್ತಮ ಆಟಗಾರರನ್ನು ಒಳಗೊಂಡಿವೆ. ಗುಂಪಿನಲ್ಲಿ ಮೊದಲ ಎರಡು ಸ್ಥಾನ ಪಡೆದ ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ. ಆದ್ದರಿಂದ ಗುಂಪು ಹಂತವು ರೋಚಕವಾಗುವ ನಿರೀಕ್ಷೆ ಇದೆ.

ಬಲಾಬಲ (ಏಕದಿನ)

ಪಂದ್ಯ 41



37 ಭಾರತದ ವಿರಾಟ್ ಕೊಹ್ಲಿಯವರಿಗೆ ಏಕದಿನ ಕ್ರಿಕೆಟ್‌ನಲ್ಲಿ **14** ಸಾವಿರ ರನ್ ಪೂರೈಸಲು ಬೇಕಿರುವ ರನ್‌ಗಳು

3 ಭಾರತದ ವಿರಾಟ್ ಕೊಹ್ಲಿಯವರಿಗೆ **300** ಏಕದಿನ ಪಂದ್ಯಗಳನ್ನು ಆಡಿದವರ ಕ್ಲಬ್ ಸೇರಲು ಆಡಬೇಕಿರುವ ಪಂದ್ಯಗಳು

103 ವಿರಾಟ್ ಎಲ್ಲ ಮಾದರಿಯಲ್ಲಿ ಸೇರಿ 545 ಪಂದ್ಯಗಳನ್ನು ಆಡಿ ಒಟ್ಟು **27,381** ರನ್ ಗಳಿಸಿದ್ದಾರೆ. ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್ (**560** ಪಂದ್ಯ; **27,483** ರನ್) ದಾಖಲೆ ಮುರಿಯಲು ಬೇಕಿರುವ ರನ್‌ಗಳು

13 ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಏಕದಿನ ಕ್ರಿಕೆಟ್‌ನಲ್ಲಿ **11** ಸಾವಿರ ರನ್ ಪೂರೈಸಲು ಬೇಕಿರುವ ರನ್‌ಗಳು

49 ರೋಹಿತ್ ಶರ್ಮಾ ಅವರು ಮೂರು ಮಾದರಿಗಳಲ್ಲಿಯೂ ಗಳಿಸಿರುವ ಒಟ್ಟು ಶತಕಗಳು. **50** ಶತಕ ಗಳಿಸಿದ ಮೂರನೇ ಭಾರತೀಯ ಬ್ಯಾಟರ್ ಆಗಲು ಅವರು ಇನ್ನೊಂದು ಶತಕ ಗಳಿಸಬೇಕಿದೆ

ರ‍್ಯಾಂಕಿಂಗ್: ಮತ್ತೆ ಅಗ್ರಸ್ಥಾನಕ್ಕೆ ಗಿಲ್

ದುಬೈ (ಪಿಟಿಐ): ಭಾರತ ತಂಡದ ಆರಂಭಿಕ ಆಟಗಾರ ಶುಭಮನ್ ಗಿಲ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಬುಧವಾರ ಬಿಡುಗಡೆ ಮಾಡಿರುವ ಏಕದಿಕ ಕ್ರಿಕೆಟ್ ಬ್ಯಾಟರ್‌ಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿದ್ದಾರೆ.

ಅಗ್ರಸ್ಥಾನದಲ್ಲಿದ್ದ ಪಾಕಿಸ್ತಾನದ ಬಾಬರ್ ಆಜಂ (773 ಪಾಯಿಂಟ್ಸ್) ಅವರನ್ನು ಭಾರತ ತಂಡದ ಉಪನಾಯಕನೂ ಆಗಿರುವ ಗಿಲ್ (796) ಹಿಂದಿಕ್ಕಿ ತಮ್ಮ ವೃತ್ತಿ ಜೀವನದಲ್ಲಿ ಎರಡನೇ ಬಾರಿ ವಿಶ್ವದ ಅಗ್ರಮಾನ್ಯ ಬ್ಯಾಟರ್ ಎನಿಸಿದ್ದಾರೆ.

ಅಗ್ರ 10 ಬ್ಯಾಟರ್‌ಗಳಲ್ಲಿ ಭಾರತ ತಂಡದ ನಾಲ್ಕು ಮಂದಿ ಇದ್ದಾರೆ. ನಾಯಕ ರೋಹಿತ್ ಶರ್ಮಾ (761) ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ (727) ಆರನೇ ಸ್ಥಾನ ಕಾಯ್ದುಕೊಂಡಿದ್ದಾರೆ. ಒಂದು ಸ್ಥಾನ ಬಡ್ತಿ ಪಡೆದ ಶ್ರೇಯಸ್ ಅಯ್ಯರ್ (679) 9ನೇ ಸ್ಥಾನದಲ್ಲಿದ್ದಾರೆ.

ಯಂಗ್, ಟಾಮ್ ಆಟಕ್ಕೆ ಜಯ

ಗ್ಲೆನ್ ಫಿಲಿಪ್ಸ್ ಮಿಂಚಿನಾಟ: ಆತಿಥೇಯ ಪಾಕ್‌ಗೆ ಸೋಲು

ಕರಾಚಿ (ಪಿಟಿಐ): ವಿಲ್ ಯಂಗ್ ಮತ್ತು ಟಾಮ್ ಲೇಥಮ್ ಅವರ ಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡವು ಬುಧವಾರ ಆರಂಭವಾದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ನ್ಯೂಜಿಲೆಂಡ್ ತಂಡವು 60 ರನ್‌ಗಳಿಂದ 'ಹಾಲಿ ಚಾಂಪಿಯನ್' ಪಾಕ್ ತಂಡವನ್ನು ಮಣಿಸಿತು.

ಇಲ್ಲಿಯ ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಆರಂಭಿಕ ಬ್ಯಾಟರ್ ಯಂಗ್ (107;113ಎ) ಮತ್ತು ಲೇಥಮ್ (ಅಜೇಯ 118; 104ಎ) ಅವರ ಬಿರುಸಿನ ಆಟದ ಬಲದಿಂದ ಕಿವೀಸ್ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 320 ರನ್ ಗಳಿಸಿತು. ಅದಕ್ಕುತ್ತರವಾಗಿ ಆತಿಥೇಯ ಪಾಕ್ ತಂಡವು 47.2 ಓವರ್‌ಗಳಲ್ಲಿ 260 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ವಿಲ್ ಒ ರೂರ್ಕಿ (47ಕ್ಕೆ 3) ಮತ್ತು ಮಿಚೆಲ್ ಸ್ಯಾಂಟನರ್ (66ಕ್ಕೆ 3) ದಾಳಿಯೆದುರು ಪಾಕ್ ಬ್ಯಾಟರ್‌ಗಳು ಪರದಾಡಿದರು. ಈ ಮಧ್ಯೆ ಬಾಬರ್ ಆಜಂ (64 ರನ್) ಮತ್ತು ಖುಷ್‌ದಿಲ್ ಶಾ (69 ರನ್) ಅರ್ಧಶತಕ ಗಳಿಸಿ ಕೊಂಚ ಹೋರಾಟ ತೋರಿದರು. ಮ್ಯಾಟ್ ಹೆನ್ರಿ ಎರಡು ವಿಕೆಟ್ ಪಡೆದರು.

ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಪಾಕ್ ತಂಡವು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಯಂಗ್ ಮತ್ತು ಡೆವೊನ್ ಕಾನ್ವೆ ಮೊದಲ ವಿಕೆಟ್ ಜೊತೆಯಾಟದಲ್ಲಿ 39 ರನ್ ಸೇರಿಸಿದರು. ಪಾಕ್‌ನ ಲೆಗ್‌ಸ್ಪಿನ್ನರ್ ಅಬ್ರಾರ್ ಅಹಮದ್ ಎಸೆತದಲ್ಲಿ ಡೆವೊನ್ (10 ರನ್) ಕ್ಲೀನ್‌ಬೌಲ್ಡ್ ಆದರು. ಕೇನ್ ವಿಲಿಯಮ್ಸನ್ (1 ರನ್), ಡ್ಯಾರಿಲ್ ಮಿಚೆಲ್ (10 ರನ್) ಅವರಿಬ್ಬರೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ.


ನ್ಯೂಜಿಲೆಂಡ್ ತಂಡದ ವಿಲ್ ಯಂಗ್ ಮತ್ತು ಟಾಮ್ ಲೇಥಮ್ –ಎಎಫ್‌ಪಿ ಚಿತ್ರ

ಈ ಹಂತದಲ್ಲಿ ಏಕಾಂಗಿ ಹೋರಾಟ ನಡೆಸಿದ್ದ ಯಂಗ್ ಜೊತೆಗೂಡಿದ ಅನುಭವಿ ಲೇಥಮ್ ಇನಿಂಗ್ಸ್‌ನ ಚಿತ್ರಣವನ್ನೇ ಬದಲಿಸಿಬಿಟ್ಟರು. ಲೇಥಂ 113.46ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. 10 ಬೌಂಡರಿ ಮತ್ತು 3 ಸಿಕ್ಸರ್‌ಗಳನ್ನು ಸಿಡಿಸಿದರು. 4ನೇ ವಿಕೆಟ್ ಜೊತೆಯಾಟದಲ್ಲಿ ಯಂಗ್ ಮತ್ತು ಟಾಮ್ 118 ರನ್ ಸೇರಿಸಿದರು. ಯಂಗ್ ವಿಕೆಟ್ ಗಳಿಸಿದ ನಸೀಮ್ ಶಾ ಜೊತೆಯಾಟವನ್ನು ಮುರಿದರು.

ಕ್ರೀಸ್‌ಗೆ ಬಂದ ಗ್ಲೆನ್ ಫಿಲಿಪ್ಸ್ (61; 39ಎ) ಮಿಂಚಿನ ಬ್ಯಾಟಿಂಗ್ ಮಾಡಿದರು. 3 ಬೌಂಡರಿ ಹಾಗೂ 4 ಸಿಕ್ಸರ್ ಸಿಡಿಸಿದ ಅವರು 156.41ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಇವರಿಬ್ಬರೂ 5ನೇ ವಿಕೆಟ್ ಜೊತೆಯಾಟದಲ್ಲಿ 125 ರನ್ ಸೇರಿಸಿದರು. ಇದರಿಂದಾಗಿ ತಂಡದ ಮೊತ್ತವು ತ್ರಿಶತಕ ದಾಟಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 5ಕ್ಕೆ320 (ವಿಲ್ ಯಂಗ್ 107, ಟಾಮ್ ಲೇಥಮ್ ಔಟಾಗದೇ 118, ಗ್ಲೆನ್ ಫಿಲಿಪ್ಸ್ 61, ನಸೀಂ ಶಾ 63ಕ್ಕೆ2, ಹ್ಯಾರಿಸ್ ರವೂಫ್ 83ಕ್ಕೆ2) ಪಾಕಿಸ್ತಾನ: 47.2 ಓವರ್‌ಗಳಲ್ಲಿ 260 (ಬಾಬರ್ ಆಜಂ 64, ಸಲ್ಮಾನ್ ಆಘಾ 42, ಖುಷ್‌ದಿಲ್ ಶಾ 69; ಮ್ಯಾಟ್ ಹೆನ್ರಿ 25ಕ್ಕೆ 2, ವಿಲ್ ಒ ರೂರ್ಕಿ 47ಕ್ಕೆ 3, ಮಿಚೆಲ್ ಸ್ಯಾಂಟನರ್ 66ಕ್ಕೆ 3). ಫಲಿತಾಂಶ: ನ್ಯೂಜಿಲೆಂಡ್‌ಗೆ 60 ರನ್ ಜಯ. ಪಂದ್ಯದ ಆಟಗಾರ: ಲೇಥಮ್

ಕ್ಯಾಪಿಟಲ್ಸ್‌ಗೆ ಮಣಿದ ವಾರಿಯರ್ಸ್

ವಡೋದರಾ (ಪಿಟಿಐ): ಅನಾಬೆಲ್ ಸದರ್ಲೆಂಡ್ (ಔಟಾಗದೇ 41; 26ಕ್ಕೆ2) ಅವರ ಆಲ್‌ರೌಂಡ್ ಆಟದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್‌ನ (ಡಬ್ಲ್ಯುಪಿಎಲ್) ರೋಚಕ ಹಣಾಹಣಿಯಲ್ಲಿ ಯುಪಿ ವಾರಿಯರ್ಸ್ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿತು.

ಕೋತಂಬಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಲೆಗ್‌ನ ಕೊನೆಯ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಯುಪಿ ವಾರಿಯರ್ಸ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 166 ರನ್ ಗಳಿಸಿತು. ಡೆಲ್ಲಿ ತಂಡವು ಒಂದು ಎಸೆತ ಬಾಕಿ ಇರುವಂತೆ ಮೂರು ವಿಕೆಟ್‌ಗಳಲ್ಲಿ 167 ರನ್ ಗಳಿಸಿ ಟೂರ್ನಿಯಲ್ಲಿ ಎರಡನೇ ಗೆಲುವು ದಾಖಲಿಸಿತು. ಈ ಮೂಲಕ ಸತತ ಐದನೇ ಪಂದ್ಯದಲ್ಲೂ ಚೇಸಿಂಗ್ ಮಾಡಿದ ತಂಡವೇ ಗೆದ್ದಂತಾಯಿತು. ಶುಕ್ರವಾರ ಬೆಂಗಳೂರು ಲೆಗ್ ಆರಂಭವಾಗಲಿದೆ.

ಶಫಾಲಿ ವರ್ಮಾ (26; 16) ಮತ್ತು ಮೆಗ್ ಲ್ಯಾನಿಂಗ್ (69;49ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 65 ರನ್ ಸೇರಿಸಿ ತಂಡಕ್ಕೆ ಉತ್ತಮ ಅಡಿಪಾಯ ಹಾಕಿದರು. ನಂತರದಲ್ಲಿ ಅನಾಬೆಲ್ ಮತ್ತು ಮರಿಜಾನ್ ಕ್ಯಾಪ್ (ಔಟಾಗದೇ 29;17) ತಂಡವನ್ನು ಗೆಲುವಿನ ದಡ ಸೇರಿಸಿದರು.

ಆಡಿರುವ ಮೂರು ಪಂದ್ಯಗಳಿಂದ 4 ಅಂಕ ಗಳಿಸಿರುವ ಡೆಲ್ಲಿ ತಂಡ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಎರಡೂ ಪಂದ್ಯ ಸೋತ ವಾರಿಯರ್ಸ್ ಕೊನೆಯ ಸ್ಥಾನದಲ್ಲಿದೆ. ಆರ್‌ಸಿಬಿ (4) ಅಗ್ರಸ್ಥಾನದಲ್ಲಿದೆ.

ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕಿರಣ್ ನವಗಿರೆ (51; 27ಎ) ಅವರ ಅರ್ಧಶತಕದ ಬಲದಿಂದ ಸ್ಪರ್ಧಾತ್ಮಕ ಮೊತ್ತದ ಗುರಿಯೊಡ್ಡಿತು.

ಕಿರಣ್ ಅವರಂತೂ 188.8ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. 6 ಬೌಂಡರಿ ಮತ್ತು 3 ಸಿಕ್ಸರ್ ಹೊಡೆದರು.


ಅನಾಬೆಲ್ ಸದರ್ಲೆಂಡ್ ಬ್ಯಾಟಿಂಗ್ –ಎಕ್ಸ್ ಚಿತ್ರ

ಮಹಿಳಾ ಪ್ರೀಮಿಯರ್ ಲೀಗ್

ನಂತರ ನಿಯಮಿತವಾಗಿ ವಿಕೆಟ್‌ಗಳು ಪತನವಾದವು. ಕೊನೆಯ ಹಂತದಲ್ಲಿ ಶ್ವೇತಾ ಸೆಹ್ರಾವತ್ (37; 33ಎ) ಮತ್ತು ಚಿನೆಲೆ ಹೆನ್ರಿ (ಔಟಾಗದೇ 33; 15ಎ) ತಂಡಕ್ಕೆ ಕೊಂಚ ಚೇತರಿಕೆ ನೀಡಿದ್ದರು.

ಸಂಕ್ಷಿಪ್ತ ಸ್ಕೋರು: ಯು.ಪಿ ವಾರಿಯರ್ಸ್: 20 ಓವರ್‌ಗಳಲ್ಲಿ 7ಕ್ಕೆ 166 (ಕಿರಣ್ ನವಗಿರೆ 51, ವೃಂದಾ ದಿನೇಶ್ 16, ಶ್ವೇತಾ ಶೆರಾವತ್ 37, ಗ್ರೇಸ್ ಹ್ಯಾರಿಸ್ 12, ಚೈನೆಲೆ ಹೆನ್ರಿ ಔಟಾಗದೇ 33, ಅನಾಬೆಲ್ ಸದರ್ಲೆಂಡ್ 26ಕ್ಕೆ2) ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್: 19.5 ಓವರ್‌ಗಳಲ್ಲಿ 3 ವಿಕೆಟ್‌ಗೆ 167 (ಶಫಾಲಿ ವರ್ಮಾ 26, ಮೆಗ್ ಲ್ಯಾನಿಂಗ್ 69, ಅನಾಬೆಲ್ ಸದರ್ಲೆಂಡ್ ಔಟಾಗದೇ 41, ಮರಿಜಾನ್ ಕ್ಯಾಪ್ ಔಟಾಗದೇ 29). ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 7 ವಿಕೆಟ್ ಜಯ. ಪಂದ್ಯದ ಆಟಗಾರ್ತಿ: ಅನಾಬೆಲ್ ಸದರ್ಲೆಂಡ್

ಎಸ್‌ಎಐ ಟ್ರಯಲ್ಸ್: ಅರ್ಜಿ ಆಹ್ವಾನ

ಬೆಂಗಳೂರು: ಹಾಕಿ ಆಟಗಾರರ ಆಯ್ಕೆಗಾಗಿ ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಟ್ರಯಲ್ಸ್ ಆಯೋಜಿಸಿದೆ. ಅದಕ್ಕಾಗಿ ಅರ್ಹ ಬಾಲಕರಿಂದ ಅರ್ಜಿ ಆಹ್ವಾನಿಸಿದೆ.

ಇದೇ 21ರಿಂದ 23ರವರೆಗೆ ಬಾಲಕರಿಗೆ ನಗರದ ಮೈಸೂರು ರಸ್ತೆಯಲ್ಲಿರುವ ನೇತಾಜಿ ಸುಭಾಷ್ ಚಂದ್ರ ಸದರ್ನ್ ಸೆಂಟರ್‌ನ ಸಾಯ್ ಕೇಂದ್ರದಲ್ಲಿ ನಡೆಯಲಿದೆ. ಟ್ರಯಲ್ಸ್ ಬೆಳಗ್ಗೆ 8ರಿಂದ 11 ಗಂಟೆಯವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9856438261, 080–2221671 ಅಥವಾ 7353244127 ಸಂಪರ್ಕಿಸಬೇಕು ಎಂದು ಕೇಂದ್ರದ ಅಧಿಕಾರಿ ಕೆ. ಹರಿಹರನ್ ತಿಳಿಸಿದ್ದಾರೆ.

ಕುತ್ತಿಗೆ ಮೇಲೆ ರಾಡ್ ಬಿದ್ದು ಯುವ ಪವರ್ ಲಿಫ್ಟರ್ ಸಾವು

ಜೈಪುರ (ಪಿಟಿಐ): ಜೂನಿಯರ್ ರಾಷ್ಟ್ರೀಯ ಕ್ರೀಡಾಕೂಟದ ಚಿನ್ನದ ಪದಕ ವಿಜೇತ ಮಹಿಳಾ ಲಿಫ್ಟರ್ ಯಾಷ್ಟಿಕಾ ಆಚಾರ್ಯ (17) ಅವರು ರಾಜಸ್ಥಾನದ ಬಿಕಾನೇರ್ ಜಿಲ್ಲೆಯ ಜಿಮ್‌ವೊಂದರಲ್ಲಿ ಅಭ್ಯಾಸ ನಡೆಸುತ್ತಿದ್ದ ವೇಳೆ 270 ಕೆಜಿ ತೂಕದ ರಾಡ್ ಅವರ ಕುತ್ತಿಗೆ ಮೇಲೆ ಬಿದ್ದು ಮೃತಪಟ್ಟಿದ್ದಾರೆ.

ಯಾಷ್ಟಿಕಾ ಭಾರ ಎತ್ತುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಅಷ್ಟರಲ್ಲಿ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ ಎಂದು ನಯಾ ಶಹರ್ ಠಾಣಾಧಿಕಾರಿ ವಿಕ್ರಂ ತಿವಾರಿ ಮಾಹಿತಿ ನೀಡಿದ್ದಾರೆ.

ಘಟನೆಯಲ್ಲಿ ಯಾಷ್ಟಿಕಾ ಅವರ ತರಬೇತುದಾರರಿಗೂ ಸಣ್ಣಪುಟ್ಟ ಗಾಯವಾಗಿದೆ. ಘಟನೆ ಸಂಬಂಧ ಯಾಷ್ಟಿಕಾ ಕುಟುಂಬದವರು ಯಾವುದೇ ದೂರು ನೀಡಿಲ್ಲ. ಮರಣೋತ್ತರ ಪರೀಕ್ಷೆಯ ನಂತರ ಮೃತದೇಹವನ್ನು ಕುಟುಂಬದ ಸದಸ್ಯರಿಗೆ ಹಸ್ತಾಂತರಿಸಲಾಯಿತು ಎಂದು ಅವರು ತಿಳಿಸಿದ್ದಾರೆ.

ಸೌತ್ ಯುನೈಟೆಡ್ ತಂಡಕ್ಕೆ ಜಯ

ಬೆಂಗಳೂರು: ಸೌತ್ ಯುನೈಟೆಡ್ ಎಫ್‌ಸಿ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ ಬುಧವಾರ 3–0 ಗೋಲುಗಳಿಂದ ಎಫ್‌ಸಿ ರಿಯಲ್ ಬೆಂಗಳೂರು ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಯುನೈಟೆಡ್ ಪರ ಇಶಾನ್ ಸಾಹಿ (25ನೇ) ಮತ್ತು ಮೊಹಮ್ಮದ್ ಅಲ್ತಬ್ ಹುಸೇನ್ (90 + 2ನೇ) ಗೋಲು ಗಳಿಸಿದರು.

ತಿಲಕ್ ಮೆಮೋರಿಯಲ್ ಎಫ್‌ಸಿ ತಂಡ 'ಸಿ' ಡಿವಿಷನ್ ಲೀಗ್ ಪಂದ್ಯದಲ್ಲಿ ನಾಡಪ್ರಭು ಕೆಂಪೇಗೌಡ ಎಫ್‌ಸಿ ತಂಡವನ್ನು 2–1 ಗೋಲುಗಳಿಂದ ಮಣಿಸಿತು.

ತಿಲಕ್ ಎಫ್‌ಸಿ ತಂಡದ ಆಕಾಶ್ ಪಿ.(7ನೇ ನಿ.), ಮಧು ರಾಜ್ ಜಿ. (26ನೇ ನಿ.) ಗೋಲುಗಳನ್ನು ಹೊಡೆದರು. ನಾಡಪ್ರಭು ತಂಡದ ರೆನಾರ್ಡ್ (30ನೇ ನಿ.) ಗೋಲು ಬಾರಿಸಿದರು. ಬಿ ಗುಂಪಿನ ಪಂದ್ಯದಲ್ಲಿ ಕ್ವೀನ್ಸ್ ಸ್ಟಾರ್ ಎಫ್‌ಸಿ ತಂಡ 5–0 ಗೋಲುಗಳಿಂದ ಐಟಿಸಿ ಎಫ್‌ಸಿ ತಂಡವನ್ನು ಸೋಲಿಸಿತು.

ಅಸ್ಸಾಂ: ಗಣಿಯೊಳಗೆ ಐವರು ಕಾರ್ಮಿಕರ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಸ್ಸಾಂನ ದಿಮಾ ಜಸಾವೊ ಜಿಲ್ಲೆಯಲ್ಲಿ ಅಕ್ರಮವಾಗಿ ನಡೆಸುತ್ತಿದ್ದ ಕಲ್ಲಿದ್ದಲು ಗಣಿಯಲ್ಲಿ ನೀರು ತುಂಬಿಕೊಂಡಿದ್ದರಿಂದ, 9 ಕಾರ್ಮಿಕರು ಗಣಿಯೊಳಗೆ ಸಿಲುಕಿಕೊಂಡಿದ್ದರು. ಘಟನೆ ನಡೆದ ಕೆಲವು ದಿನಗಳ ಬಳಿಕ ನಾಲ್ವರು ಕಾರ್ಮಿಕರ ಮೃತದೇಹ ಪತ್ತೆಯಾಗಿದ್ದವು. ಈಗ 42 ದಿನಗಳ ಬಳಿಕ, ಉಳಿದ ಐವರ ಮೃತದೇಹ ಬುಧವಾರ ಪತ್ತೆಯಾಗಿದೆ.

ಕಲ್ಲಿದ್ದಲು ಗಣಿಯು ಆಳವಾಗಿದ್ದ ಕಾರಣ, ರಕ್ಷಣಾ ಕಾರ್ಯಕ್ಕೆ ತೊಡಕು ಉಂಟಾಗಿತ್ತು. ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್, ಸೇನಾ ಸಿಬ್ಬಂದಿಯು ರಕ್ಷಣಾ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಐವರು ಕಾರ್ಮಿಕರ ಮೃತದೇಹ ದೊರೆತ ಬಗ್ಗೆ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. 'ಮೃತರ ಗುರುತು ಪತ್ತೆ ಕಾರ್ಯ ನಡೆಯುತ್ತಿದೆ' ಎಂದಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಮತ್ತಷ್ಟು ಬಲ?

ಪ್ರಜಾವಾಣಿ ವಾರ್ತೆ

ನವದೆಹಲಿ: ಪಕ್ಷದ ಪುನಶ್ಚೇತನ ಹಾಗೂ ಜಿಲ್ಲಾ ಮಟ್ಟದಲ್ಲಿರುವ ಪಕ್ಷದ ಮುಖಂಡರು ಸೈದ್ಧಾಂತಿಕ, ರಾಜಕೀಯ ಮತ್ತು ಚುನಾವಣಾ ರಾಜಕೀಯದಲ್ಲಿ ಪ್ರಬಲ ಹೋರಾಟ ನಡೆಸುವಂತೆ ಸಜ್ಜುಗೊಳಿಸಲು ಜಿಲ್ಲಾ ಸಮಿತಿಗಳನ್ನೇ ಕೇಂದ್ರ ಸ್ಥಾನವಾಗಿ ರೂಪಿಸುವ ಕುರಿತು ಕಾಂಗ್ರೆಸ್ ಹೈಕಮಾಂಡ್ ಚಿಂತನೆ ನಡೆಸಿದೆ.

ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಿ ಅವುಗಳನ್ನು ಬಲಪಡಿಸಲಾಗುವುದು. ಹೋರಾಟದ ರೂಪುರೇಷೆಯನ್ನು ಸ್ಥಳೀಯವಾಗಿ ಸಮಿತಿಯ ನಾಯಕರೇ ನಿರ್ಧರಿಸುವರು ಎಂದು ಪಕ್ಷದ ಮೂಲಗಳು ತಿಳಿಸಿವೆ. ಈ ಕುರಿತ ರೂಪುರೇಷೆ ಚರ್ಚಿಸಲು ಪಕ್ಷದ ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಉಸ್ತುವಾರಿಗಳ ಸಭೆ ಇಲ್ಲಿ ನಡೆಯಿತು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಭಾಗವಹಿಸಿದ್ದರು. ಸ್ಥಳೀಯವಾಗಿಯೇ ನಿರ್ಧಾರ ಕೈಗೊಳ್ಳುವ ಅಧಿಕಾರ ನೀಡುವುದು ಸೇರಿ ಜಿಲ್ಲಾ ಸಮಿತಿ ಬಲಪಡಿಸುವ ಚರ್ಚೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಚುನಾವಣಾ ನಿರ್ವಹಣೆ ಮತ್ತು ಜಿಲ್ಲಾ ಕೇಂದ್ರಿತ ನಾಯಕತ್ವಕ್ಕೆ ಹೆಚ್ಚಿನ ಒತ್ತು ನೀಡುವುದರ ಕುರಿತು ಡಿಸೆಂಬರ್ 26ರಂದು ಕರ್ನಾಟಕದ ಬೆಳಗಾವಿಯಲ್ಲಿ ನಡೆದಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯು ತಿಳಿಸಿತು.

ಬುಧವಾರ ನಡೆದ ಸಭೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಪಾಲ್ಗೊಂಡಿದ್ದರು. ಸಾಂಸ್ಥಿಕ ಸಂಘಟನೆಯಲ್ಲಿ ಮಾಡಬೇಕಾಗಿರುವ ಬದಲಾವಣೆ ಹಾಗೂ ರಾಜ್ಯಗಳಲ್ಲಿ ಕಾರ್ಯಾಗಾರ ಆಯೋಜಿಸುವ ಕುರಿತು ಚರ್ಚಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಜಿಲ್ಲಾ ಕಾಂಗ್ರೆಸ್ ಸಮಿತಿ ಬಲಪಡಿಸುವ ಕುರಿತು ಚರ್ಚೆ ನಡೆಯಿತು ಎಂದು ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್ ತಿಳಿಸಿದರು.

ನೂತನ ಪದಾಧಿಕಾರಿಗಳ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಎಚ್ಚರಿಕೆ

'ಚುನಾವಣಾ ಫಲಿತಾಂಶ: ನಾಯಕರೇ ಹೊಣೆ'

ನವದೆಹಲಿ(ಪಿಟಿಐ): ಭವಿಷ್ಯದ ಚುನಾವಣೆಗಳ ಫಲಿತಾಂಶಕ್ಕೆ ಸಂಬಂಧಿಸಿ ಪಕ್ಷದ ಉನ್ನತ ನಾಯಕರನ್ನೇ ಉತ್ತರದಾಯಿಯಾಗಿ ಮಾಡಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ಖಡಕ್ ಎಚ್ಚರಿಕೆ ನೀಡಿದ್ದಾರೆ.

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಕಳಪೆ ಸಾಧನೆ ಪ್ರಸ್ತಾಪಿಸಿರುವ ಅವರು, ಪಕ್ಷಾಂತರ ಮಾಡಿ, ಕಾಂಗ್ರೆಸ್‌ಗೆ ಸೇರ್ಪಡೆಯಾಗಿರುವವರ ಬಗ್ಗೆಯೂ ಎಚ್ಚರಿಕೆಯಿಂದ ಇರಬೇಕು ಎಂದೂ ಸೂಚಿಸಿದ್ದಾರೆ.

ಇಂದಿರಾ ಭವನದಲ್ಲಿರುವ ಪಕ್ಷದ ಕೇಂದ್ರ ಕಚೇರಿಯಲ್ಲಿ ನೂತನ 11 ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಉಸ್ತುವಾರಿಗಳು ಹಾಗೂ ಹಿರಿಯ ನಾಯಕರೊಂದಿಗೆ ನಡೆಸಿದ ಸಭೆಯಲ್ಲಿ ಅವರು ಈ ಮಾತು ಹೇಳಿದ್ದಾರೆ.

'ಹೊಣೆಗಾರಿಕೆ ಎಂಬುದು ಮಹತ್ವದ ವಿಚಾರವಾಗಿದ್ದು, ಈ ಕುರಿತು ನಿಮ್ಮೊಂದಿಗೆ ಮಾತನಾಡಲು ಬಯಸುವೆ. ರಾಜ್ಯಗಳಲ್ಲಿ ಪಕ್ಷದ ಮರುಸಂಘಟನೆ ಹಾಗೂ ಭವಿಷ್ಯದಲ್ಲಿ ನಡೆಯುವ ಚುನಾವಣೆಗಳಲ್ಲಿ ಪಕ್ಷದ ಫಲಿತಾಂಶಗಳಿಗೆ ಸಂಬಂಧಿಸಿ ನಿಮ್ಮನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು' ಎಂದು ನೂತನ ಪದಾಧಿಕಾರಿಗಳನ್ನು ಉದ್ದೇಶಿಸಿ ಹೇಳಿದರು.

'ಪಕ್ಷದ ಮುಖಂಡರು ಬೇರು ಮಟ್ಟದಿಂದ ಪಕ್ಷ ಸಂಘಟನೆ ಮಾಡಬೇಕು. ಬೂತ್ ಮಟ್ಟದಿಂದ ಹಿಡಿದು ಕೇಂದ್ರ ಕಚೇರಿ ವರೆಗೆ ಪಕ್ಷ ಬಲಪಡಿಸುವ ಜವಾಬ್ದಾರಿ ನಿಮ್ಮದು' ಎಂದು ಹೇಳಿದರು.

'ಇತರ ಪಕ್ಷಗಳಿಂದ ಬರುವವರನ್ನು ಅವಸರದಲ್ಲಿ ಸೇರ್ಪಡೆ ಮಾಡಿಕೊಳ್ಳಬೇಡಿ. ಪಕ್ಷದ ಸಿದ್ಧಾಂತಕ್ಕೆ ಬದ್ಧರಾಗಿರುವವರು ಹಾಗೂ ಕಷ್ಟದ ಸಮಯದಲ್ಲಿ ಪಕ್ಷದೊಂದಿಗೆ ಗಟ್ಟಿಯಾಗಿ ನಿಲ್ಲುವವರನ್ನು ಸೇರ್ಪಡೆ ಮಾಡಿಕೊಳ್ಳಬೇಕು' ಎಂದು ಪ್ರಧಾನ ಕಾರ್ಯದರ್ಶಿಗಳು ಹಾಗೂ ಉಸ್ತುವಾರಿಗಳಿಗೆ ಸೂಚಿಸಿದರು.

ಸಂಘಟನಾತ್ಮಕವಾಗಿ ಪಕ್ಷದಲ್ಲಿ ಬದಲಾವಣೆಗೆ ಚಾಲನೆ ನೀಡಲಾಗಿದೆ. ಬರುವ ದಿನಗಳಲ್ಲಿ ಮತ್ತಷ್ಟು ಬದಲಾವಣೆಗಳನ್ನು ಮಾಡಲಾಗುವುದು ಎಂಬ ಸುಳಿವನ್ನೂ ನೀಡಿದ್ದಾರೆ.

ನಾಯಕರಾದ ರಾಹುಲ್ ಗಾಂಧಿ, ಪಕ್ಷದ ಎಲ್ಲ ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಘಟಕಗಳ ಉಸ್ತುವಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.


ನವದೆಹಲಿಯಲ್ಲಿ ಪಕ್ಷದ ಕೇಂದ್ರ ಕಚೇರಿಯಲ್ಲಿ ಬುಧವಾರ ಆಯೋಜಿಸಿದ್ದ ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಉಸ್ತುವಾರಿಗಳ ಸಭೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ಕೆ.ಸಿ.ವೇಣುಗೋಪಾಲ್ ಹಾಗೂ ರಾಹುಲ್ ಗಾಂಧಿ ಬಂದ ಕ್ಷಣ ಪಿಟಿಐ ಚಿತ್ರ

ಖರ್ಗೆ ಮಾತಿನ ಪ್ರಮುಖಾಂಶಗಳು

- ದೆಹಲಿ ಮತದಾರರು ಬದಲಾವಣೆಗಾಗಿ ಮತ ಚಲಾಯಿಸಿದ್ದಾರೆ. ಸೀಮಿತ ಸಂಪನ್ಮೂಲಗಳ ಹೊರತಾಗಿಯೂ ಪಕ್ಷವು ಉತ್ತಮ ಸಾಧನೆ ಮಾಡಿದೆ. ಪಕ್ಷದ ರಾಜ್ಯ ಘಟಕದ ನಾಯಕತ್ವದ ಪ್ರಯತ್ನ ಶ್ಲಾಘನೀಯ
- ಮುಂದಿನ ಐದು ವರ್ಷ ದೆಹಲಿಯ ಜನರ ಹಿತಾಸಕ್ತಿ ಒಳಗೊಂಡ ವಿಚಾರಗಳನ್ನು ಮುಂದಿಟ್ಟುಕೊಂಡು ಪಕ್ಷದ ನಾಯಕರು ಹೋರಾಟ ನಡೆಸುವ ಮೂಲಕ ಪಕ್ಷವು ಪ್ರಮುಖ ವಿರೋಧ ಪಕ್ಷವಾಗಿ ಹೊರಹೊಮ್ಮುವಂತೆ ಮಾಡಲು ಶ್ರಮಿಸಬೇಕು
- ನಾಯಕರು ಬೂತ್‌ಗಳಿಗೆ ತೆರಳಿ, ಕಾರ್ಯಕರ್ತರೊಂದಿಗೆ ಸಂವಾದ ನಡೆಸಬೇಕು. ಪಕ್ಷದ ವಿವಿಧ ಘಟಕಗಳನ್ನು ತೊಡಗಿಸಿಕೊಳ್ಳಬೇಕು. ವಿಶೇಷವಾಗಿ, ಪಕ್ಷ ಸಂಘಟನೆಯಲ್ಲಿ ಇಂಟಕ್ ಅನ್ನು ತೊಡಗಿಸಿಕೊಳ್ಳಬೇಕು
- 'ಸಂವಿಧಾನ ಉಳಿಸಿ ಅಭಿಯಾನ' ಮುಂದಿನ ವರ್ಷದವರೆಗೆ ಮುಂದುವರಿಯಲಿದೆ. ಈ ಅಭಿಯಾನದ ಭಾಗವಾಗಿ ಪಾದಯಾತ್ರೆ, ಸಂವಾದ, ಬೀದಿ ಬದಿ ಸಭೆಗಳನ್ನು ನಡೆಸಬೇಕು. ಇಂತಹ ಪ್ರತಿ ಕಾರ್ಯಕ್ರಮದ ಗುರಿ ಸಂಘಟನೆ ಬಲಪಡಿಸುವುದೇ ಆಗಿರಬೇಕು

ಪ್ರೊ ಲೀಗ್ ಹಾಕಿ ಟೂರ್ನಿ: ವನಿತೆಯರಿಗೆ ಹ್ಯಾಟ್ರಿಕ್ ಸೋಲು

ಗುರ್ಜಂತ್ ಮಿಂಚು: ಭಾರತಕ್ಕೆ ಜಯ

ಭುವನೇಶ್ವರ (ಪಿಟಿಐ): ಅನುಭವಿ ಫಾರ್ವರ್ಡ್ ಆಟಗಾರ ಗುರ್ಜಂತ್ ಸಿಂಗ್ ಗಳಿಸಿದ ಗೋಲಿನ ನೆರವಿನಿಂದ ಭಾರತ ಪುರುಷರ ತಂಡವು ಬುಧವಾರ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಪಂದ್ಯದಲ್ಲಿ 1–0 ಗೋಲುಗಳಿಂದ ವಿಶ್ವ ಚಾಂಪಿಯನ್ ಜರ್ಮನಿ ತಂಡವನ್ನು ಮಣಿಸಿತು.

ಮಂಗಳವಾರ ಇದೇ ತಂಡದ ವಿರುದ್ಧ 1–4 ಗೋಲುಗಳಿಂದ ಸೋತಿದ್ದ ಹರ್ಮನ್‌ಪ್ರೀತ್ ಬಳಗವು ಮರು ಲೆಗ್‌ನ ಪಂದ್ಯದಲ್ಲಿ ಅದ್ಭುತ ಪುನರಾಗಮನ-ದೊಂದಿಗೆ ಸಾಂಘಿಕ ಆಟ ಪ್ರದರ್ಶಿಸಿ ಮುಯ್ಯಿ ತೀರಿಸಿಕೊಂಡಿತು.

ಕಳಿಂಗ ಹಾಕಿ ಕ್ರೀಡಾಂಗಣದಲ್ಲಿ ನಡೆದ ಹಣಾಹಣಿಯಲ್ಲಿ ಗುರ್ಜಂತ್ ನಾಲ್ಕನೇ ನಿಮಿಷದಲ್ಲಿ ಫೀಲ್ಡ್ ಗೋಲು ಗಳಿಸಿ, ಗೆಲುವಿನ ರೂವಾರಿಯಾದರು. ಸ್ಪೇನ್ ವಿರುದ್ಧವೂ ಭಾರತ ಮೊದಲ ಪಂದ್ಯ ಸೋತು, ಎರಡನೇಯದ್ದರಲ್ಲಿ ಜಯಭೇರಿ ಬಾರಿಸಿತ್ತು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ವಿಜೇತ ಭಾರತ ತಂಡವು ಹಿಂದಿನ ಪಂದ್ಯದಲ್ಲಿ ಎಸಗಿದ್ದ ರಕ್ಷಣಾ ವಿಭಾಗದ ದೋಷಗಳನ್ನು ತಿದ್ದಿಕೊಂಡು ಕಣಕ್ಕೆ ಇಳಿದಿತ್ತು. ಪಂದ್ಯ ಆರಂಭವಾದ ಕೆಲವೇ ನಿಮಿಷದಲ್ಲಿ ಗುರ್ಜಂತ್ ಚೆಂಡನ್ನು ಗುರಿ ಸೇರಿಸಿ, ಭಾರತ ತಂಡಕ್ಕೆ 1–0 ಮುನ್ನಡೆ ಒದಗಿಸಿದರು.

ಒಲಿಂಪಿಕ್ಸ್ ಬೆಳ್ಳಿ ವಿಜೇತ ಜರ್ಮನಿ ತಂಡವು ಮೊದಲ ಲೆಗ್ ಪಂದ್ಯದಲ್ಲಿ ಸುಲಭ ಜಯ ಪಡೆದು ಆತ್ಮವಿಶ್ವಾಸದೊಂದಿಗೆ ಸ್ಪರ್ಧೆಗಿಳಿದಿತ್ತು. ಆದರೆ, ಭಾರತ ತಂಡದ ಆಟಗಾರರು ಚುರುಕಿನ ಆಟದ ಮೂಲಕ ಪಂದ್ಯದುದ್ದಕ್ಕೂ ಹಿಡಿತ ಸಾಧಿಸಿದರು.

ಸೋಲನ್ನು ತಪ್ಪಿಸಲು ನಾಲ್ಕನೇ ಕ್ವಾರ್ಟರ್‌ನಲ್ಲಿ ಜರ್ಮನಿ ಆಟಗಾರರು ಸಾಕಷ್ಟು ಪ್ರಯತ್ನಪಟ್ಟರು. ಕೊನೆಯ ಕ್ವಾರ್ಟರ್‌ನಲ್ಲಿ ಐದು ಪೆನಾಲ್ಟಿ ಕಾರ್ನರ್ ಅವಕಾಶಗಳು ಜರ್ಮನಿ ತಂಡಕ್ಕೆ ಲಭಿಸಿತ್ತು. ಆದರೆ, ಭಾರತದ ರಕ್ಷಣಾ ಆಟಗಾರರು ತಡೆಗೋಡೆಯಂತೆ ನಿಂತು ಎದುರಾಳಿಗಳ ಪ್ರಯತ್ನಗಳನ್ನು ವಿಫಲಗೊಳಿಸಿದರು. ಭಾರತವೂ ಎರಡು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಕೈಚೆಲ್ಲಿತು.

ಆಡಿರುವ ನಾಲ್ಕು ಪಂದ್ಯಗಳಲ್ಲಿ ಎರಡನ್ನು ಗೆದ್ದು, ಮತ್ತೆರಡಲ್ಲಿ ಸೋತಿರುವ ಭಾರತ ತಂಡವು 6 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದೆ. ಜರ್ಮನಿ ತಂಡವು (7) ಐದನೇ ಸ್ಥಾನದಲ್ಲಿದೆ. ನೆದರ್ಲೆಂಡ್ಸ್ (14), ಇಂಗ್ಲೆಂಡ್ (13) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ.

ಭಾರತ ಶುಕ್ರವಾರ ಐರ್ಲೆಂಡ್ ತಂಡವನ್ನು ಎದುರಿಸಲಿದೆ. ಆ ತಂಡವು ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ.



ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ಹಾಕಿ ತಂಡದ ಆಟಗಾರರು

ಸಲಿಮಾ ಟೆಟೆ ಬಳಗಕ್ಕೆ ನಿರಾಸೆ

ಭಾರತದ ವನಿತೆಯರ ತಂಡ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಹ್ಯಾಟ್ರಿಕ್ ಸೋಲು ಕಂಡಿತು. ಬುಧವಾರ ನಡೆದ ಪಂದ್ಯದಲ್ಲಿ 0–1 ಗೋಲುಗಳಿಂದ ಸ್ಪೇನ್ ತಂಡಕ್ಕೆ ಶರಣಾಯಿತು.

ಸಲಿಮಾ ಟೆಟೆ ಬಳಗವು 3–2ರಿಂದ ಇಂಗ್ಲೆಂಡ್ ತಂಡವನ್ನು ಸೋಲಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದರು. ಆದರೆ, ನಂತರ ಸತತ ಮೂರು ಪಂದ್ಯಗಳಲ್ಲಿ ಪರಾಭವಗೊಂಡರು.

ಮಂಗಳವಾರ ಸ್ಪೇನ್ ವಿರುದ್ಧ ಒಂದು ಗೋಲಿನ ಅಂತರದಿಂದ (3–4) ಸೋತಿದ್ದ ಭಾರತದ ಮಹಿಳೆಯರು, ರಿವರ್ಸ್ ಲೆಗ್ ಪಂದ್ಯದಲ್ಲೂ ನಿರಾಸೆ ಅನುಭವಿಸಿದರು.

ಸೆಗು ಮಾರ್ಟ್ ಅವರು 48ನೇ ನಿಮಿಷದಲ್ಲಿ ಸ್ಪೇನ್ ಪರ ಗೆಲುವಿನ ಗೋಲು ದಾಖಲಿಸಿದರು.

ಭಾರತ ತಂಡವು ಶುಕ್ರವಾರ ಪ್ರಬಲ ಜರ್ಮನಿ ತಂಡವನ್ನು ಎದುರಿಸಲಿದೆ.

ರಣಜಿ ಟ್ರೋಫಿ: ವಿದರ್ಭ ಉತ್ತಮ ಮುನ್ನಡೆ

ನಾಗಪುರ(ಪಿಟಿಐ): ಯಶ್ ರಾಥೋಡ್ (ಬ್ಯಾಟಿಂಗ್ 59) ಅವರ ಅರ್ಧಶತಕದ ಬಲದಿಂದ ವಿದರ್ಭ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ಸೆಮಿಫೈನಲ್‌ನಲ್ಲಿ ಮುಂಬೈ ತಂಡಕ್ಕೆ ದೊಡ್ಡ ಗುರಿಯೊಡ್ಡುವತ್ತ ದಾಪುಗಾಲಿಟ್ಟಿದೆ.

ಮೊದಲ ಇನಿಂಗ್ಸ್‌ನಲ್ಲಿ ವಿದರ್ಭ ತಂಡವು 383 ರನ್ ಗಳಿಸಿತ್ತು. ಮುಂಬೈನ ಆಕಾಶ್ ಆನಂದ್ (106; 256ಎ, 4X11) ಅವರ ಶತಕದ ಹೊರತಾಗಿಯೂ ಮುಂಬೈ ತಂಡವು 270 ರನ್‌ಗಳಿಗೆ ಆಲೌಟ್ ಆಯಿತು. ಇದರಿಂದಾಗಿ ವಿದರ್ಭ ಮೊದಲ ಇನಿಂಗ್ಸ್‌ನಲ್ಲಿ 113 ರನ್‌ಗಳ ಮುನ್ನಡೆ ಸಾಧಿಸಿತು.

ಎರಡನೇ ಇನಿಂಗ್ಸ್ ಆರಂಭಿಸಿದ ವಿದರ್ಭ ತಂಡಕ್ಕೆ ಶಮ್ಸ್ ಮುಲಾನಿ (50ಕ್ಕೆ2), ಶಾರ್ದೂಲ್ ಠಾಕೂರ್ (14ಕ್ಕೆ1) ಮತ್ತು ತನುಷ್ ಕೋಟ್ಯಾನ್ (33ಕ್ಕೆ1) ಅವರು ಪೆಟ್ಟು ಕೊಟ್ಟರು. ಕನ್ನಡಿಗ ಕರುಣ್ ನಾಯರ್ ಕೇವಲ 6 ರನ್ ಗಳಿಸಿ ಔಟಾದರು.

ಈ ಹೊತ್ತಿನಲ್ಲಿ ಗಟ್ಟಿಯಾಗಿ ನಿಂತ ಯಶ್ ರಾಥೋಡ್ ಮತ್ತು ನಾಯಕ ಅಕ್ಷಯ್ ವಾಡ್ಕರ್ (ಬ್ಯಾಟಿಂಗ್ 31, 102ಎ) ತಂಡದ ಹೋರಾಟಕ್ಕೆ ಬಲ ತುಂಬಿದರು. ಇದರಿಂದಾಗಿ ದಿನದಾಟದ ಮುಕ್ತಾಯಕ್ಕೆ ವಿದರ್ಭ ತಂಡವು 53 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 147 ರನ್ ಗಳಿಸಿತು. ಒಟ್ಟು 260 ರನ್‌ಗಳ ಮುನ್ನಡೆ ಸಾಧಿಸಿತು. ಪಂದ್ಯದಲ್ಲಿ ಇನ್ನೂ ಎರಡು ದಿನಗಳ ಆಟ ಬಾಕಿ ಇದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 107.5 ಓವರ್‌ಗಳಲ್ಲಿ 383. ಮುಂಬೈ: 92 ಓವರ್‌ಗಳಲ್ಲಿ 270 (ಆಕಾಶ್ ಆನಂದ್ 106, ತನುಷ್ ಕೋಟ್ಯಾನ್ 33, ಪಾರ್ಥ್ ರೇಖಡೆ 55ಕ್ಕೆ4, ಯಶ್ ಠಾಕೂರ್ 73ಕ್ಕೆ2, ಹರ್ಷ ದುಬೆ 68ಕ್ಕೆ2) ಎರಡನೇ ಇನಿಂಗ್ಸ್: ವಿದರ್ಭ: 53 ಓವರ್‌ಗಳಲ್ಲಿ 4ಕ್ಕೆ147 (ದಾನೀಶ್ ಮಳೆವಾರ್ 29, ಯಶ್ ರಾಥೋಡ್ ಬ್ಯಾಟಿಂಗ್ 59, ಅಕ್ಷಯ್ ವಾಡ್ಕರ್ ಬ್ಯಾಟಿಂಗ್ 31, ಶಮ್ಸ್ ಮುಲಾನಿ 50ಕ್ಕೆ2)


ಯಶ್ ರಾಥೋಡ್ ಬ್ಯಾಟಿಂಗ್

ಪಾಂಚಾಲ್ ಶತಕ

ಅಹಮದಾಬಾದ್ (ಪಿಟಿಐ): ಆರಂಭಿಕ ಬ್ಯಾಟರ್ ಪ್ರಿಯಾಂಕ್ ಪಾಂಚಾಲ್ (ಬ್ಯಾಟಿಂಗ್ 117; 200ಎ, 4X13, 6X1) ಅವರ ಅಮೋಘ ಶತಕದ ಬಲದಿಂದ ಗುಜರಾತ್ ತಂಡವು ಕೇರಳ ತಂಡದ ವಿರುದ್ಧದ ಸೆಮಿಫೈನ-ಲ್‌ನಲ್ಲಿ ಮರುಹೋರಾಟ ನಡೆಸಿದೆ.

ಕೇರಳ ತಂಡವು ಮೊದಲ ಇನಿಂಗ್ಸ್‌ನಲ್ಲಿ 187 ಓವರ್‌ಗಳಲ್ಲಿ 457 ರನ್ ಗಳಿಸಿತು. ಅದಕ್ಕುತ್ತರವಾಗಿ ಗುಜರಾತ್ ಬುಧವಾರ ದಿನದಾಟದ ಅಂತ್ಯಕ್ಕೆ 71 ಓವರ್‌ಗಳಲ್ಲಿ 1 ವಿಕೆಟ್‌ಗೆ 222 ರನ್ ಗಳಿಸಿತು. ಪಾಂಚಾಲ್ ಮತ್ತು ಮನನ್ ಹಿಂಗರಜಿಯಾ (ಬ್ಯಾಟಿಂಗ್ 30) ಕ್ರೀಸ್‌ನಲ್ಲಿದ್ದಾರೆ. ಪಾಂಚಾಲ್ ಮತ್ತು ಆರ್ಯ ದೇಸಾಯಿ (73; 118ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 131 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೇರಳ: 187 ಓವರ್‌ಗಳಲ್ಲಿ 457 (ಮೊಹಮ್ಮದ್ ಅಜರುದ್ದೀನ್ ಔಟಾಗದೆ 177, ಸಲ್ಮಾನ್ ನಿಜರ್ 52, ಚಿಂತನ್ ಗಜ 75ಕ್ಕೆ2) ಗುಜರಾತ್: 71 ಓವರ್‌ಗಳಲ್ಲಿ 1 ವಿಕೆಟ್‌ಗೆ 222 (ಪ್ರಿಯಾಂಕ್ ಪಾಂಚಾಲ್ ಬ್ಯಾಟಿಂಗ್ 117, ಆರ್ಯ ದೇಸಾಯಿ 73, ಮನನ್ ಹಿಂಗರಾಜಿಯಾ ಬ್ಯಾಟಿಂಗ್ 30)